# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ ಶುಕ್ರವಾರ, ಜನವರಿ 08, 2021

ಸಂಪುಟ : 47 ಸಂಚಿಕೆ : 249 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com




**ಪೂಜಾ ಕುಣಿತ** ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಗುರುವಾರ ಸಂಜೆ ದಾವಣಗೆರೆಯ ಶ್ರೀ ಶಿವಯೋಗ ಮಂದಿರದ ಆವರಣದಲ್ಲಿ ಏರ್ಪಡಾಗಿದ್ದ ಮಹಿಳಾ ಸಾಂಸ್ಕೃತಿಕ ಉತ್ಸವದಲ್ಲಿ ಪೂಜಾ ಕುಣಿತದ ದೃಶ್ಯ ಪ್ರೇಕ್ಷಕರನ್ನು ಹಿಡಿದಿಟ್ಟುಕೊಂಡಿತ್ತು.

# ಟ್ರಂಪ್ ಬೆಂಬಲಿಗರ ಪುಂಡಾಟ

## ಶಾಸನಸಭೆಗೆ ನುಗ್ಗಿ ಗಲಾಟೆ, ಪೊಲೀಸರ ಜೊತೆ ಘರ್ಷಣೆ, ನಾಲ್ವರ ಸಾವು

ವಾಷಿಂಗ್ಟನ್, ಜ. 7 – ಅಮೆರಿಕದ ಪರಾಜಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬೆಂಬಲಿಗರು ಶಾಸನ ಸಭೆಗಳಿರುವ ಅಧಿಕಾರ ಕೇಂದ್ರ ಕ್ಯಾಪಿಟಲ್ ಹಿಲ್‌ಗೆ ನುಗ್ಗಿ ಪೊಲೀಸರ ಜೊತೆ ಘರ್ಷಣೆ ನಡೆಸಿದ್ದಾರೆ. ಅಧಿಕಾರ ಹಸ್ತಾಂತರ ಪ್ರಕ್ರಿಯೆಗೆ ಅಡ್ಡಿಪಡಿಸಲು ನಡೆಸಲಾದ ಘರ್ಷಣೆಯಲ್ಲಿ ನಾಲ್ವರು ಸಾವನ್ನಪ್ಪಿದ್ದಾರೆ.

ಅಮೆರಿಕದ ಇತಿಹಾಸದಲ್ಲಿ ಪ್ರಜಾಪ್ರಭುತ್ವದ ಮೇಲೆ ನಡೆದ ಅಭೂತಪೂರ್ವ ಹಲ್ಲೆ ಇದಾಗಿದೆ. ಈ ನಡುವೆಯೇ, ಎಲೆಕ್ಟೋರಲ್ ಕಾಲೇಜ್‌ನಲ್ಲಿ ಜೋ ಬಿಡೆನ್ ಅಧ್ಯಕ್ಷರಾಗಲು ಬಹುಮತ ಗಳಿಸಿರುವುದಕ್ಕೆ ಸೆನೆಟ್ ಹಾಗೂ ಜನಪ್ರತಿನಿಧಿಗಳ ಸದನಗಳು ಅಂಗೀಕರಿಸಿವೆ. ರಿಪಬ್ಲಿಕನ್ನರು ಪೆನ್ಸಿಲ್ವೇನಿಯಾ ಹಾಗೂ ಅರಿಜೋನಾಗಳಲ್ಲಿ ನಡೆದ ಮತದಾನದ ಬಗ್ಗೆ ವ್ಯಕ್ತಪಡಿಸಿದ್ದ ಎಲ್ಲ ಆಕ್ಷೇಪಗಳನ್ನು ತಳ್ಳಿ ಹಾಕಲಾಗಿದೆ.

ಬುಧವಾರದಂದು ಕ್ಯಾಪಿಟಲ್ ಹಿಲ್‌ನಲ್ಲಿ ಟ್ರಂಪ್ ಬೆಂಬಲಿಗರು ಘರ್ಷಣೆ ನಡೆಸಿದ್ದಾರೆ. ಆಗ ಪೊಲೀಸರು ಗುಂಡು ಹಾರಿಸಿದಾಗ ಇಬ್ಬರು ಮಹಿಳೆಯರು ಸೇರಿದಂತೆ ನಾಲ್ವರು ಸಾವನ್ನಪ್ಪಿದ್ದಾರೆ. ಹತ್ತಾರು





ಪ್ರತಿಭಟನಾಕಾರರನ್ನು ಬಂಧಿಸಲಾಗಿದೆ.

ಟ್ರಂಪ್ ಪರ ಬೆಂಬಲಿಗರು ನಡೆಸಿದ ಪ್ರತಿಭಟನೆ ನಾಚಿಕೆಗೇಡಿನದು ಎಂದು ಮೆಟ್ರೋಪಾಲಿಟನ್ ಪೊಲೀಸ್ ಇಲಾಖೆಯ ಮುಖ್ಯಸ್ಥ ರಾಬರ್ಟ್ ಕೊಂಟೀ ತಿಳಿಸಿದ್ದಾರೆ.

ಈ ಘಟನೆಯ ನಂತರ ಹೇಳಿಕೆ ಬಿಡುಗಡೆ ಮಾಡಿರುವ ಟ್ರಂಪ್, ಚುನಾವಣೆಯಲ್ಲಿ ತಮಗೆ ಸೋಲಾಗಿದೆ ಎಂಬುದನ್ನು ಒಪ್ಪಿಕೊಂಡಿದ್ದಾರೆ. ಫಲಿತಾಂಶದ ಬಗ್ಗೆ ತಾವು ಒಪ್ಪದೇ ಇದ್ದರೂ, ಜನವರಿ 20ರಂದು ಸುಯೋಜಿತವಾಗಿ ಅಧಿಕಾರ ಹಸ್ತಾಂತರ ಮಾಡುವುದಾಗಿ ಹೇಳಿದ್ದಾರೆ.

ಟ್ರಂಪ್ ಬೆಂಬಲಿಗರು ಕ್ಯಾಪಿಟಲ್‌ಗೆ ನುಗ್ಗಿದ ಕಾರಣ ಅಮೆರಿಕದ ಶಾಸಕಾಂಗ ಸದನವಾದ ಕಾಂಗ್ರೆಸ್‌ನ ಜಂಟಿ ಅಧಿವೇಶನ (5ನೇ ಪುಟಕ್ಕೆ)

# ರಸ್ತೆಗಿಂತ ಅಂಗನವಾಡಿ ನಿರ್ಮಾಣಕ್ಕೆ ಆದ್ಯತೆ

**ಗೋವಿಂದ ಕಾರಜೋಳ ಸೂಚನೆ**

ದಾವಣಗೆರೆ, ಜ. 7 - ಲೋಕೋಪಯೋಗಿ ಇಲಾಖೆಯ ಎಸ್‌ಸಿಪಿ - ಟಿಎಸ್‌ಪಿ ಅನುದಾನದಲ್ಲಿ ರಸ್ತೆಗಳಿಗಿಂತ ಅಂಗನವಾಡಿ, ಶಾಲೆಗಳು ಹಾಗೂ ಸಮುದಾಯ ಭವನಗಳಂತಹ ಕಟ್ಟಡಗಳ ನಿರ್ಮಾಣಕ್ಕೆ ಆದ್ಯತೆ ನೀಡಿ ಎಂದು ಉಪಮುಖ್ಯಮಂತ್ರಿ ಹಾಗೂ ಲೋಕೋಪಯೋಗಿ ಸಚಿವ ಗೋವಿಂದ ಕಾರಜೋಳ ಹೇಳಿದರು.


ಗುರುವಾರ ಜಿಲ್ಲಾಡಳಿತ ಕಚೇರಿಯಲ್ಲಿ ನಡೆದ ಲೋಕೋಪಯೋಗಿ ಇಲಾಖೆಯ ದಾವಣಗೆರೆ ವಿಭಾಗದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಬಹಳಷ್ಟು ಇಲಾಖೆಗಳು ರಸ್ತೆ, ಚರಂಡಿ ಕಾಮಗಾರಿಗಳಿಗೆ ಹಣ ನೀಡುವುದರಿಂದ ಕಾಮಗಾರಿಗಳು ಆದ ಕಡೆಯಲ್ಲಿಯೇ ಮತ್ತೆ ಮತ್ತೆ ಆಗುವುದರಿಂದ ಪ್ರಯೋಜನವಿಲ್ಲ ಎಂದವರು ಹೇಳಿದರು. (2ನೇ ಪುಟಕ್ಕೆ)

# ಇಂದು ಕೊರೊನಾ ತಾಲೀಮು

## ಲಸಿಕೆಗೆ 17,651 ಆರೋಗ್ಯ ಸಿಬ್ಬಂದಿಯ ಹೆಸರು ನೋಂದಣಿ

ದಾವಣಗೆರೆ, ಜ. 7 - ನಾಳೆ ಶುಕ್ರವಾರ ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 1.30 ರವರೆಗೆ ಜಿಲ್ಲೆಯ ಸಂಸ್ಥೆಗಳಲ್ಲಿ ಕೊರೊನಾ ಲಸಿಕೆ ತಾಲೀಮು ನಡೆಸಲಾಗುವುದು ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದರು.

ತಮ್ಮ ಕಚೇರಿಯಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದ ಚಿಗಟೇರಿ ಜಿಲ್ಲಾ ಆಸ್ಪತ್ರೆ, ಭಾಷನಗರದ ನಗರ ಆರೋಗ್ಯ ಕೇಂದ್ರ, ಎಸ್.ಎಸ್.ಐ.ಎಂ.ಎಸ್ ವೈದ್ಯಕಿಯ ಮಹಾವಿದ್ಯಾಲಯ, ಹೊನ್ನಾಳಿಯ ಸಾರ್ವಜನಿಕ ಆಸ್ಪತ್ರೆ, ಚನ್ನಗಿರಿ ತಾಲ್ಲೂಕು ಸಂತೆಬೆನ್ನೂರಿನ ಸಮುದಾಯ ಆರೋಗ್ಯ ಕೇಂದ್ರ ಹಾಗೂ ಹರಿಹರ ತಾಲ್ಲೂಕಿನ ಕೊಂಡಜ್ಜಿಯ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಲಸಿಕಾ ತಾಲೀಮು ನಡೆಸಲಾಗುವುದು ಎಂದವರು ತಿಳಿಸಿದ್ದಾರೆ. ವೈದ್ಯರು ವೈದ್ಯಕೀಯ ಸಿಬ್ಬಂದಿ,



ಅಂಬ್ಯುಲೆನ್ಸ್ ವ್ಯವಸ್ಥೆ, ಅಡ್ಡ ಪರಿಣಾಮವಾದಾಗ ಬಳಸುವ ಎ.ಇ.ಎಫ್.ಐ. ಕಿಟ್, ಆನ್‌ಲೈನ್ ನೋಂದಣಿ ವ್ಯವಸ್ಥೆಗಳ ಮೂಲಕ ತಾಲೀಮು ನಡೆಸಲಾಗುತ್ತದೆ ಎಂದವರು ಹೇಳಿದ್ದಾರೆ.

ಈಗಾಗಲೇ 17,651 (4ನೇ ಪುಟಕ್ಕೆ)

# ಮಣ್ಣು ಬೇಡ, ಡಾಂಬರ್ ಹಾಕಿ

ದಾವಣಗೆರೆ, ಜ. 7 - ಡಾಂಬರ್ ರಸ್ತೆಗಳಲ್ಲಿ ಗುಂಡಿ ಕಂಡು ಬಂದರೆ ಮಣ್ಣು ಹಾಕದೇ ಎಂಟು ದಿನಗಳಲ್ಲೇ ಡಾಂಬರ್ ತೇಪೆ ಹಾಕಬೇಕು ಎಂದು ತಾಕೀತು ಮಾಡಿರುವ ಉಪ ಮುಖ್ಯಮಂತ್ರಿ ಹಾಗೂ ಲೋಕೋಪಯೋಗಿ ಸಚಿವ ಗೋವಿಂದ ಕಾರಜೋಳ, ಜನರು ರಸ್ತೆ ಸಂಚಾರ ಮಾಡುವಾಗ ಗುಂಡಿಗಳಿಂದಾಗಿ ಬೈದುಕೊಳ್ಳುವಂತಾಗ ಬಾರದು ಎಂದು ಅಧಿಕಾರಿಗಳಿಗೆ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಈ ಬಗ್ಗೆ ವಿವರ ನೀಡಿರುವ ಉಪ ಮುಖ್ಯಮಂತ್ರಿ, ಜಿಲ್ಲೆಯ 939.51 ಕಿ.ಮೀ. ಮುಖ್ಯ ರಸ್ತೆಗಳಲ್ಲಿ ಶೇ.2ರಷ್ಟು ಕಡೆ ಗುಂಡಿಗಳನ್ನು ಮುಚ್ಚಬೇಕಿದೆ. ಈ ಬಗ್ಗೆ ತ್ವರಿತ ಕ್ರಮಕ್ಕೆ ಸೂಚನೆ ನೀಡಲಾಗಿದೆ ಎಂದಿದ್ದಾರೆ.



ದಾವಣಗೆರೆ - ಹರಿಹರ ರಸ್ತೆಯಲ್ಲಿ ಗುಂಡಿಗಳಿಗೆ ಮಣ್ಣು ಹಾಕುತ್ತಿರುವ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಈ ರಸ್ತೆಯನ್ನು ಕಾಂಕ್ರೀಟ್ ರಸ್ತೆಯಾಗಿ ಮಾಡಲಾಗುತ್ತಿದೆ. ತ್ವರಿತವಾಗಿ ಕಾಮಗಾರಿ ಪೂರ್ಣಗೊಳಿಸಲಾಗುವುದು ಎಂದು ಹೇಳಿದರು.

ಯಡಿಯೂರಪ್ಪ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಜಿಲ್ಲೆಯಲ್ಲಿ ರಸ್ತೆಗಳಿಗೆ 200 ಕೋಟಿ ರೂ. ಬಿಡುಗಡೆ ಮಾಡಲಾಗಿದೆ. ಇವುಗಳಲ್ಲಿ ಕೆಲವು ಕಾಮಗಾರಿಗಳು ಬಾಕಿ ಇದ್ದು, ಮಾರ್ಚ್ (5ನೇ ಪುಟಕ್ಕೆ)

**ಮಾರ್ಚ್ ಒಳಗೆ ಕಾಮಗಾರಿ ಪೂರ್ಣಕ್ಕೆ ಕಾರಜೋಳ ಸೂಚನೆ**

### ಪ್ರವಾಸೋದ್ಯಮಕ್ಕೆ ಪಿಡಬ್ಲ್ಯೂಡಿ ಬಂಗಲೆ

ಪ್ರವಾಸಿ ಬಂಗಲೆಗಳ ನಿರ್ವಹಣೆ ಲೋಕೋಪಯೋಗಿ ಇಲಾಖೆಗೆ ಹೊರೆಯಾಗುತ್ತಿದೆ. ಅಲ್ಲಿ ಸಿಬ್ಬಂದಿ ಕೊರತೆಯಾಗಿದ್ದು, ಕಸ ಗುಡಿಸುವವರೂ ಇಲ್ಲದಂತಾಗಿದೆ. ಈ ಹಿನ್ನೆಲೆಯಲ್ಲಿ ಬಂಗಲೆಗಳನ್ನು ಪ್ರವಾಸೋದ್ಯಮ ಇಲಾಖೆಗೆ ವಹಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದು ಸಚಿವ ಗೋವಿಂದ ಕಾರಜೋಳ ತಿಳಿಸಿದ್ದಾರೆ.

ಪ್ರವಾಸೋದ್ಯಮ ಇಲಾಖೆಗೆ ಬಂಗಲೆ ವಹಿಸುವುದರಿಂದ ನಿರ್ವಹಣೆ ಸುಲಭವಾಗಲಿದೆ, ಜನರಿಗೂ ಅನುಕೂಲವಾಗಲಿದೆ ಎಂದವರು ತಿಳಿಸಿದ್ದಾರೆ. ಇನ್ನು ಮುಂದೆ ಗಣ್ಯರು, ಅಧಿಕಾರಿಗಳು ನಿಯಮಿತ ವಾಗಿ ಭೇಟಿ ನೀಡುವ ಸ್ಥಳಗಳನ್ನು ಹೊರತು ಪಡಿಸಿ ಬೇರೆಡೆ ಪ್ರವಾಸಿ ಬಂಗಲೆ ನಿರ್ಮಿಸದಿರಲು ನಿರ್ಧರಿಸಲಾಗಿದೆ ಎಂದೂ ಅವರು ಹೇಳಿದ್ದಾರೆ.

# ಹಕ್ಕಿಜ್ವರ : ಕಟ್ಟೆಚ್ಚರ ವಹಿಸಲು ಜಿಲ್ಲಾಧಿಕಾರಿ ಬೀಳಗಿ ಸೂಚನೆ

ದಾವಣಗೆರೆ, ಜ. 7 -ನೆರೆಯ ರಾಜ್ಯ ಕೇರಳದಲ್ಲಿ ಹಕ್ಕಿಜ್ವರ ಪ್ರಕರಣಗಳು ಕಂಡುಬಂದಿದ್ದು, ಸರ್ಕಾರದ ನಿರ್ದೇಶನದಂತೆ ಜಿಲ್ಲೆಯಲ್ಲಿ ಅಧಿಕಾರಿಗಳು ತೀವ್ರ ಕಟ್ಟೆಚ್ಚರ ವಹಿಸುವಂತೆ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಸೂಚಿಸಿದ್ದಾರೆ.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಅಧಿಕಾರಿಗಳೊಂದಿಗೆ ಗುರುವಾರ ನಡೆದ ಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ನೆರೆಯ ಕೇರಳ ರಾಜ್ಯದಲ್ಲಿ ಹಕ್ಕಿ ಜ್ವರ ಪ್ರಕರಣಗಳು ಕಂಡುಬಂದಿವೆ. ಕಳೆದ ವರ್ಷ ಮಾರ್ಚ್ ತಿಂಗಳಿನಲ್ಲಿ ಜಿಲ್ಲೆಯಲ್ಲಿಯೂ ಕೆಲವೆಡೆ ಪ್ರಕರಣ ಕಂಡುಬಂದಿತ್ತು. ಸದ್ಯ ಜಿಲ್ಲೆಯಲ್ಲಿ ಅಂತಹ ಯಾವುದೇ ಪ್ರಕರಣ ವರದಿಯಾಗಿಲ್ಲ. ತಹಶೀಲ್ದಾರರು ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲ ಕೋಳಿಫಾರಂ ಗಳಲ್ಲಿ ಪರಿಶೀಲನೆ ನಡೆಸಬೇಕು ಎಂದರು. (4ನೇ ಪುಟಕ್ಕೆ)

# ನಾಡಿನ ವೀರಶೈವ ಮಠಗಳು ಶ್ರೇಷ್ಠ ಪರಂಪರೆಯ ಪೀಠಗಳು: ಕಾರಜೋಳ

**ಹರಿಹರದಲ್ಲಿ ಶ್ರೀಶೈಲ ಸಮುದಾಯ ಭವನಕ್ಕೆ ಚಾಲನೆ ನೀಡಿದ ಸಚಿವ**

ಹರಿಹರ, ಜ7- ನಾಡಿನಲ್ಲಿರುವ ವೀರಶೈವ ಮಠಗಳು ಸರ್ಕಾರದ ಸೌಲಭ್ಯಗಳನ್ನು ನಿರೀಕ್ಷೆ ಮಾಡದೆ, ಶೈಕ್ಷಣಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕವಾಗಿ ವಂಚಿತರಾದವರಿಗೆ ಸಂಸ್ಕಾರವಂತರನ್ನಾಗಿ ಮಾಡಿ ಅಕ್ಷರ ಮತ್ತು ಅನ್ನ ದಾಸೋಹದೊಂದಿಗೆ ಸಮಾಜದ ಬೆಳವಣಿಗೆಗೆ ಅಪಾರವಾದ ಕೊಡುಗೆ ನೀಡುವ ಮೂಲಕ ಶ್ರೇಷ್ಠ ಪರಂಪರೆಯನ್ನು ಹೊಂದಿರುವ ಪೀಠಗಳಾಗಿವೆ ಎಂದು ಉಪ ಮುಖ್ಯಮಂತ್ರಿ ಮತ್ತು ಲೋಕೋ ಪಯೋಗಿ ಸಚಿವ ಗೋವಿಂದ ಕಾರಜೋಳ ಶ್ಲಾಘಿಸಿದರು.

ನಗರದ ಎಸ್.ಜೆ.ವಿ.ಪಿ. ಕಾಲೇಜು ವತಿಯಿಂದ ಶ್ರೀಶೈಲ ಸಮುದಾಯ ಭವನ, ಅತಿಥಿ ಗೃಹ, ವಾಣಿಜ್ಯ ಸಂಕೀರ್ಣ ಹಾಗೂ ಹೊರಾಂಗಣ ಉದ್ಯಾನವನ ಸಭಾ ಭವನದ ಭೂಮಿ ಪೂಜಾ ಸಮಾರಂಭದಲ್ಲಿ ನಾಮಫಲಕ ಅನಾವರಣ ಮಾಡಿ ಅವರು ಮಾತನಾಡಿದರು.

ಶ್ರೀಶೈಲ ಪೀಠಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಚಂದ್ರಗುಪ್ತ ಮೌರ್ಯ ಕಾಲದಿಂದಲೂ ಬಂದ ಭಕ್ತಿಯ ಪರಂಪರೆ ಇಂದಿಗೂ (4ನೇ ಪುಟಕ್ಕೆ)

# ವಿವಾದಕ್ಕೆ ಕಾರಣವಾದ 'ಸನಾತನ' ಪದ ಬಳಕೆ: ಭುಗಿಲೆದ್ದ ಆಕ್ರೋಶ

ದಾವಣಗೆರೆ, ಜ. 7- ಬಸವ ಕಲ್ಯಾಣದಲ್ಲಿ ನೂತನ ಅನುಭವ ಮಂಟಪ ನಿರ್ಮಾಣದ ಶಿಲಾನ್ಯಾಸ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಪತ್ರಿಕೆಗಳಲ್ಲಿ ಪ್ರಕಟವಾದ ಜಾಹೀರಾತಿನಲ್ಲಿ ಸನಾತನ ಪದದ ಬಳಕೆ ಇದೀಗ ವಿವಾದಕ್ಕೆ ಕಾರಣವಾಗಿದೆ.





**ಜಾಮದಾರ್ ಗೊ.ರೂ.ಚ. ಆಕ್ಷೇಪ**

ಸರ್ಕಾರದ ಈ ಜಾಹೀರಾತಿನಲ್ಲಿ 'ಸನಾತನ ಪ್ರಗತಿಪರ' ಎಂದು ಕರೆದಿರುವುದು ಸದ್ಯ ಬಸವ ತತ್ವ ಪಾಲಕರು, ಪ್ರಗತಿ ಪರರು, ಚಿಂತಕರ ಆಕ್ರೋಶಕ್ಕೆ ಕಾರಣವಾಗಿದೆ.


ವೈದಿಕತೆ ಮತ್ತು ಸನಾತನ ಆಚರಣೆಗಳನ್ನು ಬದುಕಿನುದ್ದಕ್ಕೂ ಕಟುವಾಗಿ ವಿರೋಧಿಸುತ್ತಲೇ ಬಂದ ಬಸವಣ್ಣನವರನ್ನು, ಬಸವ ತತ್ವವನ್ನು ಸನಾತನ ತತ್ವ ಎಂದು ಪ್ರತಿಪಾದಿಸಲು ಹೊರಟಿದ್ದಾರೆ ಎಂದು ಬಸವ ತತ್ವ ಪ್ರತಿ ಪಾದಕರು ಕಿಡಿ ಕಾರಿದ್ದಾರೆ.

ಸಾಮಾಜಿಕ ಜಾಲ ತಾಣಗಳಲ್ಲೂ ಈ ಕುರಿತು ಆಕ್ರೋಶ ಭುಗಿಲೆದ್ದಿದ್ದು, ಬಸವಣ್ಣನನ್ನು ಹೇಗೆ ಸನಾತನ ಪ್ರಗತಿಪರ ಎಂದು ಬಿಂಬಿಸುತ್ತೀರಿ ? ಎಂದು ನೆಟ್ಟಿಗರು ಪ್ರಶ್ನಿಸಲಾರಂಭಿಸಿದ್ದಾರೆ.

ಹಿರಿಯ ಸಾಹಿತಿ ಗೊ.ರು ಚನ್ನಬಸಪ್ಪ, ಸನಾತನ ಪ್ರಗತಿಪರ ಚಿಂತನೆಯ ಮರುಸೃಷ್ಟಿಯಲ್ಲ. 'ಶರಣರ ಚಿಂತನೆಯ ಮರುಸೃಷ್ಟಿ' ಅಂತ ಆಗಬೇಕಿತ್ತು ಎಂದಿದ್ದಾರೆ.

**ವಾಕ್ಯವೇ ವಿಚಿತ್ರ- ಜಾಮದಾರ್ :** ಸರ್ಕಾರದ ಜಾಹೀರಾತಿನಲ್ಲಿ 'ಸನಾತನ ಪ್ರಗತಿಪರ ಚಿಂತನೆಯ ಮರು ಸೃಷ್ಟಿ' ವಾಕ್ಯ (2ನೇ ಪುಟಕ್ಕೆ)

### ಮೊಸರಲ್ಲಿ ಕಲ್ಲು ಸಿಕ್ಕಂತಾಯಿತು



'ಅನುಭವ ಮಂಟಪ ನಿರ್ಮಾಣದ ಭೂಮಿ ಪೂಜೆಯನ್ನು ಮುಖ್ಯಮಂತ್ರಿ ನೆರವೇರಿಸುವ ಜಾಹೀರಾತು ನೋಡಿ ಸಂತಸವಾಯಿತು. ಆದರೆ, ಆರಂಭದಲ್ಲೇ ಎದ್ದು ಕಾಣುವ 'ಸನಾತನ' ಎಂಬ ಪದಬಳಕೆ ಗಮನಿಸಿದಾಗ ಮೊಸರಲ್ಲಿ ಕಲ್ಲು ಸಿಕ್ಕಂತಾಯಿತು ಎಂದು ಸಾಣೇಹಳ್ಳಿ ಮಠದ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳಿದ್ದಾರೆ. ಬಸವಕಲ್ಯಾಣದಲ್ಲಿ ನೂತನವಾಗಿ ನಿರ್ಮಿಸುತ್ತಿರುವ ಅನುಭವ ಮಂಟಪದ ಭೂಮಿ ಪೂಜೆ ಕಾರ್ಯಕ್ರಮದ ಜಾಹೀರಾತಿನಲ್ಲಿ ಉಲ್ಲೇಖವಾಗಿರುವ 'ಸನಾತನ' ಪದಕ್ಕೆ ಸ್ವಾಮೀಜಿ ತೀವ್ರ ಆಕ್ಷೇಪ ವ್ಯಕ್ತಪಡಿಸಿ ಮೇಲಿನಂತೆ (2ನೇ ಪುಟಕ್ಕೆ)

## ಐದನೇ ವರ್ಷದ ಪುಣ್ಯಸ್ಮರಣೆ ಹಾಗೂ ಗುರು ವಂದನೆ



ಲಿಂಗೈಕ್ಯ 08.01.2016

**ಡಾ|| ನಿರ್ಮಲಾ ಕೇಸರಿ**

ಇಂದಿಗೆ ತಾವು ನಮ್ಮನ್ನಗಲಿ 5 ವರ್ಷಗಳಾದವು.
ಸದಾ ಮಕ್ಕಳ ವೈದ್ಯರಿಗೆ ಪ್ರೇರಣೆಯಾಗಿರುವ
ಪ್ರೀತಿಯ ಮೇಡಂರವರಿಗೆ ನಮ್ಮೆಲ್ಲರ ನಲುಮೆಯ ಹಾಗೂ
ಭಕ್ತಿಪೂರ್ವಕ ಗುರುವಂದನೆ....

ಬಾಪೂಜಿ ಮಕ್ಕಳ ಆರೋಗ್ಯ ಸಂಸ್ಥೆಯ ನಿರ್ದೇಶಕರು
ಹಾಗೂ ಸಿಬ್ಬಂದಿ ವರ್ಗ,
ದಾವಣಗೆರೆ ಮಕ್ಕಳ ವೈದ್ಯರ ಸಂಘ, ಮಕ್ಕಳ ಶಾಸ್ತ್ರವಿಭಾಗ
ಜೆಜೆಎಂ ಮೆಡಿಕಲ್ ಕಾಲೇಜ್
& ಎಸ್ಎಸ್ಐ ಎಂ.ಎಸ್, ದಾವಣಗೆರೆ.
ಸದಸ್ಯರು ಹಾಗೂ ದಾನಿಗಳು ಡಾ|| ನಿರ್ಮಲಾ ಕೇಸರಿ ಟ್ರಸ್ಟ್




# ವಿವಾದಕ್ಕೆ ಕಾರಣವಾದ 'ಸನಾತನ' ಪದ ಬಳಕೆ

**(1ನೇ ಪುಟದಿಂದ)** ವಿಚಿತ್ರವಾಗಿದೆ ಎಂದು ಜಾಗತಿಕ ಲಿಂಗಾಯತ ಮಹಾಸಭಾ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಎಸ್.ಎಂ.ಜಾಮದಾರ್ ಹೇಳಿದ್ದಾರೆ.

ಟೆಂಡರ್ ಆಗದೆ, ಕಾಮಗಾರಿಗೆ ಒಪ್ಪಿಗೆಯನ್ನೂ ಪಡೆಯದೆ ತರಾತುರಿಯಲ್ಲಿ ಅನುಭವ ಮಂಟಪ ನಿರ್ಮಾಣಕ್ಕೆ ಶಂಕು ಸ್ಥಾಪನೆ ನೆರವೇರಿದೆ ಎಂದು ಅವರು ಟೀಕಿಸಿದ್ದಾರೆ. ಅನುಭವ ಮಂಟಪಕ್ಕೆ ಶಂಕುಸ್ಥಾಪನೆ ನೆರವೇರಿಸುವುದಾಗಿ ಜನವರಿ 2 ಮತ್ತು 3 ರಂದು ಜಾಹೀರಾತು ನೀಡಲಾಗಿತ್ತು. ಜನವರಿ 6 ರಂದು ಶಂಕು ಸ್ಥಾಪನೆ ನೆರವೇರಿಸಲಾಗಿದೆ. ಬಸವಕಲ್ಯಾಣ ವಿಧಾನ ಸಭಾ ಉಪಚುನಾವಣೆ ಹತ್ತಿರ ಬರುತ್ತಿರುವುದರಿಂದ ಚುನಾವಣಾ ಉದ್ದೇಶದಿಂದ ತರಾತುರಿಯಲ್ಲಿ ಶಂಕುಸ್ಥಾಪನೆ ನೆರವೇರಿಸಲಾಗಿದೆಯೇ? ಎಂದವರು ಪ್ರಶ್ನಿಸಿದ್ದಾರೆ.

**ಗೊ.ರು.ಚ ಆಕ್ಷೇಪ:** ಇದು ಸನಾತನ ಅಲ್ಲ, ಶರಣರ ಪ್ರಗತಿಪರ ಚಿಂತನೆಯ ಮರುಸೃಷ್ಟಿಯ ಅನುಭವ ಮಂಟಪ ನಿರ್ಮಾಣವಾಗುತ್ತಿದೆ ಎಂದು ಮುದ್ರಿತವಾಗಬೇಕಾಗಿತ್ತು ಎಂದು ನೂತನ ಅನುಭವ ಮಂಟಪ ರೂಪುರೇಷೆ ತಯಾರಿಕ ತಜ್ಞರ ಸಲಹಾ ಸಮಿತಿ ಅಧ್ಯಕ್ಷರೂ, ಹಿರಿಯ ಸಾಹಿತಿಗಳೂ ಆದ ಗೊ.ರು. ಚನ್ನಬಸಪ್ಪ ಹೇಳಿದ್ದಾರೆ. ಮುಖ್ಯಮಂತ್ರಿ ಯಡಿಯೂರಪ್ಪನವರ ಸಮ್ಮುಖದಲ್ಲಿಯೇ ಗೊ.ರು.ಚ. ಅವರ ಸನಾತನ ಪದಕ್ಕೆ ಉಂಟಾದ ತೀಕ್ಷ್ಣ ಆಕ್ಷೇಪಕ್ಕೆ ಮುಖ್ಯಮಂತ್ರಿಗಳು ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

## ಮರುಸೃಷ್ಟಿ ಅನೇಕ ಬದಲಾವಣೆ ತರಲಿದೆ

**- ನಳಿನ್ ಕುಮಾರ್ ಕಟೀಲ್**

ಬೆಂಗಳೂರು, ಜ. 7 - 'ಸನಾತನ ಪ್ರಗತಿಪರ ಚಿಂತನೆಯ ಮರುಸೃಷ್ಟಿ' ಹೆಸರಿನಲ್ಲಿ ನೀಡಿರುವ ಜಾಹೀರಾತು ವಿಚಾರ ಪರ ಹಾಗೂ ವಿರೋಧ ಚರ್ಚೆಯಾಗುತ್ತಿರುವ ಹಿನ್ನೆಲೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಸರಣಿ ಟ್ವೀಟ್‌ಗಳ ಮೂಲಕ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಬಸವ ಕಲ್ಯಾಣದಲ್ಲಿ ಸನಾತನ ಪ್ರಗತಿಪರ ಚಿಂತನೆಯ ಮರುಸೃಷ್ಟಿಯ ಧ್ಯೋತಕವಾಗಿ 'ಅನುಭವ ಮಂಟಪ' ದ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿರುವುದು ಹೆಮ್ಮೆಯ ವಿಚಾರ. ಸಮಾಜಕ್ಕೆ ಬಸವಣ್ಣನವರ ತತ್ವ-ಸಿದ್ಧಾಂತಗಳನ್ನು ಅರಿಕೆ ಮಾಡಿಕೊಡಲಿರುವ ಈ ಮಹತ್ಕಾರ್ಯವನ್ನು ನೆರವೇರಿಸಿದ ಬಿಎಸ್‌ವೈಗೆ ಅವರು ಧನ್ಯವಾದ ಸಲ್ಲಿಸಿದ್ದಾರೆ. ಬಸವ ಕಲ್ಯಾಣದಲ್ಲಿ ಅನುಭವ ಮಂಟಪ ಮರುಸೃಷ್ಟಿಯಾಗುತ್ತಿರುವುದು ಅನೇಕ ಬದಲಾವಣೆಗಳನ್ನು ತರಲಿದೆ. ಸನಾತನ ಭಾರತದ ತತ್ವ-ಸಿದ್ಧಾಂತ ಮತ್ತು ಸಾಮಾಜಿಕ ಸಾಮರಸ್ಯವನ್ನು ಅನುಭವ ಮಂಟಪವು ಮತ್ತೆ ಮರುಸೃಷ್ಟಿಸಲಿದೆ. ಈ ಹಿಂದೆ ಪ್ರಧಾನಿ ಮೋದಿಯವರೂ ಕೂಡ ಇದರ ಬಗ್ಗೆ ಪ್ರಸ್ತಾಪಿಸಿದ್ದರು ಎಂದಿದ್ದಾರೆ.

12 ನೇ ಶತಮಾನದಲ್ಲಿ ಸರ್ವ ಸಮಾನತೆ, ಮಾನವೀಯ ಮೌಲ್ಯ ಮತ್ತು ನೈತಿಕತೆಯ ಸಾರ ಸದ್ಗುಣಗಳನ್ನು ವಿಶ್ವಕ್ಕೆ ಪ್ರಚುರಪಡಿಸಿ, ಕಾಯಕ ತತ್ವ, ಸರಳತೆ ಮತ್ತು ಅಹಿಂಸೆಯ ತತ್ವಗಳನ್ನು ಪ್ರತಿಪಾದಿಸಿದ ವಿಶ್ವಗುರು ಬಸವಣ್ಣನವರು ಸ್ಥಾಪಿಸಿದ ಅನುಭವ ಮಂಟಪವು ಸಾಮಾಜಿಕ ಪ್ರಗತಿಯ ಕ್ರಾಂತಿಕಾರಿ ಬದಲಾವಣೆಗೆ ಶ್ರಮವಹಿಸಿತ್ತು ಎಂದು ಉಲ್ಲೇಖಿಸಿದ್ದಾರೆ.

## ಮೊಸರಲ್ಲಿ ಕಲ್ಲು ಸಿಕ್ಕಂತಾಯಿತು

**(1ನೇ ಪುಟದಿಂದ) ನುಡಿದರು.**
**'ಶರಣರದು ನಡೆ, ನುಡಿ ಒಂದಾದ ಪ್ರಾಯೋಗಿಕ ಮತ್ತು ವೈಚಾರಿಕ ಧರ್ಮ. ಅವರ ಹೋರಾಟ ಸನಾತನ ಗೊಡ್ಡು ಪರಂಪರೆಗಳ ವಿರುದ್ಧ ನಡೆದಿದೆ. ವೇದ, ಶಾಸ್ತ್ರ, ಪುರಾಣ, ಆಗಮಗಳ ವಿರುದ್ಧ ಧ್ವನಿ ಎತ್ತಿದ್ದನ್ನು ವಚನಗಳಲ್ಲಿ ಕಾಣಬಹುದು. ಈ ಸನಾತನ ಪರಂಪರೆಯವರೇ ಕಲ್ಯಾಣದಲ್ಲಿ ರಕ್ತಕ್ರಾಂತಿಯ ಬೀಜ ಬಿತ್ತಿ ವಚನ ಸಾಹಿತ್ಯವನ್ನು ಭಸ್ಮ ಮಾಡಲು ಮುಂದಾಗಿದ್ದು. ಅದರ ಪಳೆಯುಳಿಕೆಗಳು ಇಂದಿಗೂ ಜೀವಂತವಾಗಿವೆ' ಎಂದು ಶ್ರೀಗಳು ಕಿಡಿ ಕಾರಿದ್ದಾರೆ.**
**'ಅನುಭವ ಮಂಟಪ ಸನಾತನಿಗಳ ಆಡಳಿತಕ್ಕೆ ಸಿಕ್ಕರೆ ಬಸವಾದಿ ಶಿವಶರಣರ ಸಮಾಜೋಧಾರ್ಮಿಕ ಚಿಂತನೆಯನ್ನು ಹಿಸುಕಿ ಮತ್ತೆ ಪುರೋಹಿತ ಪರಂಪರೆಯನ್ನು ಬೆಳೆಸಿದಂತೆ ಆಗುತ್ತದೆ. ಇಂತಹ ದೋಷಗಳು ಮುಂದೆ ಆಗದಂತೆ ಬಸವಾನು ಯಾಯಿಗಳು ಜಾಗರೂಕರಾಗಿರಬೇಕಾಗಿದೆ. ಸರ್ಕಾರ ಸಹ ಶರಣರ ಆಚಾರ ವಿಚಾರಗಳಿಗೆ ಚ್ಯುತಿ ಬಾರದಂತೆ ಎಚ್ಚರವಹಿಸಬೇಕು' ಎಂದು ಆಗ್ರಹಿಸಿದ್ದಾರೆ.**

# ಜಾಗೃತಿ ಸಭೆಯಿಂದ ನೂತನ ಕೃಷಿ ಕಾಯ್ದೆಯ ಅರಿವು ಮೂಡಿಸಬೇಕು



**ಲೋಕಿಕೆರೆ ನಾಗರಾಜ್**

ಹರಿಹರ, ಜ.7 - ಇಲ್ಲಿನ ಬಿಜೆಪಿ ಕಚೇರಿಯಲ್ಲಿ ಇಂದು ನಡೆದ ಹರಿಹರ ಗ್ರಾಮಾಂತರ ರೈತ ಮೋರ್ಚಾ ಕಾರ್ಯಕಾರಿಣಿ ಸಭೆಯನ್ನು ಗೋ ಪೂಜೆ ಮಾಡುವುದರ ಮೂಲಕ ಆರಂಭಿಸಲಾಯಿತು.

ಸಭೆಯನ್ನುದ್ದೇಶಿಸಿ ಮಾತನಾಡಿದ ಜಿಲ್ಲಾ ಬಿಜೆಪಿ ರೈತ ಮೋರ್ಚಾ ಅಧ್ಯಕ್ಷ ಲೋಕಿಕೆರೆ ನಾಗರಾಜ್ ಅವರು, ಪ್ರಧಾನಿ ನರೇಂದ್ರ ಮೋದಿಯವರು ನೂತನ ಕೃಷಿ ಮಸೂದೆಯನ್ನು ಜಾರಿಗೆ ತಂದಿದ್ದಾರೆ. ಇದು ರೈತರಿಗೆ ಅನುಕೂಲವಾಗಲಿದ್ದು, ರೈತರಿಗೆ ಅರಿವು ಮೂಡಿಸುವ ಜವಾಬ್ದಾರಿ ನಮ್ಮ ರೈತ ಮೋರ್ಚಾ ಪದಾಧಿಕಾರಿಗಳ ಮೇಲಿದೆ ಎಂದರು.

ಪ್ರಧಾನಿ ಮೋದಿ ಹಾಗೂ ಸಿ.ಎಂ. ಯಡಿಯೂರಪ್ಪ ಅವರುಗಳು ರೈತರಿಗೆ ಅನುಕೂಲವಾಗುವಂತಹ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದ್ದಾರೆ. ಇದನ್ನು ಒಪ್ಪಿಕೊಳ್ಳದೇ ವಿರೋಧ ಪಕ್ಷದವರು, ಕೆಲವು ಸಂಘಟನೆಯವರು, ಕೆಲವು ರೈತರು, ಕಾಯ್ದೆ ಬಗ್ಗೆ ತಿಳಿಯದೆ ಪ್ರತಿಭಟನೆ ಮಾಡಿ, ರೈತರನ್ನು ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ ಎಂದು ನಾಗರಾಜ್ ಕಿಡಿ ಕಾರಿದರು.

ಹರಿಹರ ತಾಲ್ಲೂಕು ಗ್ರಾಮಾಂತರ ಘಟಕದ ಅಧ್ಯಕ್ಷ ಎಂ.ಪಿ.ಲಿಂಗರಾಜ್, ರೈತರು ನೂತನ ಕೃಷಿ ಮಸೂದೆಯ ಬಗ್ಗೆ ತಿಳಿದುಕೊಳ್ಳಬೇಕು ಎಂದರು.

ಹರಿಹರ ಗ್ರಾಮಾಂತರ ಘಟಕದ ರೈತ ಮೋರ್ಚಾ ಅಧ್ಯಕ್ಷ ವೀರಣ್ಣ ಕೊಂಡಜ್ಜಿ ಮಾತನಾಡಿ, ನೂತನ ಕೃಷಿ ಮಸೀದಿಯು ಕೃಷಿ ಕ್ಷೇತ್ರದಲ್ಲಿ ರೈತರಿಗೆ ಹೆಚ್ಚಿನ ಲಾಭ ಸಿಗದೇ ಎಲ್ಲಾ ಮಧ್ಯವರ್ತಿಗಳ ಪಾಲಾಗುತ್ತಿತ್ತು. ಲಾಭವನ್ನೆಲ್ಲಾ ಮಧ್ಯವರ್ತಿಗಳು ತೆಗೆದುಕೊಳ್ಳುತ್ತಿದ್ದಾರೆ. ಇದನ್ನು ತಪ್ಪಿಸಲು ಈ ಮಸೂದೆಯನ್ನು ಜಾರಿಗೆ ತಂದಿದ್ದಾರೆ. ಮಸೂದೆಗಳ ಅನ್ವಯ ರೈತರು ಎಪಿಎಂಸಿ ಮಂಡಿಯ ಹೊರತಾಗಿ, ಕಡಿಮೆ ಸುಂಕ, ಹೆಚ್ಚುವರಿ ಸುಂಕ, ದಲ್ಲಾಳಿಗಳಿಗೆ ಕಮೀಷನ್ ನೀಡದೆಯೇ ತಮಗೆ ಬೇಕಾದವರಿಗೆ ಉತ್ಪನ್ನಗಳನ್ನು ಮಾರಾಟ ಮಾಡಬಹುದು. ನೂತನ ಕೃಷಿಯಿಂದ ಎಲ್ಲಾ ವರ್ಗದವರಿಗೂ ಅನುಕೂಲವಾಗಲಿದೆ ಎಂದು ತಿಳಿಸಿದರು.

ಜಿಲ್ಲಾ ರೈತ ಮೋರ್ಚಾ ಉಪಾಧ್ಯಕ್ಷ ಟಿ.ಕೆ.ವೀರೇಶ್, ಹರಿಹರ ತಾಲ್ಲೂಕು ನಗರ ಘಟಕದ ಅಧ್ಯಕ್ಷ ಅಜಿತ್ ಸಾವಂತ್, ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್, ಮಾಜಿ ಶಾಸಕ ಬಿ.ಪಿ.ಹರೀಶ್, ಹರಿಹರ ತಾಲ್ಲೂಕು ಪ್ರಧಾನ ಕಾರ್ಯದರ್ಶಿಗಳಾದ ಮಹಾಂತೇಶ್, ವೀರೇಶ್ ಆದಾಪುರ, ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿಗಳಾದ ಲೋಕಿಕೆರೆ ಅಣ್ಣಪ್ಪ, ಹರೀಶ್ ಬೂದಿಹಾಳ್ ಮತ್ತಿತರರು ಸಭೆಯಲ್ಲಿ ಭಾಗವಹಿಸಿದ್ದರು.

## ಭಾನುವಳ್ಳಿಯಲ್ಲಿ ಸಾಮೂಹಿಕ ವಿವಾಹ

ಶ್ರೀ ಬೀರಲಿಂಗೇಶ್ವರ ದೇವರುಗಳ, ಹಾಲುಮತ ಮಹಾ ಮಹಿಮರ ಕಾರ್ತಿಕೋತ್ಸವದ ಅಂಗವಾಗಿ ಇಂದು ದೊಡ್ಡ ಎಡೆಪೂಜೆ, ಸಾಮೂಹಿಕ ವಿವಾಹ ಹಾಗೂ ಧರ್ಮ ಸಭೆಯು ಬೆಳಿಗ್ಗೆ 10.30 ರಿಂದ ನಡೆಯಲಿವೆ.

ಸಾನಿಧ್ಯ : ಶ್ರೀ ನಿರಂಜನಾನಂದಪುರಿ ಸ್ವಾಮೀಜಿ, ಶ್ರೀ ಈಶ್ವರಾನಂದಪುರಿ ಸ್ವಾಮೀಜಿ, ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ, ಶ್ರೀ ವೇಮಾನಂದ ಸ್ವಾಮೀಜಿ, ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮೀಜಿ.

ಅಧ್ಯಕ್ಷತೆ : ಎಸ್. ರಾಮಪ್ಪ, ಉದ್ಘಾಟನೆ : ಜಿ. ದ್ಯಾಮಪ್ಪ. ಮುಖ್ಯ ಅತಿಥಿಗಳು : ಪಿ.ಎಸ್. ಹನುಮಂತಪ್ಪ, ಕೆ. ಜಡಿಯಪ್ಪ, ಬಿ.ಎಂ. ವಾಗೀಶ್‌ಸ್ವಾಮಿ, ವೈ. ವಿರೂಪಾಕ್ಷಪ್ಪ, ಕೆ. ಸಿದ್ದಪ್ಪ, ಜಿ. ಚಂದ್ರಪ್ಪ, ಎಂ. ನಾಗೇಂದ್ರಪ್ಪ ಮತ್ತಿತರರು.

## ನಗರದಲ್ಲಿ ಬನಶಂಕರಿ ದೇವಿ ಕಾರ್ತಿಕ

ಹಳೇಬೇತೂರು ರಸ್ತೆ ಶ್ರೀ ಬನಶಂಕರಿದೇವಿ ದೇವಸ್ಥಾನದಲ್ಲಿ ಕಡೇ ಕಾರ್ತಿಕೋತ್ಸವವು ಇಂದು ನಡೆಯಲಿದೆ. ಬೆಳಿಗ್ಗೆ 5 ಗಂಟೆಗೆ ಅಭಿಷೇಕ, ಅಲಂಕಾರ, ಮಹಾಮಂಗಳಾರತಿ ನಂತರ ತೀರ್ಥ ಪ್ರಸಾದ ವಿನಿಯೋಗ ನಡೆಯುವುದು. ಇಂದು ರಾತ್ರಿ 8 ಗಂಟೆಗೆ ಮುತ್ತೈದೆಯರಿಂದ ಆರತಿ ಬೆಳಗುವ ಮೂಲಕ ದೀಪೋತ್ಸವಕ್ಕೆ ಚಾಲನೆ ನಡೆಯುವುದು.

## ರಸ್ತೆಗಿಂತ ಅಂಗನವಾಡಿ ನಿರ್ಮಾಣಕ್ಕೆ ಆದ್ಯತೆ

**(1ನೇ ಪುಟದಿಂದ)** ಲಭ್ಯವಿರುವ ಸ್ಥಳಗಳಲ್ಲಿ ಉದ್ಯೋಗ ಸೃಜನೆಯಾಗುವಂತಹ ಹಾಗೂ ಇಲಾಖೆಗೆ ಶಾಶ್ವತ ಆಸ್ತಿಯಾಗುವಂತಹ ಪುಟ್ಟ ಪುಟ್ಟ ಅಂಗಡಿ, ಮಳಿಗೆಗಳನ್ನು ನಿರುದ್ಯೋಗಿಗಳಿಗೆ ನಿರ್ಮಿಸಿಕೊಟ್ಟಲ್ಲಿ ಅವರಿಗೆ ಉದ್ಯೋಗ ಒದಗಿಸಿದಂತಾಗುತ್ತದೆ ಎಂದರು.

ಜಿಲ್ಲೆಯ ಪ್ರಮುಖ ರಸ್ತೆಗಳಲ್ಲಿ ನಾಮಫಲಕಗಳು ಕಂಡು ಬರುತ್ತಿಲ್ಲ. ಇದರಿಂದ ರಾತ್ರಿ ವೇಳೆ ಜನರಿಗೆ ಮಾರ್ಗ ಪತ್ತೆಗೆ ಸಮಸ್ಯೆಯಾಗುತ್ತಿದೆ. ಸ್ಟೀಲ್ ಅಥವಾ ಕಬ್ಬಿಣದ ನಾಮಫಲಕಗಳನ್ನು ಹಾಕುವುದರಿಂದ ಅವುಗಳನ್ನು ಅಪಹರಿಸಿಕೊಂಡು ಹೋಗುವ ಸಾಧ್ಯತೆ ಇರುತ್ತದೆ. ಹಾಗಾಗಿ ಸಿಮೆಂಟಿನ ಅಚ್ಚಿನಲ್ಲಿ ತಯಾರಿಸಿರುವ ನಾಮ ಫಲಕಗಳನ್ನು ಹಾಕಿದರೆ ಸೂಕ್ತ ಎಂದವರು ತಿಳಿಸಿದರು.

ಸಾರ್ವಜನಿಕರು ರಸ್ತೆಗಳನ್ನು ಅಗೆಯುವ ಮುನ್ನ ಇಲಾಖೆಯ ವತಿಯಿಂದ ಅನುಮತಿ ಪಡೆಯಬೇಕು. ಒಂದು ವೇಳೆ ಅನುಮತಿ ಪಡೆಯದೇ ರಸ್ತೆ ಅಗೆದರೆ ಅಂತಹವರ ವಿರುದ್ದ ಮುಲಾಜಿಲ್ಲದೇ ಮೊಕದ್ದಮೆ ದಾಖಲಿಸಿ ಎಫ್‌ಐಆರ್ ಮಾಡಬೇಕು ಎಂದವರು ಕಟ್ಟುನಿಟ್ಟಿನ ಸೂಚನೆ ನೀಡಿದರು. ಲೋಕೋಪಯೋಗಿ ಇಲಾಖೆಯ ರಸ್ತೆಗಳನ್ನು ಒತ್ತುವರಿ ಮಾಡುವವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದವರು ಇದೇ ಸಂದರ್ಭದಲ್ಲಿ ಅಧಿಕಾರಿಗಳಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕ ರಾದ ಎಸ್.ಎ.ರವೀಂದ್ರನಾಥ್, ಎಸ್. ರಾಮಪ್ಪ, ಲಿಡ್ಕರ್ ಅಧ್ಯಕ್ಷರೂ ಆಗಿರುವ ಶಾಸಕ ಪ್ರೊ. ಲಿಂಗಣ್ಣ, ಲೋಕೋಪ ಯೋಗಿ ಇಲಾಖೆ ಕಾರ್ಯದರ್ಶಿ ಡಾ.ಕೃಷ್ಣರೆಡ್ಡಿ, ಡಿಸಿ ಮಹಾಂತೇಶ ಬೀಳಗಿ, ಪಿಡಬ್ಲ್ಯುಡಿ ಮುಖ್ಯ ಅಭಿಯಂತರ ಕಾಂತರಾಜ್, ಕಾರ್ಯಪಾಲಕ ಅಭಿಯಂತರ ಮಲ್ಲಿಕಾ ರ್ಜುನ, ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಜರಿದ್ದರು.

## ಹಾಲಿವಾಣದಲ್ಲಿ ಇಂದು ಸಾಮೂಹಿಕ ವಿವಾಹ

ಶ್ರೀ ಬೀರಲಿಂಗೇಶ್ವರ ಸ್ವಾಮಿಯ ದೊಡ್ಡ ಎಡೆಜಾತ್ರೆ, ಮರಿಬನ್ನಿ ಕಾರ್ಯಕ್ರಮದ ಅಂಗವಾಗಿ ಇಂದು ಸಾಮೂಹಿಕ ವಿವಾಹ ಹಾಗೂ ಧಾರ್ಮಿಕ ಸಭೆಯನ್ನು ಬೆಳಿಗ್ಗೆ 11.30 ರಿಂದ ಏರ್ಪಡಿಸಲಾಗಿದೆ.

ಸಾನಿಧ್ಯ : ಶ್ರೀ ನಿರಂಜನಾನಂದಪುರಿ ಸ್ವಾಮೀಜಿ, ಶ್ರೀ ಈಶ್ವರಾನಂದ ಪುರಿ ಸ್ವಾಮೀಜಿ, ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ, ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮೀಜಿ, ಶ್ರೀ ಮುರಳೀಧರ ಸ್ವಾಮೀಜಿ, ಬ್ರಹ್ಮಾಕುಮಾರಿ ಮಂಜುಳಾ.

ಅಧ್ಯಕ್ಷತೆ : ಎಸ್. ರಾಮಪ್ಪ. ಉದ್ಘಾಟನೆ : ಡಾ. ರಶ್ಮಿ ವೈ. ನಾಗಪ್ಪ. ಮುಖ್ಯ ಅತಿಥಿಗಳು : ಹೆಚ್.ಎಸ್. ಶಿವಶಂಕರ್, ಬಿ.ಪಿ. ಹರೀಶ್, ಡಾ. ಹೆಚ್. ಮಹೇಶಪ್ಪ, ಜಿ. ದ್ಯಾಮಣ್ಣ, ಬಿ.ಎಂ. ವಾಗೀಶ್ ಸ್ವಾಮಿ, ಭಾಗ್ಯಲಕ್ಷ್ಮಿ ಚಂದ್ರಪ್ಪ, ಬೆಣ್ಣೆಹಳ್ಳಿ ಹಾಲೇಶಪ್ಪ, ಎಂ. ನಾಗೇಂದ್ರಪ್ಪ, ಎಂ.ಬಿ. ರೋಷನ್, ಪಿ.ಎಸ್. ಹನುಮಂತಪ್ಪ ಮತ್ತಿತರರು.

## ಎಲ್.ಬಿ. ನಾಗರಾಜಪ್ಪ ನಿಧನ



ದಾವಣಗೆರೆ ಕೊಂಡಜ್ಜಿ ರಸ್ತೆಯ ರಾಜೀವ್‌ಗಾಂಧಿ ಬಡಾವಣೆ ವಾಸಿ, **ಶ್ರೀ ಎಲ್.ಬಿ. ನಾಗರಾಜಪ್ಪ** ಅವರು ದಿನಾಂಕ 07.01.2021ರ ಗುರುವಾರ ರಾತ್ರಿ 10.45ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 65 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 08.01.2021ರ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖತಪ್ತರು : ಪತ್ನಿ : ಶ್ರೀಮತಿ ಶಕುಂತಲಮ್ಮ,
ಪುತ್ರಿ : ಶ್ರೀಮತಿ ಸಂಗೀತ ವೀರೇಶ್, ಸಹೋದರ : ಎಲ್.ಬಿ. ಲಿಂಗರಾಜ್,
ಶ್ರೀಮತಿ ಲಲಿತ, ಎಲ್. ಸ್ವಾತಿ ಹಾಗೂ ಕುಟುಂಬ ವರ್ಗದವರು,
ಮೊ. : 90665 89157, 96636 71410

## ಪುಣ್ಯ ಸ್ಮರಣೆ






8.1.2018 (3ನೇ ವರ್ಷದ ಪುಣ್ಯಸ್ಮರಣೆ)
**ದಿ|| ಶ್ರೀಮತಿ ಬಿ. ಅಮೃತಮ್ಮ**
26.1.2005 (16ನೇ ವರ್ಷದ ಪುಣ್ಯಸ್ಮರಣೆ)
**ದಿ|| ಶ್ರೀಮತಿ ಹೇಮಕ್ಕ ತುಂಬಿಗಿ**
ಸದಾ ನಿಮ್ಮ ಸ್ಮರಣೆಯಲ್ಲಿರುವ ಹಾಗೂ ನೆನಪಿನಲ್ಲಿರುವ
ಪತಿ : **ಕೆ.ಎಸ್. ನಟರಾಜ್**
ಮಕ್ಕಳು : **ಕೆ.ಎನ್. ಚೇತನ ಶಿವರಾಜ್**
**ಪಿ. ಧನ್ಯಕುಮಾರಿ, ಪಿ. ಅರ್ಚನ,**
**ಪರಮೇಶ್ವರಪ್ಪ ತುಂಬಿಗಿ,** ಮಹಾನಗರ ಪಾಲಿಕೆ, ದಾವಣಗೆರೆ.

**ರಕ್ತದಾನ ಶ್ರೇಷ್ಠದಾನ**

### ನಿವೃತ್ತ ಚಿತ್ರಕಲಾ ಶಿಕ್ಷಕ ಸೈಯದ್ ಇಕ್ಬಾಲ್ ನಿಧನ




ದಾವಣಗೆರೆಯ ಬಾಲಕರ ಸರ್ಕಾರಿ ಪ್ರೌಢಶಾಲಾ ನಿವೃತ್ತ ಚಿತ್ರಕಲಾ ಶಿಕ್ಷಕ ಜನಾಬ್ ಸೈಯದ್ ಇಕ್ಬಾಲ್ (77) ಅವರು ದಿನಾಂಕ 7.01.2021 ರಂದು ಗುರುವಾರ ಸಂಜೆ 4.30ಕ್ಕೆ ನಿಧನರಾಗಿದ್ದಾರೆ. ಪತ್ನಿ, ಮೂವರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 8.01.2021 ರಂದು ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ನಗರದ ಪಿ.ಬಿ. ರಸ್ತೆಯಲಿರುವ ಹಳೇ ಖಬರಸ್ತಾನದಲ್ಲಿ ನೆರವೇರಲಿದೆ.

## ನಗರದ ಮಾರುತಿ ಮಂದಿರಲ್ಲಿ ನಾಳೆ ಕಾರ್ತಿಕ



ದಾವಣಗೆರೆ, ಜ.7- ಸವಿತಾ ಸಮಾಜ ಸಂಘದ ವತಿಯಿಂದ ಕೊಂಡಜ್ಜಿ ರಸ್ತೆಯಲ್ಲಿರುವ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 9ರ ಶನಿವಾರ ರಾತ್ರಿ 8 ಘಂಟೆಗೆ ಕಾರ್ತಿಕೋತ್ಸವ ನಡೆಯಲಿದೆ ಎಂದು ಸವಿತಾ ಸಮಾಜದ ಅಧ್ಯಕ್ಷ ಎನ್. ರಂಗಸ್ವಾಮಿ ತಿಳಿಸಿದ್ದಾರೆ.

## ಹಿರೇಮಠ್ ಸಿ.ಎಸ್. ನಿಧನ




ದಾವಣಗೆರೆ ಸಿದ್ದವೀರಪ್ಪ ಬಡಾವಣೆ 4ನೇ ಕ್ರಾಸ್ ವಾಸಿ, ವಾಣಿಜ್ಯ ತೆರಿಗೆ ನಿವೃತ್ತ ಅಧಿಕಾರಿ **ಹಿರೇಮಠ್ ಸಿ.ಎಸ್.** (64) ಅವರು ದಿನಾಂಕ 7.01.2021 ರಂದು ಗುರುವಾರ ಬೆಳಿಗ್ಗೆ 8 ಗಂಟೆಗೆ ನಿಧನರಾಗಿದ್ದಾರೆ. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 7.01.2021 ರಂದು ಗುರುವಾರ ಸಂಜೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿತು.

ಇಂತಿ ದುಃಖತಪ್ತ ಕುಟುಂಬ ವರ್ಗ: ಕರಣ್ ಹೆಚ್.ಸಿ.

## ಭರಮಸಾಗರ ಗ್ರಾ.ಪಂ. ಚುನಾವಣೆಯಲ್ಲಿ ಒಂದೇ ಗುಂಪಿಗೆ ಜಯ

ಭರಮಸಾಗರ,ಜ.7 - ಸ್ಥಳಿಯ ಗ್ರಾಪಂ ಚುನಾವಣೆಯಲ್ಲಿ ಪ್ರಥಮ ಬಾರಿಗೆ ಒಂದೇ ಗುಂಪು ಜಯ ಗಳಿಸಿರುವುದು ವಿಶೇಷವಾಗಿದೆ. ಗ್ರಾಮದ ಜಿ.ಪಂ. ಮಾಜಿ ಉಪಾಧ್ಯಕ್ಷ ಎಚ್.ಎನ್. ತಿಪ್ಪೇಸ್ವಾಮಿ ಮುಖಂಡತ್ವದಲ್ಲಿ 26 ಸದಸ್ಯರು ಜಯ ಗಳಿಸಿದ್ದಾರೆ.


# ಹಳ್ಳಿಹಾಳ್ ಗ್ರಾಮದ ಊರಮುಂದ್ಲರ ಹೆಚ್. ಮಹಾದೇವಪ್ಪಗೌಡ್ರು ನಿಧನ



ಹರಿಹರ ತಾಲ್ಲೂಕು ಹಳ್ಳಿಹಾಳ್ ಗ್ರಾಮದ
ಹಿರಿಯರೂ, ಶ್ರೀ ನಂದಿ ಪತ್ತಿನ
ಸಹಕಾರ ಸಂಘದ ಮಾಜಿ ಅಧ್ಯಕ್ಷರೂ ಆದ
**ಶ್ರೀ ಊರಮುಂದ್ಲರ**
**ಹೆಚ್. ಮಹಾದೇವಪ್ಪಗೌಡ್ರು**
ಅವರು ದಿನಾಂಕ 07.01.2021ರ ಗುರುವಾರ ತಡರಾತ್ರಿ 12.30 ಕ್ಕೆ ನಿಧನರಾದರು. ಮೃತರಿಗೆ 88 ವರ್ಷ ವಯಸ್ಸಾಗಿತ್ತು. ಮೂವರು ಪುತ್ರರು, ಓರ್ವ ಪುತ್ರಿ, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 08.01.2021ರ ಶುಕ್ರವಾರ ಮಧ್ಯಾಹ್ನ 1 ಗಂಟೆಗೆ ಹಳ್ಳಿಹಾಳ್ ಗ್ರಾಮದಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖತಪ್ತರು :
**ಊರಮುಂದ್ಲರ ವಂಶಸ್ಥರು ಹಾಗೂ ಬಂಧು-ಮಿತ್ರರು.**

## ಸವಿನೆನಪು



**ಲಿಂ|| ಶ್ರೀ ಕೊಂಡಜ್ಜಿ ಗೌಡ್ರ ಬಸಪ್ಪ**
ನಿವೃತ್ತ ಶಿಕ್ಷಕರು
ನಿಧನ : 08.01.2018

**ಲಿಂ|| ಶ್ರೀಮತಿ ಬಿ. ಸುಶೀಲಮ್ಮ**
ನಿವೃತ್ತ ಶಿಕ್ಷಕರು
ನಿಧನ : 13.12.2010

**ಒಡಲಿದೋ ಒಲವಿನ ಒರತೆ.... ಕಂಗಳೋ ಕರುಣೆಯ ಕಡಲು....**
**ಮಾತೃ ದೇವೋ ಭವ.... ಪಿತೃ ದೇವೋ ಭವ....**
**ನೀವು ನಮ್ಮನ್ನಗಲಿ ದೂರವಾಗಿದ್ದರೂ, ನೀವು ನಮಗೆ ಕಲಿಸಿದ ಜೀವನದ ಪಾಠ, ಆದರ್ಶದ ನಡೆ-ನುಡಿ, ಸಹಬಾಳ್ವೆ, ಮಮತೆಯ ಜೀವನದ ಪಥದಲ್ಲಿ ಸಾಗುವುದಕ್ಕೆ ನಿಮ್ಮ ನೆನಪೇ ನಮಗೆಲ್ಲಾ ಶ್ರೀ ರಕ್ಷೆ...... ನಿಮ್ಮ ಪ್ರೀತಿಯ...**

ಪುತ್ರರು : **ಕೆ.ಜಿ. ಶಿವಕುಮಾರ್,** ಮಾಜಿ ಸದಸ್ಯರು, ಮಹಾನಗರಪಾಲಿಕೆ, ಮಾಜಿ ಅಧ್ಯಕ್ಷರು, ನಗರಸಭೆ.
**ಜಿ.ಬಿ. ಲಿಂಗರಾಜ್,** ಮಾಜಿ ಅಧ್ಯಕ್ಷರು, ಸ್ಥಾಯಿ ಸಮಿತಿ, ಮಹಾನಗರಪಾಲಿಕೆ.
**ಜಿ.ಬಿ. ಸುರೇಶ್‌ಕುಮಾರ್** ಇಂಜಿನಿಯರ್, ಸುಶೀಲ್ ಅಸೋಸಿಯೇಟ್ಸ್
ಪುತ್ರಿಯರು-ಅಳಿಯಂದಿರು :
**ಶ್ರೀಮತಿ ಕೆ.ಜಿ. ಸುವರ್ಣಮ್ಮ ಶ್ರೀ ಬಿ. ವಾಮದೇವಪ್ಪ, ಅಸಗೋಡು.**
**ಶ್ರೀಮತಿ ಜಿ.ಬಿ. ಪಾರ್ವತಮ್ಮ, ಶ್ರೀ ಎನ್.ಎಸ್. ಜಯಪ್ಪ, ತಾಳ್ಯ.**
**ಶ್ರೀಮತಿ ಜಿ.ಬಿ. ಮಂಜುಳಾ, ಶ್ರೀ ಕೆ.ಎಸ್. ಉಮೇಶಪ್ಪ, ಶೆಟ್ಟಿಹಳ್ಳಿ.**
ಸೊಸೆಯಂದಿರು : **ಶ್ರೀಮತಿ ಜಿ.ಪಿ. ಚಂದ್ರಿಕಾ,**
**ಶ್ರೀಮತಿ ವಿಜಯ ಲಿಂಗರಾಜು,** ಮಾಜಿ ಸದಸ್ಯರು, ನಗರಸಭೆ, ದಾವಣಗೆರೆ,
**ಶ್ರೀಮತಿ ಎಂ.ಬಿ. ತಾರಾ,** ಇಂಜಿನಿಯರ್ ಮತ್ತು **ಮೊಮ್ಮಕ್ಕಳು, ಮರಿಮೊಮ್ಮಕ್ಕಳು**
**ಬೆಳ್ಳೂಡಿ ಹಾಗೂ ಕೊಂಡಜ್ಜಿ ಗೌಡ್ರು ವಂಶಸ್ಥರು ಹಾಗೂ ಬಂಧು-ಮಿತ್ರರು.**

# ಕುಂದುವಾಡ ಕೆರೆ ಅಭಿವೃದ್ಧಿ ಹೆಸರಿನಲ್ಲಿ ಜೀವಿಗಳ ಆಹಾರ ಸರಪಳಿ ತುಂಡರಿಸುವುದು ಎಷ್ಟು ಸರಿ...?

- ಡಾ. ಎಸ್. ಶಿಶುಪಾಲ
ದಾವಣಗೆರೆ
ವಿಶ್ವವಿದ್ಯಾಲಯದ
ಸೂಕ್ಷ್ಮ ಜೀವಿಶಾಸ್ತ್ರ ವಿಭಾಗದ
ಪ್ರಾಧ್ಯಾಪಕರು
SSKUMB@GMAIL.COM





**ದಾವಣಗೆರೆ ನಗರದ ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಒಂದು ಪರಿಸರ ಅಧ್ಯಯನ ಕೇಂದ್ರವಾಗಬೇಕಾದ ಜಾಗವಿದು. ಅಸಂಖ್ಯಾತ ಸಸ್ಯ ಮತ್ತು ಪ್ರಾಣಿ ಸಂಕುಲಗಳ ಅಧ್ಯಯನಕ್ಕೆ ಪ್ರಶಸ್ತ ಸ್ಥಳ. ಈಗ ಇರುವ ಜಾಗವನ್ನೇ ಬಳಸಿಕೊಂಡು ಚಿಟ್ಟೆ ಪಾರ್ಕ್ ನಿರ್ಮಾಣ ಮಾಡಬಹುದು. ಒಣಗಿ ಹೋಗಿರುವ ಮರಗಳನ್ನು ತೆಗೆದು, ಹೊಸದಾಗಿ ಸ್ಥಳೀಯವಾಗಿ ಬೆಳೆಯುವ ಮರಗಳನ್ನು ನೆಡಬಹುದು. ರಾಜ್ಯದಲ್ಲಿ ಇಂತಹ ಕೆಲಸಗಳಿಗೆ ಸದಾ ಸಹಯೋಗ ನೀಡುವ ತಜ್ಞರನ್ನು ಸಂಪರ್ಕಿಸಿ, ಒಂದು ಸುಸ್ಥಿರ ಯೋಜನೆ ರೂಪಿಸಬಹುದು. ಕೆರೆಯಲ್ಲಿ ಈಗಿರುವ ನಡುಗಡ್ಡೆಯನ್ನು ಉಳಿಸಿಕೊಂಡು, ಅದೇ ರೀತಿಯ ನಡುಗಡ್ಡೆಗಳನ್ನು ನಿರ್ಮಿಸಿ ಮರಗಳನ್ನು ನೆಟ್ಟರೆ ಯಾವುದೇ ನಿರ್ವಹಣಾ ವೆಚ್ಚವಿಲ್ಲದೆ ಆಹ್ಲಾದಕರ ವಾತಾವರಣವನ್ನು ಸೃಷ್ಟಿಸಬಹುದು.**

ಒಂದು ಕೆರೆ ಎಂದೊಡನೆ ಕಣ್ಣು ಮುಂದೆ ಬರುವ ಚಿತ್ರಣವೆಂದರೆ ಮನ ಸೂರೆಗೊಳ್ಳುವ ಆಹ್ಲಾದಕರ ವಾತಾವರಣ. ಹಕ್ಕಿಗಳ ಚಿಲಿಪಿಲಿ ನಾದ. ಕೆರೆಯ ಮೇಲಿನಿಂದ ಬರುವ ತಣ್ಣನೆಯ ಶುದ್ಧ ಗಾಳಿ. ಸುತ್ತಲೂ ಮರಗಿಡಗಳ ಸೌಂದರ್ಯ. ನೀರಿನಲ್ಲಿ ಈಜುತ್ತಿರುವ ಬಾತುಗಳು, ಅಕ್ಕಪಕ್ಕದ ಗಿಡಗಂಟೆಗಳ ಹೂಗಳಿಗೆ ಭೇಟಿ ನೀಡುತ್ತಿರುವ ಚಿಟ್ಟೆಗಳು. ನಗರದ ಜನ ಮಾನಸಿಕ ನೆಮ್ಮದಿ ಕಂಡುಕೊಳ್ಳುವ ತಾಣ. ಸಾವಿರಾರು ಜಲಜನ್ಯ ಸಸ್ಯ ಮತ್ತು ಪ್ರಾಣಿಗಳ ಆವಾಸ ತಾಣ. ಇದಲ್ಲದೆ ಅಲ್ಲಿನ ಜನರಿಗೆ ಮತ್ತು ದನಕರುಗಳಿಗೆ ಕುಡಿಯುವ ನೀರಿನ ಮೂಲ.

ಕೆರೆ ಮತ್ತು ಸರೋವರಗಳು ಭೂಮಿಯ ಶೇ.3% ರಷ್ಟು ಮಾತ್ರವಿದ್ದು ತನ್ನದೇ ಆದ ವಿಶಿಷ್ಟ ಪರಿಸರವನ್ನು ಹೊಂದಿವೆ. ಇವುಗಳು ಹಲವಾರು ಜೀವಿಗಳಿಗೆ ಆಶ್ರಯ ತಾಣವಾಗಿದ್ದು, ಜಗತ್ತಿನ ಜೀವವೈವಿಧ್ಯತೆಗೆ ತಮ್ಮದೇ ಕೊಡುಗೆ ನೀಡುತ್ತಿವೆ. ಅಮೋಘ ಜೀವ ವೈವಿಧ್ಯತೆ ತಾಣವಾಗಿರುವ ಕೆರೆ ಮತ್ತು ಸರೋವರಗಳು ನೆಲ ಮತ್ತು ಜಲದಲ್ಲಿ ವಾಸಿಸುವ ಜೀವಿಗಳ ಸಂತಾನಾಭಿವೃದ್ಧಿ ಮತ್ತು ಆಹಾರ ಒದಗಿಸುವ ತಾಣಗಳೂ ಹೌದು.

ಆದರೆ, ಈ ನೀರಿನ ಆಕರಗಳು ಮನುಷ್ಯನಿಗೆ ಅಗತ್ಯವಾದ ಶುದ್ಧ ಮತ್ತು ಕ್ಷಾರ-ರಹಿತ ನೀರನ್ನು ಒದಗಿಸುತ್ತಾ, ತನ್ನ ಮೂಲಭೂತ ರೂಪವನ್ನೇ ಕಳೆದುಕೊಳ್ಳುತ್ತಿವೆ. ಹೆಚ್ಚುತ್ತಿರುವ ಮನುಷ್ಯನ ನೀರಿನ ಬೇಡಿಕೆ ಇಂತಹ ನೀರಿನ ಮೂಲ ಸೆಲೆಗಳಿಗೆ ದಕ್ಕೆ ಉಂಟುಮಾಡುತ್ತಿದೆ. ನಗರೀಕರಣ ಮತ್ತು ಕೈಗಾರಿಕೀಕರಣಗಳಿಂದ ಇಂತಹ ಶ್ರೀಮಂತ ನೀರಿನ ಸೆಲೆಗಳು ತೊಂದರೆ ಅನುಭವಿಸುವಂತಾಗಿದೆ. ಕೆರೆ, ಸರೋವರಗಳ ಅಧ್ಯಯನವನ್ನು ಲಿಮ್ನಾಲೋಜಿ (Limnology) ಎಂದು ಕರೆಯುವರು. ಹೆಚ್ಚುತ್ತಿರುವ ಮನುಷ್ಯನ ಅಗತ್ಯಗಳಿಗೋಸ್ಕರ ಇಂತಹ ನೀರಿನ ಮೂಲವನ್ನು ಅತೀ ಜಾಗೂರಕತೆಯಿಂದ ನಿರ್ವಹಿಸುವುದು ಇಂದಿನ ಅಗತ್ಯ. ಕೆರೆಯ ಭೌತಿಕ, ರಾಸಾಯನಿಕ ಮತ್ತು ಜೈವಿಕ ಅಂಶಗಳು ಪರಸ್ಪರ ಅವಲಂಬನೆಯಿಂದ ಕೂಡಿದ್ದು ಯಾವುದೇ ಒಂದು ಅಂಶದಲ್ಲಿ ಏರುಪೇರಾದರೂ ಗಂಭೀರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ.

ನಗರದ ಮಧ್ಯಭಾಗದಲ್ಲಿರುವ ಕುಂದುವಾಡ ಕೆರೆ ಸುಮಾರು 250 ಎಕರೆಯಷ್ಟು ವಿಸ್ತೀರ್ಣ ಹೊಂದಿದ್ದು ಮೇಲಿನ ಎಲ್ಲಾ ಗುಣಗಳಿರುವ ಒಂದು ಪರಿಸರ. ನೈಸರ್ಗಿಕವಾಗಿದ್ದ ಕೆರೆಯಾಗಿದ್ದದ್ದು ಸ್ವಲ್ಪ ಮಾನವನ ಹಸ್ತಕ್ಷೇಪದಿಂದ ಬದಲಾವಣೆ ಹೊಂದಿದ್ದರೂ ಮೂಲಭೂತ ರಚನೆ ಬದಲಾಗಿರಲಿಲ್ಲ. ನಗರದ ಶೇ.60ಕ್ಕೂ ಹೆಚ್ಚು ಪ್ರದೇಶಕ್ಕೆ ಕುಡಿಯುವ ನೀರಿನ ಆಸರೆ. ಇದರ ಇರುವಿಕೆಯಿಂದ ದಾವಣಗೆರೆಯ ಅಂತರ್ಜಲದ ಮಟ್ಟ ಹೆಚ್ಚಾಗಿ ಶೇ.40 ಪ್ರದೇಶದಲ್ಲಿರುವ ಕೊಳವೆ ಬಾವಿಗಳು ಜನರ ದಾಹ ತಣಿಸುತ್ತಿವೆ. ಹದಿನೈದು ವರ್ಷಗಳ ಹಿಂದೆ ಕೆಲವರ ಭಗೀರಥ ಪ್ರಯತ್ನದಿಂದ ಭದ್ರಾ ಜಲಾಶಯದಿಂದ ನೀರು ಹರಿಯಲು ಪ್ರಾರಂಭವಾದಾಗಿನಿಂದ ವರ್ಷ ಪೂರ್ತಿ ನೀರಿದ್ದು, ಎಲ್ಲಾ ಜಲಚರಗಳಿಗೆ ಮತ್ತು ದಾವಣಗೆರೆಯ ನಾಗರಿಕರಿಗೆ ಪ್ರಮುಖ ನೀರಿನ ಆಸರೆಯಾಗಿದೆ.

ಇಲ್ಲಿ ಸುಮಾರು 150 ಕ್ಕೂ ಹೆಚ್ಚು ಹಕ್ಕಿ ಪ್ರಭೇದಗಳನ್ನು ಪಕ್ಷಿ ತಜ್ಞರು ಗುರುತಿಸಿದ್ದಾರೆ. ಸ್ಥಳೀಯ ಹಕ್ಕಿಗಳೆಂದರೆ ಗುಳುಮುಳುಕ, ನೀರುಕಾಗೆಗಳು, ಹಾವಕ್ಕಿ, ಬೆಳ್ಳಕ್ಕಿಗಳು, ಕೊಳದ ಬಕ, ಇರುಳು ಬಕ, ನಾಮದ ಕೋಳಿ, ಸಿಳ್ಳೆಬಾತು, ವರಟೆ, ನವಿಲು, ಹುಂಡು ಕೋಳಿ, ಜಂಬು ಕೋಳಿ, ಬೆಳವ, ಗೂಬೆಗಳು, ಗೀಜಗಗಳು, ಕಳ್ಳಿಪೀರ, ಮರಗಾಲು ಹಕ್ಕಿ, ನೆಲಗುಬ್ಬಿಗಳು, ಮುನಿಯಗಳು, ಮಿಂಚುಳ್ಳಿ ಮುಂತಾದವುಗಳು.

ವಲಸೆ ಹಕ್ಕಿಗಳೆಂದರೆ ಪಟ್ಟೆ ಹೆಬ್ಬಾತು, ಬಣ್ಣದ ಕೊಕ್ಕರೆ, ಕೆಂಬರಲುಗಳು, ಬಾಯ್ಕಳಕ ಕೊಕ್ಕರೆ, ಚಮಚದ ಕೊಕ್ಕು, ಬ್ರಾಹ್ಮೀ ಬಾತು, ನಾಮದ ಬಾತು, ಕೆಂಪು ರೆಕ್ಕೆಯ ಬಾತು, ಬಿಳಿಹುಬ್ಬಿನ ಬಾತು, ಗುಬುಟು ಕೊಕ್ಕಿನ ಬಾತು, ಚಲುಕ ಬಾತು, ಸೋಲಾರಿ ಹಕ್ಕಿ, ವಿವಿಧ ಗೊರವಗಳು, ಉಲ್ಲಂಕಿಗಳು ಮುಂತಾದವುಗಳು.

ಈಗ ಕುಂದುವಾಡ ಕೆರೆ ಅಭಿವೃದ್ಧಿ ಹೆಸರಿನಲ್ಲಿ ಹಲವಾರು ಮಾರ್ಪಾಟುಗಳನ್ನು ಕೋಟಿಗಳ ವೆಚ್ಚದಲ್ಲಿ ಕ್ರಿಯಾ ಯೋಜನೆ ರೂಪುಗೊಂಡಿದೆ. ಲಭ್ಯ ಮಾಹಿತಿ ಪ್ರಕಾರ ಕೆರೆ ಏರಿಯನ್ನು ವಿಸ್ತರಿಸುವುದು, ಎತ್ತರಿಸುವುದು, ಪಾದಚಾರಿ ರಸ್ತೆಯನ್ನು ಅಗಲೀಕರಿಸುವುದು, ಹೂವಿನ ಹಾಸು ಮಾಡುವುದು,



ಕುಳಿತುಕೊಳ್ಳುವ ಬೆಂಚುಗಳನ್ನು ಮಾಡುವುದು, ವಿದ್ಯುತ್ ಬೆಳಕನ್ನು ಮತ್ತು ಇತರೆ ಅಲಂಕಾರಿಕ ಅಭಿವೃದ್ಧಿಯನ್ನು ಮಾಡುವುದು. ಯೋಜನಾ ವೆಚ್ಚ 15 ಕೋಟಿ ರೂಪಾಯಿಗಳು ಮತ್ತು ಕಾಮಗಾರಿ ಪೂರ್ಣಗೊಳ್ಳುವ ಕಾಲಾವಧಿ 12 ತಿಂಗಳುಗಳು. ಈ ಎಲ್ಲಾ ಕಾಮಗಾರಿಗಳು ಮಾನವ-ಕೇಂದ್ರಿತ ಅಭಿವೃದ್ಧಿಯೆಂಬ ಮರಿಚಿಕೆಯೇ ವಿನಃ ಪರಿಸರ-ಸ್ನೇಹಿ ಅಭಿವೃದ್ಧಿಯಲ್ಲ. ಈಗಾಗಲೇ ಇಲ್ಲಿ ಪಾದಚಾರಿ ಮಾರ್ಗ ಸಾಕಷ್ಟು ದೊಡ್ಡದ್ದಿದ್ದು ಅದರ ಅಗಲೀಕರಣ ಅಗತ್ಯವಿಲ್ಲ. ಆಸಕ್ತರು ಮೈಸೂರಿನ ಕುಕ್ಕರಹಳ್ಳಿ ಕೆರೆ ಮತ್ತು ಕಾರಂಜಿಕೆರೆಗಳಲ್ಲಿರುವ ಪಾದಚಾರಿ ಮಾರ್ಗದ ಅಳತೆಗಿಂತ ದಾವಣಗೆರೆಯಲ್ಲಿರುವುದು ಎರಡರಷ್ಟು ಹೆಚ್ಚಿದೆ ಎಂಬುದನ್ನು ಪರಾಮರ್ಶಿಸಬಹುದು. ಅಗಲೀಕರಣ ಮಾಡುವಾಗ ಈಗಾಗಲೇ ಚೆನ್ನಾಗಿ ಬೆಳೆದಿರುವ ಮರಗಳ ಪಾಡೇನು? ಅವುಗಳಿಗೆ ತೊಂದರೆಯಾಗದ ಹಾಗೆ ಈ ಕೆಲಸ ಮಾಡಲು ಸಾಧ್ಯವಿಲ್ಲ.

ಎಲ್ಲಿ ನೀರು ಸೋರಿಕೆಯಾಗುತ್ತಿದೆಯೋ ಅಲ್ಲಿ ಮಾತ್ರ ಸೂಕ್ತ ಕಾಮಗಾರಿಯನ್ನು ಮಾಡಿದರೆ ಸಾಕು. ಇಡೀ ಕೆರೆಯ 4.9 ಕಿ.ಮೀ ವ್ಯಾಪ್ತಿಯಲ್ಲಿ ಕಾಂಕ್ರೀಟೀಕರಣ ಅಗತ್ಯವೇ? ನೀರು ಸಣ್ಣ ಪ್ರಮಾಣದಲ್ಲಿ ನೆಲದಲ್ಲಿ ಇಂಗಿದಾಗ ಮಾತ್ರ ಅಂತರ್ಜಲ ವೃದ್ಧಿಯಾಗುವುದು ಎಲ್ಲರಿಗೂ ತಿಳಿದಿರುವ ಸಂಗತಿ. ಈಗ ನಗರದ ರಸ್ತೆಗಳೆಲ್ಲಾ ಕಾಂಕ್ರೀಟೀಕರಣವಾಗಿರುವುದರಿಂದ ಬಿದ್ದ ಮಳೆ ನೀರು ಇಂಗದೆ ಮೋರಿಗಳಲ್ಲಿ ಹರಿದು ಒಂದು ತಾರ್ಕಿಕ ಅಂತ್ಯ ಕಾಣದೇ ಎಲ್ಲೋ ಕೊಚ್ಚೆಯಾಗುತ್ತಿದೆ. ಹಾಗಾಗಿ ಸಣ್ಣಪ್ರಮಾಣದ ನೀರಿನ ಇಂಗುವಿಕೆ ಸುತ್ತಮುತ್ತಲಿನ ಮರಗಿಡಗಳಿಗೆ ನೀರನ್ನು ಒದಗಿಸುವುದಲ್ಲದೆ ಅಂತರ್ಜಲ ಹೆಚ್ಚಳಕ್ಕೂ ಕಾರಣವಾಗುವುದು.

ಸುತ್ತಮುತ್ತಲಿನ ಪೊದೆಗಳು/ಸಣ್ಣ ಗಿಡಗಳು ಹಲವಾರು ಹಕ್ಕಿಗಳಿಗೆ ಗೂಡು ಮಾಡಲು ಪ್ರಶಸ್ತ ಸ್ಥಳಗಳು. ಅಲ್ಲದೆ ಇವು ನೂರಾರು ಕೀಟಗಳಿಗೆ ಮತ್ತು ಚಿಟ್ಟೆಗಳಿಗೆ ಆಹಾರ ಸಸ್ಯಗಳು. ಕೀಟಗಳನ್ನು ತಿನ್ನುವ ಕಪ್ಪೆ, ಓತಿಕ್ಯಾತ ಮತ್ತು ಇತರೆ ಹಲ್ಲಿಗಳಿಗೆ ಆಹಾರದ ತಾಣ. ಇವನ್ನೆಲ್ಲಾ ಅಭಿವೃದ್ಧಿಯ ಹೆಸರಿನಲ್ಲಿ ಜೀವಿಗಳ ಆಹಾರ ಸರಪಳಿಯನ್ನು ತುಂಡರಿಸುವುದು ಎಷ್ಟು ಸರಿ? ಪರಿಸರ ಅಭಿಯಂತರರು ಇದನ್ನೆಲ್ಲಾ ಅಧ್ಯಯನ ನಡೆಸಿ, ಕಾಮಗಾರಿಗೆ ಅನುಮತಿ ನೀಡಿದ್ದಾರೆಯೇ? ಎಂಬ ಪ್ರಶ್ನೆ ಏಳುವುದು ಸಹಜ. ಇಲ್ಲಿನ ಪರಿಸರಕ್ಕೆ ಪೂರಕ ಅಭಿವೃದ್ಧಿ ಹಿತವಲ್ಲವೇ?

ಈಗಾಗಲೇ ನಗರದ ದಾನಿಗಳು ನೀಡಿರುವ ಕಲ್ಲು ಬೆಂಚುಗಳು ಸಾಕಷ್ಟು ಸಂಖ್ಯೆಯಲ್ಲಿರುವುದರಿಂದ ಹೆಚ್ಚಿನ ಕಲ್ಲು ಬೆಂಚುಗಳ ಅಗತ್ಯವಿದೆಯೇ?. ಒಂದು ಪ್ರಕೃತಿ ನಿರ್ಮಿತ ಜಾಗದಲ್ಲಿ ಆದಷ್ಟು ಗಿಡ-ಮರಗಳಿರಬೇಕೇ ವಿನಃ ಕಾಂಕ್ರೀಟ್, ಕಬ್ಬಿಣ ಮುಂತಾದ ವಸ್ತುಗಳಿರಬಾರದು. ಈಗ ಇರುವ ಮಾನವ ನಿರ್ಮಿತ ಪ್ರಾಣಿಗಳಿಗಾದ ಗತಿ ನೋಡಿದರೆ ಅವುಗಳಿಗಾದ ಪರಿಸ್ಥಿತಿ ನಮಗೂ ಆದೀತು.

ಇನ್ನು ವಿದ್ಯುತ್ ಬೆಳಕು, ಬಣ್ಣದ ಬೆಳಕಿಗೆ ಬಂದರೆ ಅಲ್ಲಿನ ಪ್ರಾಕೃತಿಕ ಸೊಬಗು ನಾಶವಾಗಿ ಬಹಳಷ್ಟು ಜೀವಿಗಳಿಗೆ ತೊಂದರೆಯಾಗುವುದು. ವಿದ್ಯುತ್ ಬೆಳಕನ್ನು ಅಲ್ಲಿಗೆ ತಂದರೆ ರಾತ್ರಿಯೂ ಜನ ಅಲ್ಲಿ ಹೋಗಬೇಕೆನ್ನುವುದು ಮತ್ತು ಅನೈತಿಕ ಚಟುವಟಿಕೆಗಳಿಗೆ ಅನುವು ಮಾಡಿಕೊಟ್ಟಂತಾಗುವುದಿಲ್ಲವೇ?

ಈ ಕಾಮಗಾರಿ ನಡೆಯುವ ಕಾಲಾವಧಿ 12 ತಿಂಗಳು ಎಂದು ನಿಗದಿಯಾಗಿದೆ. ಈಗಾಗಲೇ ಕೆರೆ ಒಣಗಲು ಆರಂಭವಾಗಿದೆ. ಈ ಸಮಯದಲ್ಲಿ ಇಲ್ಲಿನ ಜಲಚರಗಳೆಲ್ಲಾ ಸತ್ತು ಹೋಗುತ್ತವೆ. ದಶಕಗಳಿಂದ ಇಲ್ಲಿಯೇ ನೆಮ್ಮದಿಯಿಂದ ಜೀವಿಸಿ, ಸಂತಾನಾಭಿವೃದ್ಧಿ ಮಾಡುತ್ತಿದ್ದ ಜೀವಿಗಳ ಮಾರಣ ಹೋಮ ಸರಿಯೇ? ಹಕ್ಕಿಗಳೇನೋ ಇಲ್ಲಿ ನೀರಿಲ್ಲದಿದ್ದರೆ ಬೇರೆ ಕಡೆ ಹಾರಿ ಹೋಗುತ್ತವೆ. ಮತ್ತೆ ಸದ್ಯಕ್ಕೆ ಹಿಂದಿರುಗಿ ಬರುವ ಸೂಚನೆಯಿಲ್ಲ. ವರ್ಷ ಪೂರ್ತಿ ಕೆರೆಯಲ್ಲಿ ನೀರಿಲ್ಲದಿದ್ದರೆ ದಾವಣಗೆರೆಯ ಅಂತರ್ಜಲ ಬತ್ತುವುದಿಲ್ಲವೇ?

ಬೆಂಗಳೂರಿನ ಕೆರೆಗಳೆಲ್ಲಾ ಈ ರೀತಿಯ ಮಾನವ-ಕೇಂದ್ರಿತ ಅಭಿವೃದ್ಧಿ ಮಾಡಿ ಕೆರೆಗಳನ್ನು ಹಾಳು ಮಾಡಿರುವ ಉದಾಹರಣೆಯಿದ್ದು, ಅದರ ಪರಿಣಾಮ (4ನೇ ಪುಟಕ್ಕೆ)

## ಜಿಡಿಪಿಯಲ್ಲಿ ಶೇ.7.7ರ ಭಾರೀ ಕುಸಿತ : ಕೇಂದ್ರ ಸರ್ಕಾರ

ನವದೆಹಲಿ ಜ. 7 – ದೇಶದ ಜಿ.ಡಿ.ಪಿ. 2020-21ರ ಸಾಲಿನಲ್ಲಿ ಶೇ.7.7ರಷ್ಟು ಭಾರೀ ಕುಸಿತ ಕಾಣಲಿದೆ. ಕೊರೊನಾ ಸಮಯದಲ್ಲಿ ಆದ ಬೆಳವಣಿಗೆಗಳು ಇದಕ್ಕೆ ಕಾರಣವಾಗಿವೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಆರ್ಥಿಕ ವಲಯ ಭಾರೀ ಕುಸಿತ ಕಂಡಿದ್ದರೂ ಸಹ ಕೃಷಿ ವಲಯ ಹಾಗೂ ವಿದ್ಯುತ್ - ಅನಿಲ ಪೂರೈಕೆಯಂತಹ ವಲಯಗಳು ಪ್ರಸಕ್ತ ಹಣಕಾಸು ವರ್ಷದಲ್ಲಿ ಬೆಳವಣಿಗೆ ಕಾಣಲಿವೆ.

2020-21ರ ಹಣಕಾಸು ವರ್ಷದಲ್ಲಿ ನೈಜ ಜಿ.ಡಿ.ಪಿ. ಶೇ.7.7ರಷ್ಟು ಕುಸಿತ ಕಾಣಲಿದೆ. 2019-20ರ ಸಾಲಿನಲ್ಲಿ ಜಿ.ಡಿ.ಪಿ. ಶೇ.4.2ರ ಬೆಳವಣಿಗೆ ಕಂಡಿತ್ತು ಎಂದು ರಾಷ್ಟ್ರೀಯ ಅಂಕಿ-ಅಂಶಗಳ ಇಲಾಖೆ ಬಿಡುಗಡೆ ಮಾಡಿರುವ ಪ್ರಥಮ ಮುಂಚೂಣಿ ಅಂದಾಜಿನಲ್ಲಿ ತಿಳಿಸಲಾಗಿದೆ. ಆದರೆ, ಐ.ಎಂ.ಎಫ್. ಹಾಗೂ ವಿಶ್ವ ಬ್ಯಾಂಕ್ ಅಂದಾಜಿಸಿದ ಪ್ರಮಾಣದ ತೀವ್ರ ಕುಸಿತ ಉಂಟಾಗುವುದಿಲ್ಲ ಎಂದೂ ತಿಳಿಸಲಾಗಿದೆ.

2019-20ರಲ್ಲಿ ದೇಶದ ಜಿ.ಡಿ.ಪಿ. 133.01 ಲಕ್ಷ ಕೋಟಿ ರೂ. ಆಗಿತ್ತು. ಅದು 2020-21ರ ಸಾಲಿನಲ್ಲಿ 123.39 ಲಕ್ಷ ಕೋಟಿ ರೂ.ಗಳಿಗೆ ಕುಸಿಯಲಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಉತ್ಪಾದನಾ ವಲಯದಲ್ಲಿ ಶೇ.9.4ರವರೆಗಿನ ತೀವ್ರ ಕುಸಿತ ಕಾಣಲಿದೆ. ಈ ವಲಯ ವರ್ಷದ ಹಿಂದೆ ಶೇ.0.03ರಷ್ಟು ಬೆಳವಣಿಗೆ ಕಂಡಿತ್ತು.

ಕಟ್ಟಡ ವಲಯ ಶೇ.12.6ರ ಕುಸಿತ ಕಾಣಲಿದೆ. ಸಾರ್ವಜನಿಕ ಆಡಳಿತ, ರಕ್ಷಣೆ ಹಾಗೂ ಇತರೆ ಸೇವೆಗಳು ಶೇ.3.7ರಷ್ಟು ಕುಸಿಯಲಿವೆ. ಹಣಕಾಸು, ರಿಯಲ್ ಎಸ್ಟೇಟ್ ಹಾಗೂ ವೃತ್ತಿಪರ ಸೇವೆಗಳಲ್ಲಿ ಶೇ.0.8ರಷ್ಟು ಕುಸಿತವಾಗಲಿದೆ ಎಂದು ತಿಳಿಸಲಾಗಿದೆ.

ಮತ್ತೊಂದೆಡೆ ಕೃಷಿ, ಅರಣ್ಯ ಹಾಗೂ ಮೀನುಗಾರಿಕೆ ವಲಯ ಶೇ.3.4ರ ಬೆಳವಣಿಗೆ ಕಾಣಲಿದೆ. 2019-20ರಲ್ಲಿ ಈ ವಲಯ ಶೇ.4ರ ಬೆಳವಣಿಗೆ ಕಂಡಿತ್ತು.

ವಿದ್ಯುತ್, ಅನಿಲ, ಜಲ ಪೂರೈಕೆ ಹಾಗೂ ಇತರೆ ಸೇವೆಗಳು ಶೇ.2.7ರ ಬೆಳವಣಿಗೆ ಕಾಣಲಿವೆ. ಕಳೆದ ವರ್ಷ ಈ ವಲಯಗಳು ಶೇ.4.1ರ ಬೆಳವಣಿಗೆ ಕಂಡಿದ್ದವು.

2020-21ರ ಹಣಕಾಸು ವರ್ಷದ ಪ್ರಥಮ ಚತುರ್ಥದಲ್ಲಿ ಆರ್ಥಿಕತೆ ಶೇ.23.9ರ ಭಾರೀ ಕುಸಿತ ಕಂಡಿತ್ತು. ಎರಡನೇ ಚತುರ್ಥದಲ್ಲಿ ಶೇ.7.5ರಷ್ಟು ಕುಸಿತವಾಗಿತ್ತು. ಕೊರೊನಾ ಕಾರಣದಿಂದಾಗಿ ಲಾಕ್‌ಡೌನ್ ಹೇರಿಕೆ ಮಾಡಿದ್ದು ಆರ್ಥಿಕತೆಯ ಕುಸಿತಕ್ಕೆ ಕಾರಣವಾಗಿತ್ತು.

ಪ್ರಸಕ್ತ ಹಣಕಾಸು ವರ್ಷದಲ್ಲಿ ಶೇ.7.5ರ ಕುಸಿತವಾಗಲಿದೆ ಎಂದು ರಿಸರ್ವ್ ಬ್ಯಾಂಕ್ ಅಂದಾಜಿಸಿದೆ. ವಿಶ್ವಬ್ಯಾಂಕ್ ಶೇ.9.6ರ ಕುಸಿತದ ಅಂದಾಜು ತಿಳಿಸಿತ್ತು. ಶೇ.10.3ರ ಕುಸಿತವಾಗಲಿದೆ ಎಂದು ಐ.ಎಂ.ಎಫ್. ಹೇಳಿತ್ತು.

## ಸಂಕಷ್ಟಗಳ ಸರಮಾಲೆ ಎದುರಿಸಿದ ಸರ್ಕಾರ : ಕಾರಜೋಳ

**ಶಾಸಕರ ಅಸಮಾಧಾನಕ್ಕೆ ಸ್ಪಷ್ಟನೆ**

ದಾವಣಗೆರೆ, ಜ. 7 - ಮುಂದಿನ ದಿನಗಳಲ್ಲಿ ಆರ್ಥಿಕ ಪರಿಸ್ಥಿತಿ ನೋಡಿಕೊಂಡು ಶಾಸಕರ ಬೇಡಿಕೆಗಳನ್ನು ಈಡೇರಿಸಲಾಗುವುದು ಎಂದು ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ ತಿಳಿಸಿದ್ದಾರೆ.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಶಾಸಕರ ಜೊತೆ ಸಮಾಲೋಚನೆ ನಡೆಸಿದಾಗ, ಸಚಿವರ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ ಎಂಬ ಪ್ರಶ್ನೆಗೆ ಅವರು ಈ ಉತ್ತರ ನೀಡಿದ್ದಾರೆ.

ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಸಂಕಷ್ಟದಲ್ಲೇ ನಡೆದುಕೊಂಡು ಬಂದಿದೆ. ಮೊದಲು ಪ್ರವಾಹ ನಂತರ ಕೊರೊನಾ ಎದುರಾಯಿತು. ಇದರ ನಡುವೆಯೇ ರಾಜ್ಯ ಸರ್ಕಾರ ಸಮರ್ಪಕವಾಗಿ ಕೆಲಸ ಮಾಡಿದೆ ಎಂದವರು ಸಮರ್ಥಿಸಿಕೊಂಡಿದ್ದಾರೆ.

ಶಾಸಕರ ಮಾತಿಗೆ ಬೆಲೆ ಕೊಟ್ಟಿಲ್ಲ ಎಂದಲ್ಲ, ಆರ್ಥಿಕ ವ್ಯವಸ್ಥೆ - ಖಜಾನೆ ನೋಡಿಕೊಂಡು ಬೇಡಿಕೆ ಈಡೇರಿಸಬೇಕಾಗುತ್ತದೆ. ಈಗ ಶಾಸಕರ ಸಭೆ ಕರೆದು ಕೆಲಸಗಳಿಗೆ ಚಾಲನೆ ನೀಡಿದ್ದೇವೆ. ಪ್ರತಿ ಶಾಸಕರ ಕ್ಷೇತ್ರಕ್ಕೆ ತಲಾ 25 ಕೋಟಿ ರೂ. ನೀಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದರು.

ನಾಯಕತ್ವ ಬದಲಾವಣೆಯ ಪ್ರಶ್ನೆಯನ್ನು ತಳ್ಳಿ ಹಾಕಿದ ಅವರು, ಯಡಿಯೂರಪ್ಪ ಸರ್ಕಾರ ಉತ್ತಮ ಕೆಲಸ ಮಾಡುತ್ತಿದೆ ಎಂದು ಬಿಜೆಪಿ ರಾಷ್ಟ್ರಾಧ್ಯಕ್ಷ ಜೆ.ಪಿ. ನಡ್ಡಾ ಹಾಗೂ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಅವರೇ ಹೇಳಿದ್ದಾರೆ. ಮುಂದಿನ ಎರಡೂವರೆ ವರ್ಷ ಅವರದೇ ನಾಯಕತ್ವ ಎಂದು ಹೇಳಿದರು.

ಪರಿಷತ್ ಸದಸ್ಯ ಆರ್. ಶಂಕರ್ ಅವರಿಗೆ ಸಚಿವ ಸ್ಥಾನ ನೀಡುವ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, ಪಕ್ಷ ಹಾಗೂ ಸರ್ಕಾರದ ಎದುರು ಅವರ ಬೇಡಿಕೆ ಇದೆ. ಅವರಿಗೆ ನ್ಯಾಯ ಒದಗಿಸುವ ಕೆಲಸ ಮಾಡಲಾಗುವುದು ಎಂದಿದ್ದಾರೆ.

## 14 ರಂದು ಹರಿಹರದಲ್ಲಿ ಭಾವೈಕ್ಯ ಜಾತ್ರೆ



**ರಾಣೇಬೆನ್ನೂರಿನಲ್ಲಿ ಹರ ಜಾತ್ರೆಯ ಮಾಜಿ ಅಧ್ಯಕ್ಷ ಸಿ.ಆರ್. ಬಳ್ಳಾರಿ**

ರಾಣೇಬೆನ್ನೂರು, ಜ.7- ಕೃಷಿ ಅವಲಂಬಿತ ಪಂಚಮಸಾಲಿ ಸಮಾಜದಲ್ಲಿ ಶೇ.80 ರಷ್ಟು ಜನರು ಬಡವರಿದ್ದು, ನಮ್ಮ ಸಮಾಜಕ್ಕೂ ಮೀಸಲಾತಿ ಅಗತ್ಯವಿದೆ. ಅನೇಕ ಸಮುದಾಯದವರು ಮೀಸಲಾತಿ ಕೇಳುತ್ತಿದ್ದು, ಸರ್ಕಾರ ಈ ಕುರಿತು ತೀವ್ರ ಚಿಂತನೆ ಮಾಡಬೇಕು ಎಂದು ರಾಜ್ಯ ಪಂಚಮಸಾಲಿ ಸಮಾಜದ ಸಂಘಟನಾ ಕಾರ್ಯದರ್ಶಿ ಹಾಗೂ ಹರ ಜಾತ್ರೆಯ ಮಾಜಿ ಅಧ್ಯಕ್ಷ ಸಿ.ಆರ್. ಬಳ್ಳಾರಿ ಹೇಳಿದರು.

ಇದೇ ದಿನಾಂಕ 14 ಮತ್ತು 15 ರಂದು ಹರಿಹರದಲ್ಲಿ ನಡೆಯುವ ಹರಜಾತ್ರೆ ಕುರಿತು ನಡೆಸಿದ ಮಾಧ್ಯಮ ಗೋಷ್ಠಿಯಲ್ಲಿ ಅವರು ಮಾತನಾಡಿದರು.

ಈ ಜಾತ್ರೆ ಪಂಚಮಸಾಲಿ ಸಮಾಜಕ್ಕೆ ಮೀಸಲಾಗಿಲ್ಲ. ವಾಲ್ಮೀಕಿ, ಕುರುಬ ಸೇರಿದಂತೆ ಅನೇಕ ಸಮಾಜಗಳ ಜನರು ಪಾಲ್ಗೊಳ್ಳುತ್ತಾರೆ. ಇದೊಂದು ಭಾವೈಕ್ಯತೆಯ ಸಮಾವೇಶದಂತಿದೆ. ಜಾತ್ರೆಯ ಮೂಲಕ ಪಂಚಮಸಾಲಿ ಸಮಾಜದ ಸಂಘಟನೆಗೆ ಪ್ರಯತ್ನ ನಡೆಸಲಾಗುತ್ತದೆ ಎಂದು ಬಳ್ಳಾರಿ ಹೇಳಿದರು. ಕೊರೊನಾ ಹಿನ್ನೆಲೆಯಲ್ಲಿ ಸರ್ಕಾರದ ನಿಯಮಾನುಸಾರ ಜಾತ್ರೆ ನಡೆಸಲಾಗುತ್ತಿದ್ದು, ಮೆರವಣಿಗೆ, ಮನರಂಜನೆ ಕಾರ್ಯಕ್ರಮಗಳನ್ನು ರದ್ದುಪಡಿಸಲಾಗಿದೆ. ಯೋಗ ವಿಜ್ಞಾನ ಶಿಬಿರ, ಯುವಶಕ್ತಿಯ ಸಮಾವೇಶ, ಜಗದ್ಗುರುಗಳ ಪೀಠಾರೋಹಣ ಹಾಗು ಇನ್ನಿತರೆ ಕಾರ್ಯಕ್ರಮಗಳು ನಡೆಯಲಿದ್ದು, ಎರಡೂ ದಿನವೂ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ ಎಂದರು.

ಮುಖ್ಯಮಂತ್ರಿ ಯಡಿಯೂರಪ್ಪ, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಸಂಸದರಾದ ಪ್ರಜ್ವಲ್ ರೇವಣ್ಣ, ತೇಜಸ್ವಿ ಸೂರ್ಯ ಸೇರಿದಂತೆ ಸಚಿವರು, ಶಾಸಕರು ಭಾಗವಹಿಸಲಿದ್ದಾರೆ. ಜಾತ್ರೆ ಸಮಿತಿ ಉಪಾಧ್ಯಕ್ಷರಾದ ವಸಂತ ಹುಲ್ಲತ್ತಿ, ಸಿದ್ದು ಚಿಕ್ಕಬಿದರಿ, ಎಪಿಎಂಸಿ ನಿರ್ದೇಶಕ ಬಸವರಾಜ ಹುಲ್ಲತ್ತಿ ಇನ್ನಿತರರಿದ್ದರು.

## ಜಿಡಿಪಿ ಆದಾಯ ಆರ್ಥಿಕ ಚೇತರಿಕೆಯ ಸಂಕೇತ : ಕೇಂದ್ರ

ನವದೆಹಲಿ, ಜ. 7 – ಪ್ರಸಕ್ತ ಹಣಕಾಸು ವರ್ಷದ ದ್ವಿತೀಯಾರ್ಧದಲ್ಲಿ ಆರ್ಥಿಕತೆಯ ಚೇತರಿಕೆ ಮುಂದುವರೆದಿರುವುದನ್ನು ಜಿ.ಡಿ.ಪಿ. ಅಂದಾಜು ತೋರಿಸುತ್ತಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ತಿಳಿಸಿದೆ.

ಲಾಕ್‌ಡೌನ್ ನಿರ್ಬಂಧಗಳನ್ನು ತೆರವುಗೊಳಿಸಿದ ನಂತರ ಆರ್ಥಿಕತೆ ವೇಗವಾಗಿ ಪುಟಿದೇಳುತ್ತಿದೆ ಎಂದು ಸಚಿವಾಲಯ ಹೇಳಿದೆ. ಕೇಂದ್ರ ಅಂಕಿ - ಅಂಶಗಳ ಕಚೇರಿ ಬಿಡುಗಡೆ ಮಾಡಿರುವ ದಾಖಲೆಗಳ ಪ್ರಕಾರ ಪ್ರಸಕ್ತ ಹಣಕಾಸು ವರ್ಷದಲ್ಲಿ ಜಿ.ಡಿ.ಪಿ. ಶೇ.7.7ರಷ್ಟು ಕುಸಿಯಲಿದೆ. ಆದರೆ, ಮೂರನೇ ಹಾಗೂ ನಾಲ್ಕನೇ ಚತುರ್ಥಗಳಲ್ಲಿ ಆರ್ಥಿಕ ಚಟುವಟಿಕೆಗಳು ಪುಟಿದೇಳಲಿವೆ. ಇದರಿಂದಾಗಿ ಆರ್ಥಿಕತೆ ವೇಗದ ಬೆಳವಣಿಗೆ ಕಾಣಲಿದೆ ಎಂದು ಹಣಕಾಸು ಸಚಿವಾಲಯ ತಿಳಿಸಿದೆ.

## ದ.ಕನ್ನಡದಲ್ಲಿ ಹಕ್ಕಿಜ್ವರದ ಆತಂಕ

ಬೆಂಗಳೂರು ಜ. 7 – ಕೇರಳದಲ್ಲಿ ಹಕ್ಕಿ ಜ್ವರ ಕಾಣಿಸಿಕೊಂಡಿರುವ ನಡುವೆ, ಗಡಿ ಜಿಲ್ಲೆಯಾದ ದಕ್ಷಿಣ ಕನ್ನಡದಲ್ಲಿ ಆರು ಕಾಗೆಗಳು ಸತ್ತಿರುವುದು ಆತಂಕಕ್ಕೆ ಕಾರಣವಾಗಿದೆ. ಇವುಗಳ ಮಾದರಿಯನ್ನು ಪರೀಕ್ಷೆಗೆ ಕಳಿಸಲಾಗಿದೆ ಎಂದು ಆರೋಗ್ಯ ಸಚಿವ ಡಿ. ಸುಧಾಕರ್ ತಿಳಿಸಿದ್ದಾರೆ.

ಕೇರಳಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಲ್ಲಿ ಹಕ್ಕಿ ಜ್ವರ ಹರಡುವುದನ್ನು ತಡೆಯಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ ಎಂದೂ ಅವರು ತಿಳಿಸಿದ್ದಾರೆ.


# ಕರ್ನಾಟಕ ಗ್ರಾಮೀಣ ಬ್ಯಾಂಕ್

(ಸರ್ಕಾರಿ ಸ್ವಾಮ್ಯದ ಷೆಡ್ಯೂಲ್ಡ್ ಬ್ಯಾಂಕ್) ಪ್ರವರ್ತಕರು : ಕೆನರಾ ಬ್ಯಾಂಕ್
ಪ್ರಧಾನ ಕಛೇರಿ : ಸಂಗನಕಲ್ಲು ರಸ್ತೆ, ಗಾಂಧಿನಗರ, ಬಳ್ಳಾರಿ–583 103 (ಕರ್ನಾಟಕ)

**ಪ್ರಾದೇಶಿಕ ಕಚೇರಿ : ನಂ.496/66, ಸಂಕೋಳ್ ಪ್ಲಾಜಾ, 2ನೇ ಮಹಡಿ ನಾಗನೂರು ರಸ್ತೆ, ಶಾಮನೂರು, ದಾವಣಗೆರೆ–577 004**

ಫೋನ್: 08192 - 223913, 233632 e-mail: rodvg@kgbk.in

## ಚಿನ್ನಾಭರಣಗಳ ಬಹಿರಂಗ ಹರಾಜು

ಈ ಕೆಳಕಂಡ ಮಹನೀಯರು ಕರ್ನಾಟಕ ಗ್ರಾಮೀಣ ಬ್ಯಾಂಕ್‌ನ ಶಾಖೆಯಲ್ಲಿ ತಮ್ಮ ಚಿನ್ನಾಭರಣ ಆಧಾರದ ಸಾಲ ಪಡೆದಿದ್ದು, ವಾಯಿದೆ ಪ್ರಕಾರ ಸಾಲ ಮರುಪಾವತಿ ಮಾಡದೇ ಇದ್ದ ಕಾರಣ, ಇವರಿಗೆ ರಿಜಿಸ್ಟರ್ಡ್ ಅಂಚೆ ಮುಖಾಂತರ ಸಾಲಮರುಪಾವತಿ ಮಾಡುವಂತೆ ಕೋರಿ ಕಳುಹಿಸಿದ ನೋಟಿಸ್ ಜಾರಿಯಾಗಿರುತ್ತದೆ. ಆದರೂ ಸಾಲ ಮರುಪಾವತಿ ಮಾಡಲು ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ, ಅವರಿಗೆ ಈ ಮೂಲಕ ತಿಳಿಸುವುದೇನೆಂದರೆ, ತಾರೀಖು 18–01–2021 ರಂದು ಅಥವಾ ಅದಕ್ಕೆ ಮುಂಚೆ ಬ್ಯಾಂಕಿಗೆ ಭೇಟಿ ಕೊಟ್ಟು ಸಂಪೂರ್ಣ ಹಣ, ಬಡ್ಡಿ ಹಾಗೂ ಇತರೆ ಖರ್ಚುಗಳನ್ನು ಮರುಪಾವತಿ ಮಾಡತಕ್ಕದ್ದು, ಇಲ್ಲವಾದಲ್ಲಿ ತಾವು ಒತ್ತೆ ಇಟ್ಟ ಆಭರಣಗಳನ್ನು ತಾರೀಖು 18–01–2021 ರಂದು ಬೆಳಿಗ್ಗೆ 11.00 ಗಂಟೆಗೆ ಅಥವಾ ಬ್ಯಾಂಕಿಗೆ ಸೂಕ್ತವಾದ ಇನ್ನಾವುದೇ ದಿನದಂದು ನೋಟೀಸು ಕೊಡದೇ ಶಾಖೆಯ ಆವರಣದಲ್ಲಿ ಬಹಿರಂಗವಾಗಿ ಯಾ ಖಾಸಗಿಯಾಗಿ ಹರಾಜು ಮಾಡಲಾಗುವುದು. ಸದರಿ ಹರಾಜಿನಿಂದ ಬಂದ ಮೊತ್ತವು ತಮ್ಮ ಸಾಲವನ್ನು ಸಂಪೂರ್ಣ ತೀರುವಳಿ ಮಾಡಲು ವಿಫಲವಾದಲ್ಲಿ ತಾವು ವೈಯಕ್ತಿಕವಾಗಿ ಹೊಣೆಗಾರರಾಗಿರುತ್ತೀರಿ ಹಾಗೂ ಹರಾಜಿಗೆ ತಗಲುವ ಎಲ್ಲಾ ವೆಚ್ಚಕ್ಕೂ ನೀವೇ ಹೊಣೆಗಾರರೆಂದು ತಿಳಿಯಿರಿ.

**ಶಾಖೆ: ಮುಸ್ಟೂರು, ಜಗಳೂರು ತಾಲ್ಲೂಕು, ಫೋನ್ : 08196–249750 ಮೊ: 9590427817**

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಸಾಲದ ಬಾಬ್ತು + ಬಡ್ಡಿ |
|---|---|---|---|
| 1 | ಬೋರಪ್ಪ ಎಂ.ಟಿ. ಬಿನ್. ಎಂ. ತಿಪ್ಪೇಸ್ವಾಮಿ, ದೊಣ್ಣೆಹಳ್ಳಿ | 76015301021212 | 79,658,–00 |
| 2 | ತಿಮ್ಮಣ್ಣ ಎಸ್.ಆರ್. ಬಿನ್. ರಾಮರೆಡ್ಡಿ, ಮಲ್ಲಾಪುರ | 76015301005413 | 1,21,006–00 |
| 3 | ಈಶ್ವರ ಟಿ. ಬಿನ್. ತಮ್ಮಣ್ಣ, ಮೂಡಲಮಾಚೀಕೆರೆ | 76015301008113 | 42,658–00 |
| 4 | ದೋಣಪ್ಪರೆಡ್ಡಿ ಆರ್.ಟಿ. ಬಿನ್. ತಿಮ್ಮಪ್ಪರೆಡ್ಡಿ, ಹಿರೇಮಲ್ಲನಹೊಳೆ | 76015301009413 | 1,70,213–00 |
| 5 | ಜಗದೀಶ ಬಿನ್. ಪಿ. ವಾಸುದೇವರೆಡ್ಡಿ, ಸಿದ್ಧಿಹಳ್ಳಿ | 76015301018513 | 2,73,034–00 |
| 6 | ನಾಗರಾಜ ಹೆಚ್. ಬಿನ್. ಹನುಮಯ್ಯ, ದೊಣ್ಣೆಹಳ್ಳಿ | 76015301029713 | 78,179–00 |
| 7 | ರಾಮಾಂಜನೇಯ ಬಿನ್. ಮುರುಡಪ್ಪ, ದೊಣ್ಣೆಹಳ್ಳಿ | 76015301033413 | 1,17,994–00 |
| 8 | ತಿಮ್ಮಾರೆಡ್ಡಿ ಬಿ.ಟಿ. ಬಿನ್. ತಿಮ್ಮಪ್ಪ, ಸಿದ್ಧಿಹಳ್ಳಿ | 76015301088713 | 51,552–00 |
| 9 | ಚಂದ್ರಶೇಖರ ಕೆ.ವಿ. ಬಿನ್. ಸಿ.ವೀರಣ್ಣ, ಮುಸ್ಟೂರು | 76015301092313 | 2,14,360–00 |
| 10 | ಸೋಮಶೇಖರಪ್ಪ ಟಿ.ಎನ್. ಬಿನ್. ನಂದ್ಯಪ್ಪ, ಹೊಸಹಟ್ಟಿ | 76015301093813 | 45,997–00 |
| 11 | ದೋಣಪ್ಪರೆಡ್ಡಿ ಆರ್.ಟಿ. ಬಿನ್. ತಿಮ್ಮಪ್ಪರೆಡ್ಡಿ, ಹಿರೇಮಲ್ಲನಹೊಳೆ | 76015301108413 | 67,556–00 |
| 12 | ಪುಟ್ಟಣ್ಣ ಎಂ.ಆರ್. ಬಿನ್. ಎಂ. ರಾಮಪ್ಪ, ಮುಸ್ಟೂರು | 76015301112913 | 3,47,762–00 |
| 13 | ದ್ರಾಕ್ಷಾಯಣಮ್ಮ ಕೋಂ. ಓಂಕಾರಪ್ಪ, ದೊಣ್ಣೆಹಳ್ಳಿ | 76015301018114 | 1,89,567–00 |
| 14 | ದ್ಯಾಮಕ್ಕ ಕೋಂ. ಬಸಪ್ಪ, ಮೂಡಲಮಾಚೀಕೆರೆ | 76015301022314 | 1,10,141–00 |
| 15 | ಎಂ.ಬಿ. ಗಂಗಮ್ಮ ಕೋಂ. ತಿಪ್ಪೇಸ್ವಾಮಿ, ಸಿದ್ದಮ್ಮನಹಳ್ಳಿ | 76015301022614 | 88,365–00 |
| 16 | ತಿಪ್ಪಮ್ಮ ಕೋಂ. ಅನಂತರೆಡ್ಡಿ, ಸಿದ್ದಿಹಳ್ಳಿ | 76015301055414 | 1,04,604–00 |
| 17 | ಜಿ.ಬಿ. ಶಿವಕುಮಾರ್ ಬಿನ್. ಬಸಪ್ಪ, ದೊಣ್ಣೆಹಳ್ಳಿ | 76015301069214 | 1,17,356–00 |
| 18 | ತಿಪ್ಪೇಸ್ವಾಮಿ ಟಿ. ಬಿನ್. ಸತ್ಯಪ್ಪ, ಮುಸ್ಟೂರು | 76015301046415 | 49,906–00 |
| 19 | ರಂಗಪ್ಪ ಬಿನ್. ರಾಮಪ್ಪ, ಬಂಗಾರಕ್ಕನಗುಡ್ಡ | 76015301035116 | 22,112–00 |
| 20 | ಮಾರಪ್ಪ ಬಿನ್. ಓಬಳೇಶಪ್ಪ, ಸಿದ್ದಿಹಳ್ಳಿ | 76015301048017 | 9,708–00 |
| 21 | ಮೊಹಮ್ಮದ್ ಆಸೀಫ್ ಹುಸೇನ್ ಟಿ.ಎಸ್. ಬಿನ್. ಶೇಖ್‌ಅಹಮ್ಮದ್,ಚಿತ್ರದುರ್ಗ | 76015302026416 | 2,09,789–00 |
| 22 | ತಿಪ್ಪೇಸ್ವಾಮಿ ಎಸ್. ಬಿ. ಬಿನ್. ಬಸವರಾಜಪ್ಪ, ಸಿದ್ದಮ್ಮನಹಳ್ಳಿ | 76015302052616 | 19,752–00 |
| 23 | ತಿಪ್ಪೇಸ್ವಾಮಿ ಎಸ್. ಬಿ. ಬಿನ್. ಬಸವರಾಜಪ್ಪ, ಸಿದ್ದಮ್ಮನಹಳ್ಳಿ | 76015302058116 | 25,190–00 |
| 24 | ಚೇತನ್ ಎಸ್. ಬಿನ್. ಬಿ. ಶಿವಮೂರ್ತಿ, ಮುಸ್ಟೂರು | 76015302063416 | 47,103–00 |
| 25 | ವೀರಣ್ಣ ಬಿನ್. ದೊಡ್ಡಬಸಪ್ಪ, ಸಿದ್ದಮ್ಮನಹಳ್ಳಿ | 76015302100616 | 60,888–00 |
| 26 | ದಾಸಪ್ಪ ಬಿನ್. ತಿಮ್ಮಪ್ಪ, ಮುಸ್ಟೂರು | 76015302020817 | 7,508–00 |
| 27 | ತಿಪ್ಪೇಸ್ವಾಮಿ ಜಿ.ಕೆ. ಬಿನ್. ಕೃಷ್ಣರೆಡ್ಡಿ, ಸಿದ್ದಿಹಳ್ಳಿ | 76015302061817 | 1,44,765–00 |
| 28 | ಕಾಸಿಮಲಿ ಬಿನ್. ಉಸೇನ್‌ಮಿಯಾ, ಸಿದ್ದಿಹಳ್ಳಿ | 76015302068817 | 40,111–00 |
| 29 | ಕೇಶವಪ್ಪ ಎ. ಬಿನ್. ಅಂಕಪ್ಪ, ಮುಸ್ಟೂರು | 76015302074917 | 23,960–00 |
| 30 | ಶಿವಣ್ಣ ಬಿನ್. ತಿಮ್ಮಯ್ಯ, ಮುಸ್ಟೂರು | 76015302051818 | 7,744–00 |

ಸ್ಥಳ : ದಾವಣಗೆರೆ
ದಿನಾಂಕ : 08–01–2021

ಸಹಿ/– ಕರ್ನಾಟಕ ಗ್ರಾಮೀಣ ಬ್ಯಾಂಕ್
ಪ್ರಾದೇಶಿಕ ಕಛೇರಿ,ದಾವಣಗೆರೆ.

# ಸನಾತನಿಗಳ ಬಾಲಹಿಡಿದರೆ ತಪ್ಪು ದಾರಿ ಹಿಡಿದಿದ್ದೇವೆ ಎಂದೇ ಅರಿಯಬೇಕು

ಸನಾತನವಾದಿ ಶನಿ ಸಂತಾನಿಗಳ ಕುಟಿಲತೆ ಅರಿತು ಶರಣರ ಅನುಯಾಯಿಗಳಾದ ಲಿಂಗವಂತರು ಅವರ ವಿರುದ್ಧ ಧ್ವನಿ ಎತ್ತಬೇಕಿದೆ. ಹಿಂದುತ್ವದ ಹೆಸರಲ್ಲಿ ದೇಶಪ್ರೇಮಿ ಮುಗ್ಧ ಜನತೆಗೆ ನಶೆ ಏರಿಸಿ, ಎಬ್ಬಿಸಿ ಓಡಿಸಿ, ಮುಂದೆ ರಾತ್ರಿ ಕಂಡ ಗಟಾರಕ್ಕೆ ಹಗಲೇ ಬೀಳಿಸುವ ಸಂಚು ಎಣೆಯುತ್ತಾರೆ ಈ ಪುರೋಹಿತಶಾಹಿಗಳು. ಇದು ಇತಿಹಾಸ ಕಾಲದುದ್ದಕ್ಕೂ ಕಂಡುಂಡ ಕಹಿ ಸತ್ಯ ಕೂಡ.

ನಮ್ಮ ರಾಜ್ಯ ಹಾಗೂ ಕೇಂದ್ರ ಸರಕಾರವು ಕೂಡಲಸಂಗಮ ಅಭಿವೃದ್ಧಿ ಮಾಡ ಹೊರಟಿರುವುದು ಸ್ವಾಗತಾರ್ಹ, ಆದರಣೀಯ, ಶ್ಲಾಘನೀಯ ದಾಖಲರ್ಹ ಮಹಾಸಂಗತಿ. ಆದರೆ ಸರ್ಕಾರವನ್ನು ಆಡಿಸುವ, ಬೀಳಿಸುವ, ಏಳಿಸುವ ಕುತಂತ್ರ ನಡೆಸಬಲ್ಲ ಈ ಸನಾತನ ಶನಿಗಳು ಅದನ್ನು ಸ್ಥಾವರಗುಡಿ ಮಾಡಿಟ್ಟು ಅಲ್ಲೂ ಗಂಟೆ ಜಾಗಟೆ ಶಂಖ ಊದುವ ನರಿಬುದ್ಧಿ ತೋರದಂತೆ ಎಚ್ಚರದಿಂದ ಹೆಜ್ಜೆ ಇಡಬೇಕಿದೆ.

ಅದೊಂದು ಜ್ಞಾನದೇಗುಲ, ವಚನ ಮಂದಿರ, ಚಲನಶೀಲ ಪ್ರಗತಿಪರ ಹಿತ ಚಿಂತನೆ ನಡೆಸುವ ಮೂಲಕ ಶರಣರ ಕಲ್ಯಾಣದ ಮರುಸೃಷ್ಟಿ ಮಾಡುವತ್ತ ಸಾಗುವ ಪ್ರಜ್ಞಾವಂತರ ತಂಗುದಾಣವಾಗುವಂತೆ ನೋಡಿಕೊಳ್ಳಬೇಕಿದೆ.

ಪ್ರಸ್ತುತ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ಸೂಕ್ಷ್ಮವಾಗಿ ಗ್ರಹಿಸಿದರೆ ಈ ಪುರೋಹಿತಶಾಹಿಗಳು ತಮ್ಮ ಹಳೆಯ ಪರಂಪರೆಯನ್ನು ವ್ಯವಸ್ಥಿತವಾಗಿ ಭದ್ರಗೊಳಿಸುವ ಹುನ್ನಾರ ಮಾಡುತ್ತಿದ್ದಾರೆ. ಮೌಢ್ಯ, ಕಂದಾಚಾರ, ಶೋಷಣೆಯ ಕಬಂಧ ಬಾಹು ಚಾಚುತ್ತಾ ಕಪಿಮುಷ್ಟಿಯನ್ನು ಬಿಗಿಗೊಳಿಸುತ್ತಿದ್ದಾರೆ ಅನ್ನಿಸದಿರದು.

ಪ್ರಗತಿಪರ ಚಿಂತಕರು ಸಹ ವಯೋಸಹಜ ನಿರಾಸಕ್ತಿಯಿಂದ ಅಥವಾ ಸ್ವಯಂ ಲಾಭಕೋರತನದಿಂದ ಅವಕಾಶವಾದಿಗಳಾಗಿ ಅಧಿಕಾರ, ಹಣ, ಗೌರವ ಸ್ಥಾನಮಾನ, ಪ್ರಶಸ್ತಿ ಪುರಸ್ಕಾರಗಳ ಹಾರ ತುರಾಯಿ, ಪೇಟ, ಕಿರೀಟಗಳಿಗೆ ತಲೆಬಾಗಿ ಬೀಗಿ ರಾಜಿಯಾಗುತ್ತಿದ್ದಾರೆ. ಅವರ ಹೋರಾಟಗಳು ಕೇವಲ ಭಾಷಣ, ವಿಚಾರ ಸಂಕಿರಣ, ಗೋಷ್ಠಿಗಳಿಗೆ ಸೀಮಿತವಾಗಿ ಹೋಗಿವೆ. ಸಿಕ್ಕಷ್ಟು ಬಾಚಿಕೊಳ್ಳುವ ಸಂಸ್ಕೃತಿಯು ಸಾಮಾನ್ಯವಾಗಿ ಹೋಗುತ್ತಿದೆ. ತಮ್ಮ ಚಿಂತನೆ, ಬದ್ಧತೆ, ವಿಚಾರಶೀಲತೆ,



ಹನ್ನೆರಡನೆಯ ಶತಮಾನದಲ್ಲಿ ಶರಣರು ಕ್ರಾಂತಿಯ ಕಹಳೆಯೂದಿ ಬಿದ್ದ ಜನತೆಯು ತಲೆ ಎತ್ತಿ ನಿಲ್ಲುವಂತೆ ಮಾಡಿದರು. ನಡೆವ, ನುಡಿವ, ಬರೆವ, ಬದುಕುವ ನಿಜಮಾರ್ಗ ನಿರ್ಮಿಸಿಕೊಟ್ಟರು.

ಪ್ರಾಮಾಣಿಕತನವನ್ನು ಅಲುಗಾಡಿಸುವ ಆರ್ಥಿಕ ಅಭಿವೃದ್ಧಿಯ ಅನಿವಾರ್ಯತೆಯು ವ್ಯಕ್ತಿತ್ವವನ್ನು ಬದಲಿಸುವಷ್ಟು ಅನಿವಾರ್ಯತೆ ಸೃಷ್ಟಿಸುತ್ತಿದೆ.

ಜಾಗತೀಕರಣವು ಭಾರತೀಯರ ಬಹುಸಂಸ್ಕೃತಿಗಳ ಸ್ವಂತ ಆಲೋಚನೆ, ಬದುಕು, ಭಾಷೆ ಮರೆಯುವಂತೆ ಮಾಡುತ್ತಿದೆ. ಇದರ ಮರೆಯಲ್ಲಿ ಅವಕಾಶವಾದಿ ಧರ್ಮಾಂಧರು - ಜಾತ್ಯಾಂಧರು ಎಲ್ಲೆಡೆ ವ್ಯಾಪಿಸುತ್ತಿರುವ ಹಿನ್ನೆಲೆಯಲ್ಲಿ ಎಲ್ಲರ ಮುಂದೆ ಒಗ್ಗಟ್ಟಿನ ಮಂತ್ರ ಪಠಿಸುತ್ತ ಹಿಂದಿನಿಂದ ಎಲ್ಲರನ್ನೂ, ಎಲ್ಲವನ್ನೂ ತಮ್ಮ ಹಿಡಿತಕ್ಕೆ ತೆಗೆದುಕೊಳ್ಳುವ ಕುತಂತ್ರ ರಾಜಕೀಯ ರಾಜಾರೋಸ್ತು ನಡೆಯುತ್ತಿದೆ.

ಬಹುಸಂಖ್ಯಾತ ಬಹುಸಂಸ್ಕೃತಿಯ ಮುಗ್ಧ ಜನತೆಯು ಇವರ ಮೋಸದ ಜಾಲದ ಬಗ್ಗೆ ಅರಿಯದೆ ಏಕತೆಯ ನೆಪದಲ್ಲಿ ಭಯಾನಕ ಏಕ ಸಂಸ್ಕೃತಿಯ ಭೂತಕ್ಕೆ ಆಹಾರವಾಗಲು ಮುಂದಾಗಿರುವುದು ವಿಷಾದನೀಯ.

ಹನ್ನೆರಡನೆಯ ಶತಮಾನದಲ್ಲಿ ಶರಣರು ಕ್ರಾಂತಿಯ ಕಹಳೆಯೂದಿ ಬಿದ್ದ ಜನತೆಯು ತಲೆ ಎತ್ತಿ ನಿಲ್ಲುವಂತೆ ಮಾಡಿದರು. ನಡೆವ, ನುಡಿವ, ಬರೆವ, ಬದುಕುವ ನಿಜಮಾರ್ಗ ನಿರ್ಮಿಸಿಕೊಟ್ಟರು.

ಅಂದಿನಿಂದಲೂ ತಮ್ಮ ಕುಟಿಲತನದಿಂದ ರಾಜಪ್ರಭುತ್ವದ ವಾರಸುದಾರರನ್ನು ಎಡಬಿಡಂಗಿಗಳನ್ನಾಗಿ ಮಾಡಿಕೊಂಡು ಶರಣ ಧರ್ಮವನ್ನು ಸರ್ವನಾಶ ಮಾಡಲು ಮಾಡಿದ ಹುನ್ನಾರಗಳು ಐತಿಹಾಸಿಕ ರಕ್ತಸಿಕ್ತ ಹೆಜ್ಜೆಗಳಾಗಿ ಉಳಿದಿವೆ.

ಬಸವಾಲ್ಲಮರಾದಿ ವಚನಕಾರರು ಕಟ್ಟಿದ ಶರಣ ಧರ್ಮವನ್ನು ರಕ್ಷಿಸಿದರೆ ಲಿಂಗಾಯತರು ಉಳಿಯುತ್ತೇವೆ. ಇದೆಲ್ಲಾ ಗೊತ್ತಿದ್ದೂ ತಮ್ಮ ಧರ್ಮಶ್ರದ್ಧೆ ಬಿಟ್ಟು ಸನಾತನಿಗಳ ಬಾಲಹಿಡಿದರೆ ತಪ್ಪು ದಾರಿ ಹಿಡಿದಿದ್ದೇವೆ ಎಂದೇ ಅರಿಯಬೇಕು. ಅವರ ಬಾಲಮುರಿದು ಸವಾರಿ ಮಾಡುವ ಕೌಶಲ್ಯ ಜಾಣ್ಮೆಯನ್ನು ಕಲಿಯಬೇಕಿದೆ.

ನಾವು ಈ ಶನಿಗಳ ಕಾಟದಿಂದ ತಪ್ಪಿಸಿಕೊಳ್ಳಲು ಶರಣರ ವಚನಗಳೇ ನಮಗೆ ಶ್ರೀರಕ್ಷೆ... ಅವೇ ನಮಗೆ ದಾರಿದೀಪ. ಅವುಗಳಲ್ಲಿ ಆತ್ಮಶಕ್ತಿ, ಆತ್ಮಶೋಧನೆ, ಆತ್ಮಾಭಿಮಾನದ ಜೀವಸೆಲೆ ಇದೆ. ವಚನಗಳ ಓದು, ಅಧ್ಯಯನ, ಪ್ರಸಾರ, ಪ್ರಚಾರ ಕಾರ್ಯವನ್ನು ಎಂದಿಗಿಂತ ಇಂದು ನಡೆಸಲು ಮುಂದಾಗಬೇಕಿದೆ.

12 ನೆಯ ಶತಮಾನದ ಈ ವಚನ ದೀಪ್ತಿಯ ಆಶಯಗಳನ್ನು 21 ನೇಯ ಶತಮಾನದಲ್ಲಿ ಆರದ ಬೆಳಕಾಗಿಸುವ ಸುಸಂದರ್ಭ ಬಂದಿರುವುದು ಸೌಭಾಗ್ಯವೇ ಸರಿ. ಆದರೆ ಅಲ್ಲಿ ಕಿಂಚಿತ್ತೂ ಶರಣ ವಿರೋಧಿಗಳ ಷಡ್ಯಂತರ ನಡೆಯದಂತೆ ಆಸ್ಥೆ ವಹಿಸಬೇಕಿದೆ. ಅಲ್ಲಿ ಕಟ್ಟುವ ಮಂಟಪ ಕೇವಲ ತಾಂತ್ರಿಕ ಅನುಭವ ನೈಪುಣ್ಯತೆಯ ವಿಹಂಗಮ ಸ್ಥಾವರ ಕಟ್ಟಡ ಹಾಗೂ ಪ್ರವಾಸಿ ಸ್ಥಳವಷ್ಟೇ ಆಗದೆ; ಶರಣರ ಜಂಗಮ ಸ್ವರೂಪಿ ಅನುಭಾವ ಪಡೆವ ಶರಣ ಧರ್ಮ ನಿಷ್ಠೆಯ ಅಧ್ಯಯನ, ಅನುಷ್ಠಾನ, ಆಚರಣೆಗಳನ್ನು ಜಗದ ಜನಮಾನಸರಲ್ಲಿ ಮೂಡಿಸುವ, ರೂಢಿಸುವ, ಬೆಳೆಸಿ, ಉಳಿಸುವ ಪ್ರಾಯೋಗಿಕ ಕ್ರಿಯಾಶೀಲ ಅನುಭಾವ ಮಂದಿರವಾಗಿಸಬೇಕಿದೆ.

ಈಗಾಗಲೇ ಈ ಠಕ್ಕರು ತೋಡಿರುವ ಕೆಸರು ಗುಂಡಿಗೆ ಬಿದ್ದಿದ್ದೇವೆ. ಅಲ್ಲಿಂದ ಮೇಲೇಳಲು ಶರಣರ ವಚನಗಳ ಓದು, ವಿಚಾರಗಳ ಅನುಷ್ಠಾನ, ತತ್ವಗಳ ಅನುಸಂಧಾನ ಮಾಡುವುದೊಂದೇ ನಮಗಿರುವ ಮುಕ್ತಿ ಮಾರ್ಗ. ನಾವು ಬೇಗ ಎಚ್ಚರಗೊಳ್ಳೋಣ. ದೇಹವನ್ನೇ ದೇವಾಲಯ ಮಾಡಿಕೊಂಡು ಇಷ್ಟಲಿಂಗ ಧರಿಸಿ ಶರಣರ 'ನುಡಿದಂತೆ ನಡೆ ಇದೇ ಜನ್ಮಕಡೆ' ಎಂಬ ಸತ್ಯವನ್ನು ಅರಿತು, ಬೆರೆತು ಬಾಳೋಣ. ನಿತ್ಯ ಒಂದಾದರೂ ವಚನವನ್ನು ಓದುತ್ತಾ ಸಾಗಿದರೆ ಅವು ನಮ್ಮನ್ನು ನಿಜತ್ವವನ್ನು ತೋರಿಸುತ್ತವೆ. ಬನ್ನಿ ನಾವು ಶರಣ ಪಥ ಹಿಡಿದು ನಡೆಯೋಣ-ನುಡಿಯೋಣ.

- ಆರ್. ಶಿವಕುಮಾರಸ್ವಾಮಿ ಕುರ್ಕಿ
ದಾವಣಗೆರೆ.
shivukurki1@gmail.com

# ಸರಪಳಿ ತುಂಡರಿಸುವುದು ಎಷ್ಟು ಸರಿ...?

(3ನೇ ಪುಟದಿಂದ) ಕಣ್ಣೆದುರು ಇರುವಾಗ ಮತ್ತೇ ಅಂತಹುದ್ದೇ ಅನಾಹುತದ ಅಗತ್ಯವಿದೆಯೇ?

ಸುತ್ತ ಇರುವ ಗಲೀಜು ಮೋರಿಯನ್ನು ಮುಚ್ಚಲು ವರ್ಷಗಳಾದರೂ ಸಾಧ್ಯವಾಗಿಲ್ಲ. ಇಡೀ ಕೆರೆಯ ಐದು ಎಕರೆ ಜಾಗದಲ್ಲಿ ಶೌಚಾಲಯಗಳಿಲ್ಲ. ಇಲ್ಲಿಗೆ ಹವಾ ಸೇವನೆಗೆ ಬರುವ ಜನರಿಗೆ ದುರ್ನಾತದ ಕೊಡುಗೆ. ಮಹಿಳೆಯರಿಗೆ ಶೌಚದ ಸಮಸ್ಯೆ ದಶಕಗಳಿಂದ ಪರಿಹಾರವಾಗಿಲ್ಲ. ಕೆರೆಯ ಸುತ್ತ ಕಾನೂನಾತ್ಮಕವಾಗಿ ಇರಬೇಕಾದ ಬಫರ್ ವಲಯವೆಲ್ಲಿದೆ?

ನಗರದ ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಒಂದು ಪರಿಸರ ಅಧ್ಯಯನ ಕೇಂದ್ರವಾಗಬೇಕಾದ ಜಾಗವಿದು. ಅಸಂಖ್ಯಾತ ಸಸ್ಯ ಮತ್ತು ಪ್ರಾಣಿ ಸಂಕುಲಗಳ ಅಧ್ಯಯನಕ್ಕೆ ಪ್ರಶಸ್ತ ಸ್ಥಳ. ಈಗ ಇರುವ ಜಾಗವನ್ನೇ ಬಳಸಿಕೊಂಡು ಚಿಟ್ಟೆ ಪಾರ್ಕ್ ನಿರ್ಮಾಣ ಮಾಡಬಹುದು. ಒಣಗಿ ಹೋಗಿರುವ ಮರಗಳನ್ನು ತೆಗೆದು ಹೊಸದಾಗಿ ಸ್ಥಳೀಯವಾಗಿ ಬೆಳೆಯುವ ಮರಗಳನ್ನು ನೆಡಬಹುದು. ರಾಜ್ಯದಲ್ಲಿ ಇಂತಹ ಕೆಲಸಗಳಿಗೆ ಸದಾ ಸಹಯೋಗ ನೀಡುವ ತಜ್ಞರನ್ನು ಸಂಪರ್ಕಿಸಿ ಒಂದು ಸುಸ್ಥಿರ ಯೋಜನೆ ರೂಪಿಸಬಹುದು. ಕೆರೆಯಲ್ಲಿ ಈಗಿರುವ ನಡುಗಡ್ಡೆಯನ್ನು ಉಳಿಸಿಕೊಂಡು ಅದೇ ರೀತಿಯ ನಡುಗಡ್ಡೆಗಳನ್ನು ನಿರ್ಮಿಸಿ ಮರಗಳನ್ನು ನೆಟ್ಟರೆ ಯಾವುದೇ ನಿರ್ವಹಣಾ ವೆಚ್ಚವಿಲ್ಲದೇ ಆಹ್ಲಾದಕರ ವಾತಾವರಣವನ್ನು ಸೃಷ್ಟಿಸಬಹುದು.

ಜಿಲ್ಲೆಯ ರಸ್ತೆ ಅಭಿವೃದ್ಧಿಕೋಸ್ಕರ ಕಡಿದ ದೊಡ್ಡ ಮರಗಳ ಬಡ್ಡೆಗಳನ್ನು ಬೇರು ಸಮೇತ ತೆಗೆದು ಅಲ್ಲಲ್ಲಿ ತಿರುಗಿಸಿ ಇಟ್ಟರೆ ಹಕ್ಕಿಗಳ ವಿಶ್ರಾಂತಿಗೆ ಸ್ಥಳವಾಗುವುದು. ಈ ಕೆಲಸಗಳಿಗೆ ಹೆಚ್ಚೇನು ಖರ್ಚಾಗುವುದಿಲ್ಲ. ಶಾಲೆ ಮತ್ತು ಕಾಲೇಜುಗಳಲ್ಲಿ ಪರಿಸರದ ಬಗ್ಗೆ ಪಾಠ ಮಾಡಿ, ನಂತರ ಇಲ್ಲಿ ಮಕ್ಕಳಿಗೆ ಪ್ರಾಯೋಗಿಕ ಕಲಿಕೆಗೆ ಅವಕಾಶ ಕಲ್ಪಿಸಿ ಕೊಡಬಹುದು. ಇದರಿಂದ ಪರಿಸರದ ಮಹತ್ವವನ್ನು ಮಕ್ಕಳು ಬಹಳ ಚೆನ್ನಾಗಿ ಅರಿತುಕೊಳ್ಳುತ್ತಾರೆ. ಈ ಜಾಗವನ್ನು ಪ್ಲಾಸ್ಟಿಕ್-ಮುಕ್ತ ತಾಣವೆಂದು ಘೋಷಿಸಿ, ಇಲ್ಲಿರುವ ಮೂರು ಗೇಟುಗಳಲ್ಲಿ ಸೂಕ್ತ ಪಹರೆದಾರರನ್ನು ನೇಮಿಸಿ, ಬರುವ ಸಾರ್ವಜನಿಕರು ಪ್ಲಾಸ್ಟಿಕ್ ವಸ್ತುಗಳನ್ನು ಕೆರೆಯ ಪ್ರದೇಶಕ್ಕೆ ತರದಂತೆ ತಡೆಯುವುದು ಅಗತ್ಯ. ಈ ಕೆರೆಯನ್ನು ಒಂದು ಅಧ್ಯಯನ ಕೇಂದ್ರವಾಗಿ ಮಾರ್ಪಡಿಸಿ ಮತ್ತು ಪ್ರಕೃತಿಯನ್ನು ಹಾಗೇಯೇ ಉಳಿಸಿಕೊಳ್ಳುವುದರಿಂದ ದಾವಣಗೆರೆ ಮುಂದಿನ ಪೀಳಿಗೆಗೆ ಒಂದು ಮಾದರಿ ಕೆರೆಯನ್ನು ಸಮರ್ಪಿಸಬಹುದು.

ಸಾವಿರಾರು ರೂಪಾಯಿಗಳನ್ನು ವೆಚ್ಚ ಮಾಡಿ ಜನರು ಪ್ರಕೃತಿಯ ಮಡಿಲಲ್ಲಿರಲು ರೆಸಾರ್ಟ್‌ಗಳಿಗೆ ಹೋಗುವ ಬದಲು ಮಗ್ಗುಲಲ್ಲೇ ಇರುವ ಕುಂದುವಾಡ ಕೆರೆಗೆ ಬರಬಹುದು. ಇಲ್ಲದಿದ್ದರೆ ತಳಕು ಬಳುಕಿಗೆ ಮನ್ನಣೆ ಕೊಟ್ಟು, ಕೆರೆಯ ಸ್ನಿಗ್ಧ ಸೌಂದರ್ಯ ಮತ್ತು ಪರಿಸರದ ಜೈವಿಕ ಚಕ್ರ ನಶಿಸಿ ಹೋಗುವಂತೆ ಆಗುವುದರಲ್ಲಿ ಸಂಶಯವಿಲ್ಲ. ಜನಸಾಮಾನ್ಯರ ತೆರಿಗೆ ಹಣದಿಂದ ಪರಿಸರ ನಾಶ ಎಷ್ಟು ಸರಿ? ಪ್ರಜ್ಞಾವಂತ ಅಧಿಕಾರಿ ವರ್ಗ ಮತ್ತು ನಾಗರಿಕರು ಈ ಬಗ್ಗೆ ಗಮನ ಹರಿಸುವರೇ?

## ಇಂದು ಕೊರೊನಾ ತಾಲೀಮು

(1ನೇ ಪುಟದಿಂದ) ಫಲಾನುಭವಿಗಳನ್ನು ಗುರುತಿಸಲಾಗಿರುತ್ತದೆ. ಇವರಲ್ಲಿ 6,230 ಸರ್ಕಾರಿ ಸಿಬ್ಬಂದಿ ಹಾಗೂ 10,482 ಖಾಸಗಿ ಆರೋಗ್ಯ ಸಿಬ್ಬಂದಿಯಾಗಿದ್ದಾರೆ. ಜನವರಿ 10ರವರೆಗೆ ಮಾಹಿತಿ ನೋಂದಣಿ ಮಾಡಿಸಲು ಅವಕಾಶವಿದೆ ಎಂದು ಜಿಲ್ಲಾಧಿಕಾರಿ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಎಸ್.ಆರ್.ಉಮಾಶಂಕರ್, ಅಪರ ಜಿಲ್ಲಾಧಿಕಾರಿ ವೀರಮಲ್ಲಪ್ಪ, ಉಪವಿಭಾಗಾಧಿಕಾರಿ ಮಮತ ಹೊಸಗೌಡರ್, ಡಿಹೆಚ್‌ಓ ನಾಗರಾಜ್, ಜಿಲ್ಲಾ ಸರ್ವೇಕ್ಷಣಾ ಅಧಿಕಾರಿ ಡಾ.ರಾಘವನ್, ಆರ್‌ಸಿಹೆಚ್ ಅಧಿಕಾರಿ ಡಾ.ಮೀನಾಕ್ಷಿ ಮತ್ತಿತರರು ಉಪಸ್ಥಿತರಿದ್ದರು.

# ನಾಡಿನ ವೀರಶೈವ ಮಠಗಳು ಶ್ರೇಷ್ಠ ಪರಂಪರೆಯ ಪೀಠಗಳು


(1ನೇ ಪುಟದಿಂದ) ಮುಂದುವರೆದಿದೆ. ಮಠದ ಭಕ್ತರು ಆಂಧ್ರ ಪ್ರದೇಶ, ಮಹಾರಾಷ್ಟ್ರ, ಕರ್ನಾಟಕ, ತೆಲಂಗಾಣ ಮುಂತಾದ ಕಡೆಗಳಲ್ಲಿ ಇದ್ದಾರೆ.

ಶ್ರೀಶೈಲ ಜಗದ್ಗುರುಗಳು ಪ್ರವಾಹ ಸಮಯದಲ್ಲಿ ಮನೆ ಕಳೆದುಕೊಂಡು ನಿರಾಶ್ರಿತರಾದವರಿಗೆ ಮನೆ ಕಟ್ಟಿಸಿಕೊಡುವ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡು, ಅವಕಾಶ ವಂಚಿತರಿಗೆ ಸಾಮಾಜಿಕ ನ್ಯಾಯವನ್ನು ಕೊಡಿಸುವ ಕಾರ್ಯ ಮಾಡಿದ್ದು ಶ್ಲಾಘನೀಯ ಎಂದರು.

ನಾಡಿನಲ್ಲಿ 36 ಸಾವಿರ ಮಠಗಳಿವೆ. ಅದರಲ್ಲಿ ಇತ್ತೀಚಿನ ದಿನಗಳಲ್ಲಿ ಉಪಜಾತಿಯ ಮಠಗಳು ಸಹ ಹುಟ್ಟಿಕೊಂಡಿವೆ. 29,400 ಕಂದಾಯ ಗ್ರಾಮಗಳು ಮತ್ತು 58,640 ವಸತಿ ಕೇಂದ್ರಗಳಿವೆ. ಆದರೆ ಪ್ರತಿಯೊಂದು ಜನವಸತಿ ಕೇಂದ್ರಗಳು ಒಂದು ಮಠಗಳಲ್ಲಿ ಇವೆ. ನಾಡಿನ ಎಲ್ಲ ಮಠ ಪರಂಪರೆ ಮತ್ತು ಗುರಿ ಮಾನವ ಕಲ್ಯಾಣವಾಗಿದೆ. ಎಲ್ಲಾ ವರ್ಗದ ಜನರಿಗೆ ರಕ್ಷಣೆ ನೀಡಿರುವುದು ಭಾರತದ ಸಂಸ್ಕೃತಿಯೆನಿಸಿದೆ ಎಂದು ಮಠಗಳ ಮಹತ್ವ ಸಾರಿದರು.

ಪ್ರಾಚೀನ ಕಾಲದಲ್ಲಿ ಗುರುಕುಲ ಮತ್ತು ಆಶ್ರಮಗಳು ಮನುಷ್ಯನ ಬೇಕು ಬೇಡಗಳ ಕಡೆ ಗಮನ ಹರಿಸುತ್ತಾ ಬಂದು ತದನಂತರದಲ್ಲಿ ಅವುಗಳು ಪರಿವರ್ತನೆ ಆಗಿ ಮಠಗಳಾಗಿವೆ. ಶೂದ್ರರು ಶಿಕ್ಷಣದಿಂದ ವಂಚಿತರಾದ ಕಾಲದಲ್ಲಿ ಅವರಿಗೆ ನಾಡಿನ ಮಠಗಳು ಶಿಕ್ಷಣ ಸಂಸ್ಥೆಗಳನ್ನು ತೆರೆದು ಅಕ್ಷರ ದಾಸೋಹ ಕೈಗೊಂಡವು. ಸರ್ಕಾರ ಅನೇಕ ಸೌಲಭ್ಯಗಳ ಮೂಲಕ ಮಕ್ಕಳಿಗೆ ಶಿಕ್ಷಣ ನೀಡುತ್ತಿದ್ದರೂ ಕೂಡ ಶೇ. 66 ರಷ್ಟು ಮಾತ್ರ ವಿದ್ಯಾವಂತರು ಇದ್ದಾರೆ. ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರು ಶ್ರೀಶೈಲ ಅಭಿವೃದ್ಧಿಗೆ 10 ಕೋಟಿ ರೂಪಾಯಿ ಮಂಜೂರು ಮಾಡಿದ್ದು ಪ್ರಸ್ತುತ 5 ಕೋಟಿ ರೂ. ಮೊತ್ತದ ಚೆಕ್ ನೀಡಿದ್ದಾರೆ ಎಂದರು.

ಸಂಸದ ಜಿ.ಎಂ. ಸಿದ್ದೇಶ್ವರ ಮಾತನಾಡಿ, ನಾಡಿನ ಜನರ ಒಳಿತಿಗಾಗಿ ಶ್ರೀಶೈಲ ಪೀಠವು ಅನೇಕ ಸಮಾಜಮುಖಿ ಕಾರ್ಯಗಳನ್ನು ಮಾಡುತ್ತಾ ಬಂದಿದೆ. ಅದನ್ನು ಉಳಿಸಿಕೊಂಡು,



ಬೆಳಸಿಕೊಂಡು ಹೋಗುವಂತಹ ಕಾರ್ಯವನ್ನು ಯುವ ಪೀಳಿಗೆ ಮಾಡಬೇಕಾಗಿದೆ. ಹರಿಹರ ನಗರದಲ್ಲಿ ನಿರ್ಮಾಣವಾಗುತ್ತಿರುವ ಸಮುದಾಯ ಭವನ ನಿರ್ಮಾಣಕ್ಕೆ ನಾನು ಕೂಡ ಎಲ್ಲಾ ರೀತಿಯ ಸಹಾಯ ಮಾಡುವುದಾಗಿ ಹೇಳಿದರು.

ದಾವಣಗೆರೆ ಶಾಸಕ ಶಾಮನೂರು ಶಿವಶಂಕರಪ್ಪ ಮಾತನಾಡಿ ನಾಡಿನ ವೀರಶೈವ ಮಠಗಳು ಬಡವರ ಮತ್ತು ಶೋಷಿತ ವರ್ಗದ ಜನರಿಗೆ ಶಿಕ್ಷಣ ಸಂಸ್ಥೆಗಳನ್ನು ತೆರೆದು ಆ ಮೂಲಕ ಸಮಾಜದ ಅಂಧಕಾರವನ್ನು ಹೋಗಲಾಡಿಸುವ ಕಾರ್ಯವನ್ನು ಮಾಡಿದ್ದಾರೆ. ಇಲ್ಲಿನ ಸಮುದಾಯ ಭವನ ನಿರ್ಮಾಣಕ್ಕೆ ಸರ್ಕಾರದ ವತಿಯಿಂದ ಎಷ್ಟು ಸಾಧ್ಯವೋ ಅಷ್ಟು ಅನುದಾನ ಕೊಡಿಸುವ ಕೆಲಸವನ್ನು ನಾನು ಕೂಡ ಮಾಡುತ್ತೇನೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಶ್ರೀಶೈಲ ಪೀಠದ ಜಗದ್ಗುರು ಶ್ರೀ ಚೆನ್ನಸಿದ್ಧರಾಮ ಪಂಡಿತಾರಾಧ್ಯ ಸ್ವಾಮೀಜಿ, ಕೋಡಿಯಾಲ ಹೊಸಪೇಟೆಯ ಶ್ರೀ ಬಾಲಯೋಗಿ ಜಗದೀಶ್ವರ ಸ್ವಾಮಿಗಳು ಮಾತನಾಡಿದರು. ಮಾಜಿ ಶಾಸಕ ಬಿ.ಪಿ. ಹರೀಶ್, ದಾವಣಗೆರೆ ಮಹಾಪೌರ ಬಿ.ಜಿ. ಅಜಯ್ ಕುಮಾರ್, ಜವಳಿ ವರ್ತಕ ಬಿ.ಸಿ. ಉಮಾಪತಿ, ಉದ್ಯಮಿ ಅಥಣಿ ವೀರಣ್ಣ, ಬಿಜೆಪಿ ಜಿಲ್ಲಾಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ, ಸತೀಶ್ ಬೆಂಗಳೂರು, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯಪ್ಪ, ವಿನಾಯಕ ಶಿಕ್ಷಣ ಸಂಸ್ಥೆಯ ಎನ್.ಎ. ಮುರುಗೇಶ್, ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ, ಪೌರಾಯುಕ್ತ ಉದಯಕುಮಾರ್, ಡಿ.ಎಂ. ಹಾಲಸ್ವಾಮಿ, ಬಸವರಾಜ್ ಸ್ವಾಮಿ, ಆರ್.ಟಿ. ಪ್ರಶಾಂತ್, ಎನ್. ಹೆಚ್. ಪಾಟೀಲ್ ಇನ್ನಿತರರಿದ್ದರು.

## ಜಿಗಳಿಯಲ್ಲಿ ಇಂದು ಸಾಮೂಹಿಕ ಮದುವೆ

ಶ್ರೀ ಬೀರಲಿಂಗೇಶ್ವರ ಸ್ವಾಮಿಯ ಕಾರ್ತಿಕೋತ್ಸವದ ಅಂಗವಾಗಿ ದೊಡ್ಡ ಎಡೆಪೂಜೆ ಮತ್ತು ಸಾಮೂಹಿಕ ವಿವಾಹ ಮಹೋತ್ಸವವು ಇಂದು ಬೆಳಿಗ್ಗೆ 9.30 ರಿಂದ ಜರುಗಲಿವೆ.

ಸಾನಿಧ್ಯ : ಶ್ರೀ ನಿರಂಜನಾನಂದಪುರಿ ಸ್ವಾಮೀಜಿ, ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮೀಜಿ.

## ಹಕ್ಕಿಜ್ವರ : ಎಚ್ಚರ ವಹಿಸಲು ಡಿಸಿ ಸೂಚನೆ

(1ನೇ ಪುಟದಿಂದ) ಕೋಳಿ ಫಾರಂ ಪ್ರದೇಶದಲ್ಲಿ ಸೋಂಕು ನಿವಾರಕಗಳನ್ನು ಬಳಸಿ, ಸ್ವಚ್ಛತೆಯನ್ನು ಕಾಪಾಡಿಕೊಳ್ಳುವಂತೆ ಅಧಿಕಾರಿಗಳು ಕೋಳಿ ಫಾರಂಗಳ ಮಾಲೀಕರಿಗೆ ತಾಕೀತು ಮಾಡಬೇಕು. ಪಶುಸಂಗೋಪನೆ ಇಲಾಖೆ ಅಧಿಕಾರಿಗಳು ನಿಯಮಿತವಾಗಿ ಕೋಳಿ ಫಾರಂಗಳಿಗೆ ಭೇಟಿ ನೀಡಿ ಪರಿಸ್ಥಿತಿಯ ಪರಾಮರ್ಶೆ ಮಾಡಬೇಕು ಎಂದು ಸೂಚಿಸಿದರು.

ಜಿಲ್ಲೆಯ ಯಾವುದೇ ಅರಣ್ಯ ಪ್ರದೇಶ, ಕೆರೆ ಕಟ್ಟೆ ನೀರು ನಿಲ್ಲುವ ಪ್ರದೇಶಗಳಲ್ಲಿ ವಲಸೆ ಹಕ್ಕಿಗಳು ಅಥವಾ ಯಾವುದೇ ಹಕ್ಕಿಗಳ ಅಸಹಜ ಸಾವು ಕಂಡುಬಂದಲ್ಲಿ, ಮಾಹಿತಿ ಪಡೆದು ಕೂಡಲೆ ತ್ವರಿತವಾಗಿ ಸ್ಪಂದಿಸುವ ಕಾರ್ಯವಾಗಬೇಕು ಎಂದು ಜಿಲ್ಲಾಧಿಕಾರಿ ಸೂಚಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಪೂಜಾರ್ ವೀರಮಲ್ಲಪ್ಪ, ಉಪವಿಭಾಗಾಧಿಕಾರಿ ಮಮತಾ ಹೊಸಗೌಡರ್ ಇತರರು ಉಪಸ್ಥಿತರಿದ್ದರು.

**ಮನೆ ಮಾರಾಟಕ್ಕಿದೆ**
ಕುವೆಂಪು ಬಡಾವಣೆಯಲ್ಲಿ ಮಾವಿನ ತೋಪು ಆಸ್ಪತ್ರೆ ಹಿಂಭಾಗ, 40x60, North, 3 ಬೆಡ್ ರೂಂ ಮನೆ, ಇಂಡಿಪೆಂಡೆಂಟ್ ಹೌಸ್ ಇದೆ.
ಐನಳ್ಳಿ ಚನ್ನಬಸಪ್ಪ
99166 12110

**ಸೈಟ್‌ಗಳು ಮಾರಾಟಕ್ಕಿವೆ**
ಡಾಲರ್ಸ್ ಕಾಲೋನಿಯಲ್ಲಿ 30x50 ದಕ್ಷಿಣ, 30x50 ಪೂರ್ವ, ಬಾಟ್ಲಿ ಬಿಲ್ಡಿಂಗ್ ಹಿಂಭಾಗ 30x50 ಉತ್ತರ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಹಾಲಿನ ಡೈರಿ ಬಾಡಿಗೆಗೆ ಸಿಗುತ್ತದೆ**
ನಾಗನೂರಿನಲ್ಲಿ ಹಾಲಿನ ಡೈರಿ ಬಾಡಿಗೆಗೆ ಸಿಗುತ್ತದೆ. ಸಂಪರ್ಕಿಸಿ :
ಮೊ. : 94489 66128

**ಸೈಟುಗಳು/ಮನೆಗಳು ಮಾರಾಟಕ್ಕಿವೆ**
ಶಿವಪಾರ್ವತಿ ಬಡಾವಣೆ $38^{1}/_{2}$×40 ಪಶ್ಚಿಮ, 30x40 ಪಶ್ಚಿಮ, 30x40 ಪೂರ್ವ ಮನೆ, ನಿಜಲಿಂಗಪ್ಪ ಬಡಾವಣೆ 30x40 ಉತ್ತರ ಮನೆ, ಮಲ್ಲಿಕಾರ್ಜುನ್ ಬಡಾವಣೆ (ಶಾಮನೂರು) 30x55 ಪೂರ್ವ ಸೈಟ್ ಕೊಡುವುದಕ್ಕೂ, ತೆಗೆದುಕೊಳ್ಳುವುದಕ್ಕೂ ಸಂಪರ್ಕಿಸಿ
ಸುರೇಶ್, 95911 60520
ಐಗೂರು ವಿಜಯ್‌ಕುಮಾರ್, 99457 02495

**3 BHK ಮನೆ ಬಾಡಿಗೆಗೆ ಇದೆ**
ದಾವಣಗೆರೆ ವಿದ್ಯಾನಗರ 2ನೇ ಬಸ್‌ಸ್ಟಾಪ್ ಹತ್ತಿರ, 2A ಮೇನ್, 8ನೇ ಕ್ರಾಸ್ ತರಳಬಾಳು ಬಡಾವಣೆಯಲ್ಲಿ ಮೊದಲನೇ ಮಹಡಿಯಲ್ಲಿ ಉತ್ತಾರಭಿಮುಖದ 3 ಬೆಡ್ ರೂಂ ಮನೆ ಬಾಡಿಗೆಗೆ ಇದೆ. ಬೋರ್, ಕಾರ್ಪೋರೇಷನ್ ನೀರು ಹಾಗೂ ಕಾರ್ ಪಾರ್ಕಿಂಗ್ ಸೌಲಭ್ಯವಿದೆ. ಆಸಕ್ತರು ಸಂಪರ್ಕಿಸಿ:
99026 88442

**ಹುಡುಗರು ಬೇಕಾಗಿದ್ದಾರೆ**
ಎಸ್. ನಿಜಲಿಂಗಪ್ಪ ಬಡಾವಣೆಯ ಅರುಣ್ ಡ್ರೈವಿಂಗ್ ಸ್ಕೂಲ್ ಪಕ್ಕದ ಪೇಪರ್ ಕಪ್ ತಯಾರಿಕಾ ಘಟಕದಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ತಕ್ಷಣ ಸಂಪರ್ಕಿಸಿ.
ಕರೆ ಮಾಡುವ ಸಮಯ : ಬೆ. 9 ರಿಂದ ಸಂಜೆ 5ರ ವರೆಗೆ ಮಾತ್ರ
ಮೊ. 95916 64448

**WANTED**
SALES PERSON
LAKSHMI FLOUR MILL
# 73/1, P.B. No. 312, Shamanur Road, Davangere.
Ph. : 08192-222022
Mob. : 98440 61133

**ಸೈಟ್‌ಗಳು ಮಾರಾಟಕ್ಕಿವೆ**
40x60 East ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ., 60x40 ಮಹಾಲಕ್ಷ್ಮಿ ಲೇಔಟ್‌ನಲ್ಲಿ ಕಾರ್ನರ್., 30x63 ಡಾಲರ್ಸ್ ಕಾಲೋನಿಯಲ್ಲಿ south west cornner.
ಐನಳ್ಳಿ ಚನ್ನಬಸಪ್ಪ
99166 12110

**ಸೈಟ್‌ಗಳು ಮಾರಾಟಕ್ಕಿವೆ**
60x40 ಉತ್ತರ, ಸಿದ್ದವೀರಪ್ಪ ಬಡಾವಣೆಯಲ್ಲಿ, ವಿನಾಯಕ ಬಡಾವಣೆಯಲ್ಲಿ 40x50 ಪೂರ್ವ, ಆಂಜನೇಯ ಬಡಾವಣೆಯಲ್ಲಿ 40x60 ದಕ್ಷಿಣ
ಶಾಮನೂರು ಧನ್ಯಕುಮಾರ್
97415 62589
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ**
ಶ್ರೀಮಾತಾ ವಿದ್ಯಾಸಂಸ್ಥೆ (ರಿ.) ಆಶ್ರಯದಲ್ಲಿ ನಡೆಯುತ್ತಿರುವ ನಂದಗೋಕುಲ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆ, ದೇವರಾಜ ಅರಸ್ ಬಡಾವಣೆ 6ನೇ ಕ್ರಾಸ್ 'ಸಿ' ಬ್ಲಾಕ್, ದಾವಣಗೆರೆ, BA, B.Ed. / MA, B.Ed ತರಬೇತಿ ಹೊಂದಿದ ಕನ್ನಡ ವಿಷಯ ಶಿಕ್ಷಕರುಗಳು ಬೇಕಾಗಿದ್ದಾರೆ.
Mob. 99640 17729

**GOWDOWN FOR RENT AT APMC**
17ft height, 27x95 size
87470 06444
94480 13082

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು 18 ರಿಂದ 30 ವರ್ಷದೊಳಗಿನ ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಗ್ರಾಮಾಂತರ ಪ್ರದೇಶದವರಿಗೆ ಊಟ, ವಸತಿ ಸೌಲಭ್ಯವಿದೆ.
ಸಂಪರ್ಕಿಸಿ : 98442-94446

**ಬೇಕಾಗಿದ್ದಾರೆ**
Sales Excutive Boys
Only Contact directly
Sri kuruvatti Basaveshwar Pharma
P.J. Extenstion, College Road, Near IDBI Bank Davanagere.
77601 57691, 95139 15590

**ಬೇಕಾಗಿದ್ದಾರೆ**
ಅನುಭವವುಳ್ಳ ಸೇಲ್ಸ್ ರೆಪ್ರೆಜೆಂಟೇಟಿವ್ ಬೇಕಾಗಿದ್ದಾರೆ.
ಆಸಕ್ತರು ಸಂಪರ್ಕಿಸಿ :
ಖುಷಿ ಎಂಟರ್ ಪ್ರೈಸಸ್
94485 89431

**ಬೇಕಾಗಿದ್ದಾರೆ**
ನಮ್ಮ ಅಂಗಡಿಯಲ್ಲಿ ಸಾಮಾನು ಕೊಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ
ಆನಂದ ಹಾರ್ಡ್‌ವೇರ್ಸ್ ಅಂಡ್ ಪೇಂಟ್ಸ್
ಮಂಡಿಪೇಟೆ, ದಾವಣಗೆರೆ.

**ಜಾಗ ಮಾರಾಟಕ್ಕಿದೆ**
ದಾವಣಗೆರೆ ಮುದ್ದಳ್ಳಿ ತೋಟ, ಪೊಲೀಸ್ ಪೆರೇಡ್ ಗ್ರೌಂಡ್ ಎದುರು 12.8 ಗುಂಟೆ ಜಾಗ ಮಾರಾಟಕ್ಕಿದೆ. ಸಂಪರ್ಕಿಸಿ:
87109 64433

**State Bank of India**
ಗ್ರಾಹಕರ ಸೇವಾ ಕೇಂದ್ರದಲ್ಲಿ
ಜನ್‌ಧನ್ ಖಾತೆ ಮಾಡಲಾಗುತ್ತದೆ ('0' Account Open)
# 264/1 ಮಹಾರಾಜ ಪೇಟೆ, ವಿಠ್ಠಲ ಮಂದಿರ ಹತ್ತಿರ, ದಾವಣಗೆರೆ.
99806 10005

**ಬೇಕಾಗಿದ್ದಾರೆ**
ಸೆಕ್ಯುರಿಟಿ ಗಾರ್ಡ್ಸ್ ಬೇಕಾಗಿದ್ದಾರೆ. ಸಂಪರ್ಕಿಸಿ :
89715 04492
81056 99985
99004 67508

**WANTED**
Cashier, Sales girls
Computer Operator
ಸಂಪರ್ಕಿಸಿ:
ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರಸ್ತೆ, ದಾವಣಗೆರೆ.

**ಬೇಕಾಗಿದ್ದಾರೆ**
PCB ಬೋರ್ಡ್ ಸಾಲ್ಡ್ರಿಂಗ್ ಮಾಡಲು ಮತ್ತು ಪ್ಯಾಕಿಂಗ್ ಮಾಡಲು ಮಹಿಳೆಯರು ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ:
74116 69682
99456 94026

**ಮನೆ ಬಾಡಿಗೆಗೆ ಇದೆ**
ಸಿದ್ದವೀರಪ್ಪ ಬಡಾವಣೆ 9ನೇ ಕ್ರಾಸ್, ಭದ್ರಾ ಕಾಲೇಜ್ ಹಿಂಭಾಗ, 1BHK ಮನೆ ಬಾಡಿಗೆಗೆ ಇದೆ.
90080 55813

**Room to-let**
Room for Rent in MCC 'B' Block 8th Main
99721 02927

**ಹಾಲ್ ಬಾಡಿಗೆಗಿದೆ**
800 sqft ಹಾಲ್, ಮೊದಲನೇ ಮಹಡಿ ಮಾಮಾಸ್ ಜಾಯಿಂಟ್ ರೋಡ್, ಎಂ.ಸಿ.ಸಿ. 'ಬಿ' ಬ್ಲಾಕ್,
94489 21346
82177 72482

**ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ**
ಹರ್ಷ ಹಾರ್ಡ್‌ವೇರ್ ಅಂಡ್ ಪೇಂಟ್ಸ್
ಸುಭಾಷ್ ರೋಡ್, ಅಶೋಕ ಚಿತ್ರಮಂದಿರದ ಎದುರು, ದಾವಣಗೆರೆ. ದೂರವಾಣಿ ಸಂಖ್ಯೆ
08192 254787

**JOBS**
MCS ACADEMY
Training & Placement Cell
98444 92888

**ಬೇಕಾಗಿದ್ದಾರೆ**
ಅಂಗಡಿಯಲ್ಲಿ ಕೆಲಸ ಮಾಡಲು 18 ರಿಂದ 30 ವರ್ಷದೊಳಗಿನ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
ಪ್ರಕಾಶ ಟಿ.ವಿ. ಸೆಂಟರ್
ಕುರುಬರ ಹಾಸ್ಟೆಲ್ ಎದುರು, ಶ್ರೀ ಮುರುಘರಾಜೇಂದ್ರ ಕಾಂಪ್ಲೆಕ್ಸ್, ಹದಡಿ ರಸ್ತೆ, ದಾವಣಗೆರೆ.

**Offer Price**
ANU SOLAR
200 ಲೀ Rs 16, 500
99645 11172
99646 13790

**House For Rent Long Term & Short Term Available**
with all Amenities cot, bed, fan, light, UPS, internet, T.V, Dining table, Geyser, Kitchen, Stove, Gas etc.
94800 73451

**ಗೌರವಾನ್ವಿತ ಜಿಲ್ಲಾಧಿಕಾರಿಗಳವರ ನ್ಯಾಯಾಲಯ, ದಾವಣಗೆರೆ.**
ಪ್ರಕರಣ ಸಂಖ್ಯೆ : ಆರ್.ಎ/ಸಿ.ಆರ್.-04/2020-21
ಅಪೀಲುದಾರರು : ಶ್ರೀಮತಿ ಬಿ. ನಾಗರತ್ನಮ್ಮ ಕೋಂ. ಲೇ|| ಬಿ.ಬಸಪ್ಪ
3ನೇ ಮೇನ್, 9ನೇ ಕ್ರಾಸ್, ವಿನೋಬನಗರ, ದಾವಣಗೆರೆ.
ವಿರುದ್ಧ
ಎದುರುದಾರರು : ಶ್ರೀ ದುರುಗೋಜಿರಾವ್ ಬಿನ್ ನಿಂಗೋಜಿರಾವ್ ಮತ್ತು ಇತರರು
ಸಾರ್ವಜನಿಕ ನೋಟೀಸು
ಈ ಮೇಲ್ಕಾಣಿಸಿದ ಅಪೀಲುದಾರರು ದಾವಣಗೆರೆ ತಾ|| ಬೆಳವನೂರು ಗ್ರಾಮದ ರಿ.ಸ.ನಂ. 108/1ಪಿ3 ರಲ್ಲಿ 0-29 ಗುಂಟೆ ಮತ್ತು 108/3ಪಿ1 ರಲ್ಲಿ 0-35 ಗುಂಟೆ ಜಮೀನುಗಳು ಶ್ರೀ ದುರುಗೋಜಿರಾವ್ ಮತ್ತು ಮಹದೇವಪ್ಪ ಎಂದು ಜಂಟಿಯಾಗಿ ನಮೂದಿಸಿರುವ ಈ ಎರಡೂ ಸ್ವತ್ತುಗಳ ಮೇಲೆ ಮಾನ್ಯ ಜಿಲ್ಲಾಧಿಕಾರಿಗಳವರ ನ್ಯಾಯಾಲಯದಲ್ಲಿ ಸಂಖ್ಯೆ ಆರ್.ಎ. ಸಿ.ಆರ್./04/20-21, ದಾವೆ ಹೂಡಿರುತ್ತಾರೆ. ಸದರಿ ದಾವೆಯಲ್ಲಿ 1ನೇ ಎದುರುದಾರರು ಶ್ರೀ ದುರುಗೋಜಿರಾವ್ ಬಿನ್. ನಿಂಗೋಜಿರಾವ್ ಇವರನ್ನು ಎದುರುದಾರನಾಗಿ ಮಾಡಿರುವ ಮೇರೆಗೆ ಸದರಿಯವರಿಗೆ ನೋಟಿಸ್ ಜಾರಿ ಮಾಡಿದ್ದು ನೋಟಿಸ್ ಸ್ವೀಕರಿಸಿರುವುದಿಲ್ಲ. ಸದರಿಯವರ ವಿಳಾಸ ಪತ್ತೆಯಾಗಿರುವುದಿಲ್ಲ. ಆದ್ದರಿಂದ ಈ ಪ್ರಕಟಣೆಯನ್ನೇ ನ್ಯಾಯಾಲಯದ ನೋಟಿಸು ಎಂದು ಪರಿಗಣಿಸಿ ದುರುಗೋಜಿರಾವ್ ಅವರಾಗಲೀ ಅಥವಾ ಅವರಿಗೆ ಸಂಬಂಧಪಟ್ಟ ವಾರಸುದಾರರಾಗಲೀ ದಿನಾಂಕ 01.02.2021 ರಂದು ಮಧ್ಯಾಹ್ನ 3.00 ಗಂಟೆಗೆ ಮಾನ್ಯ ಘನ ನ್ಯಾಯಾಲಯದ ಮುಂದೆ ಹಾಜರಾಗಿ ತಮ್ಮ ತಕರಾರನ್ನು ಸಲ್ಲಿಸಬಹುದಾಗಿರುತ್ತದೆ. ಇಲ್ಲದೇ ಇದ್ದಲ್ಲಿ ಯಾರ ತಕರಾರು ಇರುವುದಿಲ್ಲವೆಂದು ಪರಿಗಣಿಸಲಾಗುವುದು ಎಂದು ಈ ಸಾರ್ವಜನಿಕ ಪ್ರಕಟಣೆ ಮೂಲಕ ತಿಳಿಸಲಾಗಿದೆ.
ಷೆಡ್ಯೂಲ್
ದಾವಣಗೆರೆ ಜಿಲ್ಲೆ, ದಾವಣಗೆರೆ ತಾ|| ಕಸಬಾ ಹೋಬಳಿ, ಬೆಳವನೂರು ಗ್ರಾಮದ ರಿ.ಸ.ನಂ. 108ರ ಪೈಕಿ 108/1ಪಿ3 ರಲ್ಲಿ 0-29 ಗುಂಟೆ ಮತ್ತು 108-3ಪಿ1 ರಲ್ಲಿ 0-35 ಗುಂಟೆ ಒಟ್ಟು 01 ಎಕರೆ 24 ಗುಂಟೆ ಜಮೀನಿಗೆ ಚಕ್ಕುಬಂದಿ:-
ಪೂರ್ವಕ್ಕೆ : ರಿ.ಸ.ನಂ. 108ರ ಉಳಿದ ಜಮೀನು — ಪಶ್ಚಿಮಕ್ಕೆ : ರಿ.ಸ.ನಂ. 107ರ ಜಮೀನು
ಉತ್ತರಕ್ಕೆ: ರಿ.ಸ.ನಂ. 106ರ ಜಮೀನು — ದಕ್ಷಿಣಕ್ಕೆ : ರಿ.ಸ.ನಂ. 112ರ ಜಮೀನು
ಸಹಿ/-
ಸ್ಥಳ: ದಾವಣಗೆರೆ
ದಿನಾಂಕ : 07/01/2021
ಜ್ಯೋತಿಲಕ್ಷ್ಮಿ ಬಿ.ಟಿ. (ಬಿ.ಕಾಂ., ಎಲ್‌ಎಲ್‌ಬಿ) ಅಡ್ವೊಕೇಟ್
# 901, 4ನೇ ಕ್ರಾಸ್, 2ನೇ ಮೇನ್, ನಿಜಲಿಂಗಪ್ಪ ಲೇಔಟ್, ದಾವಣಗೆರೆ.

**ಸಂಘ ಸಂಸ್ಥೆಗಳ, ಟ್ರಸ್ಟ್, GST ರಿಜಿಸ್ಟ್ರೇಷನ್ & ನವೀಕರಣ, ಆಡಿಟ್ ಮಾಡಿಕೊಡುತ್ತೇವೆ.**
94838 62779

**ಶ್ರೀ ಮೃತ್ಯುಂಜಯ ಸ್ಕೂಲ್ ಆಫ್ ನರ್ಸಿಂಗ್ & ಇನ್‌ಸ್ಟಿಟ್ಯೂಟ್ ಆಫ್ ಪ್ಯಾರಾಮೆಡಿಕಲ್ ಸೈನ್ಸಸ್**
ಪ್ರವೇಶ ಪ್ರಾರಂಭ :
ಜಿ.ಎನ್.ಎಂ. (GNM), ಲ್ಯಾಬ್ (LAB), ಹೆಲ್ತ್ (Health) ಓಟಿ (OT)
ಪಿ.ಜೆ. ಬಡಾವಣೆ, ದಾವಣಗೆರೆ.
97432 10028, 94488 73558

**ಸುವರ್ಣಾವಕಾಶ**
ಎಸ್ಸೆಸ್ಸೆಲ್ಸಿ, ಪಿಯುಸಿ, ಫೇಲಾದವರು ನೇರ ಬಿ.ಎ., ಎಂ.ಎ., ಬಿ.ಕಾಂ., ಎಂ.ಕಾಂ., ಬಿ.ಎಸ್ಸಿ., ಬಿ.ಎಡ್., ಎಂ.ಎಡ್., ಡಿಪ್ಲೋಮಾ, ಬಿ.ಟೆಕ್, ಎಂ.ಟೆಕ್ ಮುಂತಾದ ಕೋರ್ಸ್‌ಗಳನ್ನು ಪಾಸ್ ಮಾಡಲು ಸಂಪರ್ಕಿಸಿ
8296265995, 8971684391
ಬೆಳಿಗ್ಗೆ 10 ರಿಂದ ಸಂಜೆ 6 ರೊಳಗೆ

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ
S.S.L.C., PUC, Technical & Non Technical Courses, Pharmacy & BHMS (Goverment & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ರಾಂ ಅಂಡ್ ಕೋ ಸರ್ಕಲ್, ಸೋಮ ಮೆಡಿಕಲ್ಸ್ ಮೇಲೆ ಗಣೇಶ ದೇವಸ್ಥಾನದ ಹಿಂಭಾಗ, ದಾವಣಗೆರೆ.
87490 24789, 94837 64859, 87620 58369
82173 02649, 80507 27467

**ಮಾರ್ಕೆಟಿಂಗ್ ಮಾಡಲು ಯುವಕರು ಬೇಕಾಗಿದ್ದಾರೆ**
ಸಂಬಳ 10,000/- ದಿಂದ 15,000/-
ಫೋ. 08192-231951
231953

**ಭೂಮಿಕ ಮ್ಯಾಟ್ರಿಮೊನಿ**
ಲಿಂಗಾಯತ ವಧು-ವರರ ಕೇಂದ್ರ
H.O : Vidya Nagara, 1st Bus Stop, Davanagere
B.O: BIET College Road, Near Hemavati Hostel
77603 16576, 90080 55813

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಬೇಕಾಗಿದ್ದಾರೆ**
ಟ್ರ್ಯಾಕ್ಟರ್ ಶೋ ರೂಂನಲ್ಲಿ ಕೆಲಸ ಮಾಡಲು ITI ಡೀಸೆಲ್ ಮೆಕ್ಯಾನಿಕಲ್ or ಫಿಟ್ಟರ್ ಆಗಿರುವ ಅಭ್ಯರ್ಥಿಗಳು ಬೇಕಾಗಿದ್ದಾರೆ. (ಸೇಲ್ಸ್ ಮತ್ತು ಸರ್ವೀಸ್‌ಗೆ)
ಶಾರದಾ ಆಟೋಸ್
# 337/59, ಗಣೇಶ್ ಲೇಔಟ್, KSRTC ಬಸ್ ಸ್ಟ್ಯಾಂಡ್ ಹತ್ತಿರ, ದಾವಣಗೆರೆ-3
08192-236457

**JOB VACANCY DATA PROCESSING EXECUTIVE**
Qualification : PUC / Diploma or Any Degree.
Skills : Computer basic (M.S. Word, Excel, Browsing E-mail Handling).
Location : Vidyanagara, Davangere.
Contact :
E-Mark Technologies
99647 93273
99642 45723

**HAPPY NEW YEAR**
ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
ಹಿಂದೂ ವಧು-ವರರ ಮಾಹಿತಿ ಕೇಂದ್ರ
www.hindusmatrimony.com
5ನೇ ವಾರ್ಷಿಕೋತ್ಸವದ ಪ್ರಯುಕ್ತ
ಉಚಿತ ನೋಂದಣಿ
ದಿ. 1.1.21 ರಿಂದ 15.1.21ರ ವರೆಗೆ ವೀರಶೈವ/ಲಿಂಗಾಯತ ಹಾಗೂ ಎಲ್ಲಾ ತರಹದ ಹಿಂದೂ ವಧು-ವರರು ಇದರ ಉಪಯೋಗ ಪಡೆದುಕೊಳ್ಳಬಹುದು
DVG : 7892510652, 9448159303, 8050952637
ಕಡೂರು-9480063756, ಚಿಕ್ಕಮಗಳೂರು-6362382773
ಮಂಡ್ಯ-8762074334, ಬೆಂಗಳೂರು-9513570130

**ಕಮರ್ಷಿಯಲ್ ಸೈಟು ಮಾರಾಟಕ್ಕಿದೆ**
ನಗರದ B.I.E.T. ರಸ್ತೆಗೆ, ಹೇಮಾವತಿ ಹಾಸ್ಟೆಲ್ ಎದುರು ಒಟ್ಟು 3200 ಅಡಿ ಇರುವ ಕಾರ್ನರ್ ಸೈಟು ಮಾರಾಟಕ್ಕಿದೆ. ಆಸಕ್ತರು ನೇರವಾಗಿ ಸಂಪರ್ಕಿಸಿ.
Mohan
Real Estate Agency
97424 34049

**WANTED TEACHERS**
(Part time or Full Time)
No of posts:
1)BSc BEd(CBZ ): 01,
2)BSc, BEd (PCM) : 01
NISARGA CONVENT & HIGH SCHOOL
SOG Badavane, Davangere.Contact :
99862 26454

**WANTED**
Receptionist and Clinical Assistant Required for Poly Clinic. Gents or Ladies
Contact :
99861 63315
80502 21315
99009 78086

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ.
ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

ಮಾಸ್ಕ್ ಬಳಸಿ ಕೊರೊನಾ ತೊಲಗಿಸಿ

# ದಾವಣಗೆರೆ ವಿವಿ ಅಭಿವೃದ್ಧಿಗೆ ಎರಡು ಕೋಟಿ ಅನುದಾನ : ಸಚಿವ ಬಿ. ಶ್ರೀರಾಮುಲು



ಹರಿಹರ, ಜ.7- ದಾವಣಗೆರೆ ವಿಶ್ವವಿದ್ಯಾನಿಲಯದ ಅಭಿವೃದ್ಧಿಗೆ ಎರಡು ಕೋಟಿ ರೂ.ಗಳ ಅನುದಾನ ನೀಡುವುದಾಗಿ ಸಮಾಜ ಕಲ್ಯಾಣ ಸಚಿವ ಬಿ.ಶ್ರೀರಾಮುಲು ಭರವಸೆ ನೀಡಿದ್ದಾರೆ.

ಉಪ ಕುಲಪತಿ ಪ್ರೊ. ಶರಣಪ್ಪ ಹಲಸೆ ನೇತೃತ್ವದಲ್ಲಿ ಬೆಂಗಳೂರಲ್ಲಿ ಬುಧವಾರ ಭೇಟಿ ಮಾಡಿದ ವಿವಿ ನಿಯೋಗದ ಮನವಿ ಸ್ವೀಕರಿಸಿ ಮಾತನಾಡಿದ ಸಚಿವರು, ವಿವಿಗಳ ಅಭಿವೃದ್ಧಿಗೆ ಸಮಾಜ ಕಲ್ಯಾಣ ಇಲಾಖೆ ಸದಾ ಬೆಂಬಲ ನೀಡುತ್ತಿದೆ. ದಾವಣಗೆರೆ ವಿವಿಗೆ ಎರಡು ಕೋಟಿ ರೂ.ಗಳ ಅನುದಾನ ಬಿಡುಗಡೆ ಮಾಡುವುದಾಗಿ ನಿಯೋಗಕ್ಕೆ ಭರವಸೆ ನೀಡಿದರು.

ಉಪ ಕುಲಪತಿ ಪ್ರೊ. ಶರಣಪ್ಪ ಹಲಸೆ ಮಾತನಾಡಿ, ಹಿಂದುಳಿದ ವರ್ಗಗಳ, ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಅಪಾರ ಸಂಖ್ಯೆಯಲ್ಲಿ ವಿವಿಯಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ಇವರಿಗೆ ಇನ್ನಷ್ಟು ಉತ್ತಮ ಸೌಲಭ್ಯ, ಸವಲತ್ತುಗಳನ್ನು ಒದಗಿಸಲು ಅನುದಾನದ ಅಗತ್ಯವಿದೆ. ಸಮಾಜ ಕಲ್ಯಾಣ ಇಲಾಖೆಯಿಂದ ಅಗತ್ಯ ಅನುದಾನ ನೀಡಬೇಕೆಂದು ಮನವಿ ಮಾಡಿದರು.

ನಂತರ ನಿಯೋಗದಲ್ಲಿನ ಸಿಂಡಿಕೇಟ್ ಸದಸ್ಯರು ಉಪ ಮುಖ್ಯಮಂತ್ರಿ ಹಾಗೂ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ, ವಿಧಾನ ಪರಿಷತ್ ಸದಸ್ಯರಾದ ಎನ್. ರವಿಕುಮಾರ್, ಚಿದಾನಂದ ಗೌಡರನ್ನು ಭೇಟಿ ಮಾಡಿ ವಿವಿಯ ಪ್ರಗತಿ ಕುರಿತು ಚರ್ಚಿಸಿ ಮನವಿ ನೀಡಿದರು.

ನಿಯೋಗದಲ್ಲಿ ಕುಲಸಚಿವ (ಆಡಳಿತ) ಡಾ. ಬಸವರಾಜ ಬಣಕಾರ, ಸಿಂಡಿಕೇಟ್ ಸದಸ್ಯರಾದ ಡಾ.ಜಿ.ಪಿ.ರಾಮನಾಥ್, ಟಿ.ಇನಾಯತ್ ಉಲ್ಲಾ, ವಿಜಯಲಕ್ಷ್ಮಿ ಹಿರೇಮಠ, ಜಿ.ಎಂ. ಪವನ್, ಎಂ. ಆಶಿಷ್ ರೆಡ್ಡಿ ಇತರರಿದ್ದರು.

### ಜಿಲ್ಲೆಯಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ

# 18 ರವರು ಕಡಿಮೆ, ಒಟ್ಟಾರೆ ಮತದಾರರು ಹೆಚ್ಚು !

ದಾವಣಗೆರೆ ಜ. 7 - ಜಿಲ್ಲೆಯಲ್ಲಿ ನಡೆಸಲಾದ ಮತದಾರರ ಪಟ್ಟಿ ವಿಶೇಷ ಪರಿಷ್ಕರಣಾ ಕಾರ್ಯ ಗೊಂದಲ ರಹಿತ ಹಾಗೂ ವ್ಯವಸ್ಥಿತವಾಗಿ ಜರುಗಿದ್ದು, ಮುಂಬರುವ ಚುನಾವಣಾ ಪ್ರಕ್ರಿಯೆಗಳು ಸುಗಮವಾಗಿ ನಡೆಸಲು ಅನುಕೂಲವಾಗಿದೆ ಎಂದು ಮತದಾರರ ಪಟ್ಟಿ ವೀಕ್ಷಕ ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಎಸ್.ಆರ್. ಉಮಾಶಂಕರ್ ತೃಪ್ತಿ ವ್ಯಕ್ತಪಡಿಸಿದ್ದಾರೆ.

ಜಿಲ್ಲೆಯಲ್ಲಿ ಕೈಗೊಂಡ ಭಾವಚಿತ್ರವಿರುವ ಮತದಾರರ ಪಟ್ಟಿಯ ವಿಶೇಷ ಸಂಕ್ಷಿಪ್ತ ಪರಿಷ್ಕರಣಾ ಕಾರ್ಯಕ್ರಮದ ಕುರಿತು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಇಂದು ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ವಿವರ ನೀಡಿದರು.

ಚುನಾವಣಾ ಆಯೋಗದ ಸೂಚನೆಯಂತೆ ಪಾರದರ್ಶಕವಾಗಿ ಪರಿಷ್ಕರಣೆ ನಡೆದಿದೆ. ರಾಜಕೀಯ ನಾಯಕರು, ಸಾರ್ವಜನಿಕರಿಂದ ಕುಂದು ಕೊರತೆಯ ಮಾಹಿತಿ ಸಂಗ್ರಹ, ಅಭಿಪ್ರಾಯ ಸಂಗ್ರಹಣೆ, ಪ್ರಚಾರದ ಬಗ್ಗೆ ಪರಿಶೀಲನೆ ನಡೆಸಲಾಗಿದೆ ಎಂದರು.

18 ತುಂಬಿದ ಹೊಸ ಮತದಾರರಿಗಾಗಿ ವಿಶೇಷ ಆಂದೋಲನ ಮಾಡಲಾಗಿದೆ. ಆದರೂ, ಜನಸಂಖ್ಯೆಗೆ ಹೋಲಿಸಿದಾಗ ಸೇರ್ಪಡೆಯಲ್ಲಿ ಕೊರತೆಯಾಗಿದೆ. ಈ ಬಗ್ಗೆ ಪರಿಶೀಲಿಸಲು ತಿಳಿಸಲಾಗಿದೆ ಎಂದರು.

ಆದರೆ, ಜಿಲ್ಲೆಯ ಒಟ್ಟು ಜನಸಂಖ್ಯೆಯ ಪೈಕಿ ಶೇ.78.12ರಷ್ಟು ಮತದಾರರಿದ್ದಾರೆ. ಈ ಪ್ರಮಾಣ ಸರಾಸರಿಗಿಂತ ಹೆಚ್ಚಾಗಿದೆ. ಈ ಬಗ್ಗೆ ಪರಿಶೀಲನೆ ನಡೆಸಿದಾಗ ಜನಸಂಖ್ಯೆಯ ಅಂಕಿ-ಅಂಶಗಳಲ್ಲಿ ಸರಿಪಡಿಸಬೇಕಾದ ಅಗತ್ಯ ಇರುವುದು ಕಂಡು ಬಂದಿದೆ ಎಂದು ಹೇಳಿದರು.

ಜಿಲ್ಲಾಧಿಕಾರಿ ಮಹಂತೇಶ್ ಬೀಳಗಿ ಮಾತನಾಡಿ, ತಹಶೀಲ್ದಾರ್, ಉಪ ವಿಭಾಗಾಧಿಕಾರಿಗಳು, ಅಪರ ಜಿಲ್ಲಾಧಿಕಾರಿ ಹಾಗೂ ನಾನೂ ಸಹ ಮತದಾರರ ಪಟ್ಟಿ ಪರಿಷ್ಕರಣೆಯ ಬಗ್ಗೆ ಪರಿಶೀಲಿಸಿದ್ದೇನೆ. ಜನವರಿ 18ರಂದು ಪರಿಷ್ಕೃತ ಮತದಾರರ ಪಟ್ಟಿ ಪ್ರಕಟವಾಗಲಿದೆ ಎಂದು ಹೇಳಿದರು.

ಕಳೆದ 2020 ರ ಫೆಬ್ರವರಿ 08 ರಿಂದ ಡಿಸೆಂಬರ್ 17 ರವರೆಗೆ ಜಿಲ್ಲೆಯಲ್ಲಿ ನಡೆಸಿದ ಮತದಾರರ ಪಟ್ಟಿ ಪರಿಷ್ಕರಣೆಯ ಸಂದರ್ಭದಲ್ಲಿ ಹೊಸದಾಗಿ ಹೆಸರು ಸೇರ್ಪಡೆಗೆ 35,276 ಅರ್ಜಿಗಳು ಸಲ್ಲಿಕೆಯಾಗಿದ್ದವು. ಇವುಗಳಲ್ಲಿ 32,646 ಅಂಗೀಕಾರವಾಗಿದ್ದರೆ, 1,659 ತಿರಸ್ಕೃತವಾಗಿವೆ. 958ರ ಪರಿಶೀಲನೆ ನಡೆದಿದೆ ಎಂದು ಜಿಲ್ಲಾಧಿಕಾರಿ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಅಪರ ಜಿಲ್ಲಾಧಿಕಾರಿ ಪೂಜಾರ್ ವೀರಮಲ್ಲಪ್ಪ, ಉಪವಿಭಾಗಾಧಿಕಾರಿ ಮಮತಾ ಹೊಸಗೌಡರ್ ಮತ್ತಿತರರು ಉಪಸ್ಥಿತರಿದ್ದರು.

## ದಾವಣಗೆರೆ ಜಿಲ್ಲೆಯ ಮಳೆ ವಿವರ

ದಾವಣಗೆರೆ ಜ.07 - ಜಿಲ್ಲೆಯಲ್ಲಿ ನಿನ್ನೆ 3.4 ಮಿ.ಮೀ ಸರಾಸರಿ ಮಳೆಯಾಗಿದ್ದು, ಜಿಲ್ಲೆಯಲ್ಲಿ ಯಾವುದೇ ಹಾನಿ ಸಂಭವಿಸಿಲ್ಲ. ಚನ್ನಗಿರಿ ತಾಲ್ಲೂಕಿನಲ್ಲಿ 0.1 ಮಿ.ಮೀ ವಾಡಿಕೆಗೆ 5.2 ಮಿ.ಮೀ ವಾಸ್ತವ ಮಳೆಯಾಗಿದೆ. ದಾವಣಗೆರೆ ತಾಲ್ಲೂಕಿನಲ್ಲಿ 0.1 ಮಿ.ಮೀ ವಾಡಿಕೆಗೆ 1.7 ಮಿ.ಮೀ ವಾಸ್ತವ ಮಳೆಯಾಗಿದೆ. ಹರಿಹರ ತಾಲ್ಲೂಕಿನಲ್ಲಿ 0.1 ಮಿ.ಮೀ ವಾಡಿಕೆಗೆ 4.9 ಮಿ.ಮೀ ವಾಸ್ತವ ಮಳೆಯಾಗಿದೆ. ಹೊನ್ನಾಳಿ ತಾಲ್ಲೂಕಿನಲ್ಲಿ 0.1 ಮಿ.ಮೀ ವಾಡಿಕೆಗೆ 1.9 ಮಿ.ಮೀ ವಾಸ್ತವ ಮಳೆಯಾಗಿದೆ. ಜಗಳೂರು ತಾಲ್ಲೂಕಿನಲ್ಲಿ 0.1 ಮಿ.ಮೀ ವಾಡಿಕೆಗೆ 2.1 ಮಿ.ಮೀ ವಾಸ್ತವ ಮಳೆಯಾಗಿದೆ. ನ್ಯಾಮತಿ ತಾಲ್ಲೂಕಿನಲ್ಲಿ 0.1 ಮಿ.ಮೀ ವಾಡಿಕೆಗೆ 4.5 ಮಿ.ಮೀ. ವಾಸ್ತವ ಮಳೆಯಾಗಿದ್ದು, ಜಿಲ್ಲೆಯಲ್ಲಿ ಸರಾಸರಿ 0.1 ಮಿ.ಮೀ ವಾಡಿಕೆಗೆ 3.4 ಮಿ.ಮೀ ವಾಸ್ತವ ಮಳೆಯಾಗಿದೆ ಎಂದು ಜಿಲ್ಲಾಧಿಕಾರಿಗಳ ಕಚೇರಿ ತಿಳಿಸಿದೆ.

## ನಗರದಲ್ಲಿಂದು ಕಾಳಿಕಾದೇವಿ ಕಾರ್ತಿಕ

ವಿನೋಬನಗರ 2ನೇ ಮುಖ್ಯರಸ್ತೆ, ರಾಮಕೃಷ್ಣಾಶ್ರಮದ ಪಕ್ಕ ನವ ವೃಕ್ಷಧಾಮದಲ್ಲಿರುವ ಕಾಳಿಕಾದೇವಿಯ ಕಡೆ ಕಾರ್ತಿಕೋತ್ಸವ ಇಂದು ರಾತ್ರಿ 8 ಗಂಟೆಗೆ ನಡೆಯಲಿದೆ.

## ಭರಮಸಾಗರ : ಮಹಾಸ್ವಾಮಿ ಜಾತ್ರೆ

ಭರಮಸಾಗರ, ಜ.7- ಸ್ಥಳೀಯ ದೊಡ್ಡಕೆರೆಯ ಪಕ್ಕದಲ್ಲಿರುವ ತೋಟದ ಬಳಿ ಉಮಾ ಮಹೇಶ್ವರ ಜಾತ್ರೆ ನಡೆಯಿತು. ಜಾತ್ರೆಯ ಸಂದರ್ಭದಲ್ಲಿ ಬಣಜಿಗ ಸಮಾಜದ ಅಧ್ಯಕ್ಷ ಬಿ. ಬಸವ ರಾಜಪ್ಪ, ಜಾತ್ರೆಯ ಸಂಚಾಲಕ ಹುಣಸೆಕಟ್ಟೆ ಸುರೇಶ್, ಹೊದಿಗೆರೆ ಚಂದ್ರಣ್ಣ, ಶಿವಕುಮಾರ್, ಸ್ಥಳಿಯ ವಿ.ಎಸ್.ಎಸ್. ಸಂಘದ ಅಧ್ಯಕ್ಷ ಟಿ.ಆರ್. ಚನ್ನೇಶ್, ಮಲ್ಲಣ್ಣ, ಬಸಣ್ಣ, ಗ್ರಾ.ಪಂ. ಸದಸ್ಯ ಜಂಬುನಾಥ್, ಜಗದೀಶ್ ಮತ್ತು ಇತರರು ಪಾಲ್ಗೊಂಡಿದ್ದರು.

## ಸುದ್ದಿಗಳಿಗೆ ಸುಪ್ರೀಂ ಕೋರ್ಟ್ 'ಮೂಲ' ಬಳಸದಂತೆ ಸೂಚನೆ

ನವದೆಹಲಿ ಜ. 7 – ಕೆಲ ನ್ಯಾಯಮೂರ್ತಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು ಎಂಬಂತಹ ವರದಿಗಳಿಗೆ ಸುಪ್ರೀಂ ಕೋರ್ಟ್ 'ಮೂಲಗಳು' ಎಂದು ಉಲ್ಲೇಖಿಸುವುದನ್ನು ಕೈ ಬಿಡುವಂತೆ ಸರ್ವೋಚ್ಛ ನ್ಯಾಯಾಲಯ ಮಾಧ್ಯಮಗಳಿಗೆ ತಿಳಿಸಿದೆ.

ಆಂಧ್ರ ಪ್ರದೇಶದ ಮುಖ್ಯ ನ್ಯಾಯಮೂರ್ತಿ ವೈ.ಎಸ್. ಜಗನ್ ಮೋಹನ್ ರೆಡ್ಡಿ ಅವರು ಕೆಲ ನ್ಯಾಯಮೂರ್ತಿಗಳ ವಿರುದ್ಧ ದೂರು ಸಲ್ಲಿಸಿದ್ದು, ಈ ಬಗ್ಗೆ ಸಿಜೆಐ ಕ್ರಮ ತೆಗೆದುಕೊಳ್ಳುತ್ತದೆ ಎಂದು ಮಾಧ್ಯಮದ ಒಂದು ವರ್ಗ ವರದಿ ಮಾಡಿತ್ತು. ಈ ಮಾಹಿತಿಯನ್ನು ಸುಪ್ರೀಂ ಕೋರ್ಟ್ ಮೂಲಗಳು ತಿಳಿಸಿರುವುದಾಗಿಯೂ ಹೇಳಲಾಗಿತ್ತು.

ನ್ಯಾಯಮೂರ್ತಿಗಳ ವಿರುದ್ಧದ ದೂರುಗಳ ಕುರಿತು ಆಂತರಿಕ ಪ್ರಕ್ರಿಯೆ ನಡೆಸುವುದು ಸಂಪೂರ್ಣ ಗೌಪ್ಯವಾಗಿರುತ್ತದೆ. ಮಾಹಿತಿಯನ್ನು ಈ ರೀತಿ ಸೋರಿಕೆ ಮಾಡುವುದಿಲ್ಲ ಎಂದು ಸುಪ್ರೀಂ ಕೋರ್ಟ್‌ನ ಅಧಿಕೃತ ಹೇಳಿಕೆಯಲ್ಲಿ ತಿಳಿಸಲಾಗಿದೆ.

# ಮಣ್ಣು ಬೇಡ, ಡಾಂಬರ್ ಹಾಕಿ

(1ನೇ ಪುಟದಿಂದ) 31ರ ಒಳಗೆ ಪೂರ್ಣಗೊಳಿಸಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾಗಿ ತಿಳಿಸಿದ್ದಾರೆ. ದಾವಣಗೆರೆ ವಿಭಾಗ ವ್ಯಾಪ್ತಿಯಲ್ಲಿ ಲೋಕೋಪಯೋಗಿ ಇಲಾಖೆ ವತಿಯಿಂದ 385 ಕಿ.ಮೀ. ರಾಜ್ಯ ಹೆದ್ದಾರಿ, ಜಿಲ್ಲಾ ಮುಖ್ಯ ರಸ್ತೆ ಹಾಗೂ 12 ಸೇತುವೆಗಳ ಕಾಮಗಾರಿ ಪೂರ್ಣಗೊಳಿಸಲಾಗಿದೆ ಎಂದ ಅವರು, ಎಸ್‌ಸಿಪಿ - ಟಿಎಸ್‌ಪಿ ಅಡಿಯಲ್ಲಿ 35.75 ಕೋಟಿ ರೂ. ಬಿಡುಗಡೆ ಮಾಡಲಾಗಿದ್ದು, 110 ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದೆ ಎಂದು ತಿಳಿಸಿದರು.

ಕೆಶಿಪ್ - 3ರಡಿ ಗದಗ - ಹೊನ್ನಾಳಿ ರಸ್ತೆಯ ಹೊನ್ನಾಳಿ ವ್ಯಾಪ್ತಿಯ 10 ಕಿ.ಮೀ. ರಸ್ತೆಯನ್ನು 45 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿದೆ ಎಂದವರು ಇದೇ ಸಂದರ್ಭದಲ್ಲಿ ತಿಳಿಸಿದರು. ಜಿಲ್ಲೆಯಲ್ಲಿ 189 ಕಿ.ಮೀ. ರಾಜ್ಯ ಹೆದ್ದಾರಿ ಹಾಗೂ 362.55 ಕಿ.ಮೀ.ಗಳ ಮುಖ್ಯ ರಸ್ತೆಗಳ ಉನ್ನತೀಕರಣಕ್ಕೂ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಕಾರಜೋಳ ಹೇಳಿದ್ದಾರೆ.

ಈ ಸಂದರ್ಭದಲ್ಲಿ ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕರಾದ ಎಸ್.ಎ. ರವೀಂದ್ರನಾಥ್, ವೈ.ರಾಮಪ್ಪ, ಲಿಡ್ಕರ್ ಅಧ್ಯಕ್ಷ ಹಾಗೂ ಶಾಸಕ ಪ್ರೊ. ಲಿಂಗಣ್ಣ ಮತ್ತಿತರರು ಉಪಸ್ಥಿತರಿದ್ದರು.

## ಲೋಕೋಪಯೋಗಿಗೆ ಟ್ರೈನೀಗಳ ನೇಮಕ

ಲೋಕೋಪಯೋಗಿ ಇಲಾಖೆಯಲ್ಲಿ 960 ಹುದ್ದೆಗಳು ಖಾಲಿ ಇದ್ದು, ತಾತ್ಕಾಲಿಕವಾಗಿ ತರಬೇತಿ ಸಿವಿಲ್ ಇಂಜಿನಿಯರ್‌ಗಳನ್ನು ನೇಮಿಸಿಕೊಳ್ಳಲಾಗುವುದು ಎಂದು ಉಪ ಮುಖ್ಯಮಂತ್ರಿ ಹಾಗೂ ಲೋಕೋಪಯೋಗಿ ಸಚಿವ ಗೋವಿಂದ ಕಾರಜೋಳ ತಿಳಿಸಿದ್ದಾರೆ. ಕೆ.ಪಿ.ಎಸ್.ಸಿ. ಮೂಲಕ ನೇಮಕಾತಿಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಆದರೆ, ನ್ಯಾಯಾಲ ಯದಲ್ಲಿ ಪ್ರಕರಣ ಇರುವ ಕಾರಣ ನೇಮಕ ವಿಳಂಬವಾಗುತ್ತಿದೆ. ಈ ಹಿನ್ನೆಲೆಯಲ್ಲಿ ವಯಸ್ಸು, ರೋಸ್ಟರ್ ಹಾಗೂ ಅರ್ಹತೆ ನೋಡಿಕೊಂಡು ಒಂಭತ್ತು ತಿಂಗಳ ಅವಧಿಗೆ ಸಿವಿಲ್ ಇಂಜಿನಿಯರ್‌ಗಳನ್ನು ಟ್ರೈನೀಗಳಾಗಿ ನೇಮಕ ಮಾಡಿಕೊಳ್ಳಲಾಗುವುದು ಎಂದವರು ಹೇಳಿದ್ದಾರೆ.

# ಆಧುನಿಕ ಕಾಲದಲ್ಲೂ ಕಂದಾಚಾರ ಸಮಾಜಕ್ಕೆ ಕಳಂಕ

### ಜಿ.ಪಂ ಅಧ್ಯಕ್ಷೆ ಶಾಂತಕುಮಾರಿ



ಜಗಳೂರು, ಜ.7 - ಆಧುನಿಕ ತಂತ್ರಜ್ಞಾನ ಯುಗದಲ್ಲಿಯೂ ಬಾಲ್ಯವಿವಾಹ, ಕಂದಾಚಾರ, ಮೂಢನಂಬಿಕೆಗಳಂತಹ ಸಾಮಾಜಿಕ ಪಿಡುಗುಗಳು ಮಹಿಳೆಯರ ಗೌರವಯುತ ಬದುಕಿಗೆ ಕಳಂಕವಾಗಿವೆ ಎಂದು ಜಿ.ಪಂ ಅಧ್ಯಕ್ಷೆ ಶಾಂತಕುಮಾರಿ ತಿಳಿಸಿದರು. ತಾಲ್ಲೂಕಿನ ರಸ್ತೆ ಮಾಕುಂಟೆ ಗೊಲ್ಲರಹಟ್ಟಿಯಲ್ಲಿ ತಾಲ್ಲೂಕು ಆರೋಗ್ಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಬಿಸಿಎಂ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಜಾಗೃತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ವಿವಿಧ ಕ್ಷೇತ್ರಗಳಲ್ಲಿ ಇಂದು ಮಹಿಳೆಯರ ಸಾಧನೆಗೆ ಶಿಕ್ಷಣ ಅಡಿಗಲ್ಲಾಗಿದ್ದು ಪೋಷಕರು ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಿ ಉಜ್ವಲ ಭವಿಷ್ಯ ರೂಪಿಸಿದರೆ ಸಾಮಾಜಿಕ ಅನಿಷ್ಠ ಪದ್ದತಿಗಳು ದೂರಾಗಲಿವೆ ಎಂದರು. ಅಲೆಮಾರಿ, ಬುಡಕಟ್ಟು ಸಮುದಾಯಗಳ ಮಹಿಳೆಯರಿಗೆ ಶಿಕ್ಷಣದ ಬಗ್ಗೆ ಜಾಗೃತಿ ಅಗತ್ಯವಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಎಸ್‌ಎಫ್‌ಐ ಮುಖಂಡ ಮಹಾಲಿಂಗಪ್ಪ ಹೆಚ್.ಎಂ.ಹೊಳೆ ಮೂಢನಂಬಿಕೆಗಳು ಮತ್ತು ಮಹಿಳಾ ಶಿಕ್ಷಣ ಕುರಿತು ಮಾತನಾಡಿದರು. ಸಮಾರಂಭದಲ್ಲಿ ಬಿಸಿಎಂ ಇಲಾಖೆ ವಿಸ್ತರಣಾಧಿಕಾರಿ ವೆಂಕಟೇಶ್ ಮೂರ್ತಿ, ಸಿಡಿಪಿಓ ಬೀರೇಂದ್ರ ಕುಮಾರ್, ನಜ್ಮಾಬಾನು, ನಿಲಯ ಮೇಲ್ವಿಚಾರಕರಾದ ನೇತ್ರಾವತಿ, ದೇವೇಂದ್ರಪ್ಪ, ನಾಗರಾಜ್ ಗ್ರಾ.ಪಂ ಸದಸ್ಯ ಚಿತ್ತಪ್ಪ, ಕೃಷ್ಣಪ್ಪ ಸೇರಿದಂತೆ ಗ್ರಾಮಸ್ಥರು ಭಾಗವಹಿಸಿದ್ದರು.

## ಅಗ್ನಿ ಅವಘಡ : ಹೋಟೆಲ್ ಬೆಂಕಿಗಾಹುತಿ



ದಾವಣಗೆರೆ, ಜ.7- ಶಾರ್ಟ್ ಸರ್ಕ್ಯೂಟ್ ನಿಂದ ಅಗ್ನಿ ಅವಘಡ ಸಂಭವಿಸಿ ಹೋಟೆಲ್‌ವೊಂದು ಸಂಪೂರ್ಣ ಬೆಂಕಿಗಾಹುತಿಯಾಗಿರುವ ಘಟನೆ ಇಲ್ಲಿನ ಶಾಮನೂರು ರಸ್ತೆಯಲ್ಲಿ ಇಂದು ಸಂಜೆ ನಡೆದಿದೆ. ಮಿಥುನ್ ಎಂಬಾತನ ಮಾಲೀಕತ್ವದ ಕಳೆದ 20 ದಿನಗಳ ಹಿಂದಷ್ಟೆ ಪ್ರಾರಂಭವಾಗಿದ್ದ ಗೋಲ್ಡನ್ ಸ್ಪೂನ್ ಎಂಬ ಹೆಸರಿನ ಹೋಟೆಲ್‌ಗೆ ಬೆಂಕಿ ಹತ್ತಿಕೊಂಡಿದ್ದು, ನಂತರ ಹೋಟೆಲ್‌ನ ಎಲ್ಲೆಡೆ ಬೆಂಕಿ ಪಸರಿಸಿ ಹೊತ್ತಿ ಉರಿದಿದೆ. ಪರಿಣಾಮ ಲಕ್ಷಾಂತರ ರೂ. ನಷ್ಟು ಹಾನಿಯಾಗಿದೆ. ಅದೃಷ್ಟವಶಾತ್ ಇಂದು ಹೋಟೆಲ್ ರಜಾ ಮಾಡಿ ಬೀಗ ಹಾಕಿದ್ದರಿಂದ ಯಾವುದೇ ಸಾವು-ನೋವು ಸಂಭವಿಸಿಲ್ಲ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಆಗ್ನಿಶಾಮಕ ದಳದ ಸಿಬ್ಬಂದಿಗಳು ಬೆಂಕಿ ನಂದಿಸುವಲ್ಲಿ ಯಶಸ್ವಿಯಾಗಿದ್ದಾರೆ.

## ಟ್ರಂಪ್ ಬೆಂಬಲಿಗರ ಪುಂಡಾಟ

(1ನೇ ಪುಟದಿಂದ) ತಡೆಯಲಾಗಿತ್ತು. ಕೆಲ ಗಂಟೆಗಳ ನಂತರ ಕಟ್ಟಡದಿಂದ ಪ್ರತಿಭಟನಾಕಾರರನ್ನು ತೆರವುಗೊಳಿಸಿ ಅಧಿವೇಶನ ಮುಂದುವರೆಸಲಾಯಿತು.

ಘಟನೆಯ ಬಗ್ಗೆ ಹೇಳಿಕೆ ನೀಡಿರುವ ಜನಪ್ರತಿನಿಧಿಗಳ ಸದನದ ಸಭಾಧ್ಯಕ್ಷೆ ನ್ಯಾನ್ಸಿ ಪೆಲೋಸಿ, ಈ ಘಟನೆ ನಾಚಿಕೆಯದ್ದಾಗಿದೆ. ಆದರೆ, ಇದರಿಂದಾಗಿ ಜೋ ಬಿಡೆನ್ ಆಯ್ಕೆಯನ್ನು ಸಿಂಧುಗೊಳಿಸುವ ಹೊಣೆಗಾರಿಕೆಯಿಂದ ಹಿಂದೆ ಸರಿಯುವುದಿಲ್ಲ ಎಂದಿದ್ದಾರೆ.

ಅಮೆರಿಕ ಇಂತಹ ಕರಾಳ ಘಟನೆ ಎದುರಿಸಿದ್ದಕ್ಕೆ ಆಘಾತವಾಗಿದೆ ಎಂದು ಬಿಡೆನ್ ಹೇಳಿದ್ದು, ನಮ್ಮ ಪ್ರಜಾಪ್ರಭುತ್ವದ ಮೇಲೆ ಅಭೂತಪೂರ್ವ ದಾಳಿ ನಡೆದಿದೆ. ಆಧುನಿಕ ಕಾಲದಲ್ಲಿ ಇಂತಹ ಘಟನೆಯನ್ನು ನೋಡಿಯೇ ಇರಲಿಲ್ಲ ಎಂದು ತಿಳಿಸಿದ್ದಾರೆ.

ಆದರೆ, ಕ್ಯಾಪಿಟಲ್‌ನಲ್ಲಿ ಕಂಡ ಅರಾಜಕತೆಯ ದೃಶ್ಯಗಳು ನಿಜವಾದ ಅಮೆರಿಕವನ್ನು ಪ್ರತಿಬಿಂಬಿಸುವುದಿಲ್ಲ. ಸಣ್ಣ ಸಂಖ್ಯೆಯ ತೀವ್ರವಾದಿಗಳು ಈ ಘಟನೆ ನಡೆಸಿದ್ದಾರೆ. ಇದು ದೇಶದ್ರೋಹದ ಅಂಚಿನಲ್ಲಿದೆ. ಇದು ಇಲ್ಲಿಯೇ ಅಂತ್ಯವಾಗಬೇಕು ಎಂದು ಬಿಡೆನ್ ಹೇಳಿದ್ದಾರೆ.

ಅಮೆರಿಕದ ಮಾಜಿ ಅಧ್ಯಕ್ಷರಾದ ಬರಾಕ್ ಒಬಾಮಾ, ಜಾರ್ಜ್ ಬುಷ್, ಬಿಲ್ ಕ್ಲಿಂಟ್ ಹಾಗೂ ಜಿಮ್ಮಿ ಕಾರ್ಟರ್ ಅವರು ಘಟನೆಯನ್ನು ಖಂಡಿಸಿದ್ದಾರೆ.

ಈ ನಡುವೆ ಅಭೂತಪೂರ್ವ ಕ್ರಮ ತೆಗೆದುಕೊಂಡಿರುವ ಟ್ವಿಟ್ಟರ್ ಹಾಗೂ ಫೇಸ್‌ಬುಕ್‌ಗಳು ಟ್ರಂಪ್ ಖಾತೆಗಳನ್ನು ಅಮಾನತ್ತುಗೊಳಿಸಿವೆ. ಚುನಾವಣೆಯ ನಂತರ ಟ್ರಂಪ್ ಹಲವಾರು ಸಂಚಿನ ಸಿದ್ಧಾಂತಗಳನ್ನು ತೇಲಿ ಬಿಡುತ್ತಿದ್ದರು.

## ಆಸ್ತಿ ತೆರಿಗೆ ಹೆಚ್ಚಳವನ್ನು ವಿರೋಧಿಸಿ ಜಿಲ್ಲಾ ಕಾಂಗ್ರೆಸ್‌ನಿಂದ ಇಂದು ನಗರದಲ್ಲಿ ಧರಣಿ

ಆಸ್ತಿ ತೆರಿಗೆ ಹೆಚ್ಚಳವನ್ನು ವಿರೋಧಿಸಿ ರಾಜ್ಯ ಸರ್ಕಾರದ ವಿರುದ್ಧ ಜಿಲ್ಲಾ ಕಾಂಗ್ರೆಸ್ ವತಿಯಿಂದ ಇಂದು ಬೆಳಿಗ್ಗೆ 11ಕ್ಕೆ ಮಹಾನಗರ ಪಾಲಿಕೆ ಮುಂಭಾಗದಲ್ಲಿ ಧರಣಿ ನಡೆಯಲಿದೆ. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್. ಬಿ. ಮಂಜಪ್ಪ ಅಧ್ಯಕ್ಷತೆ ವಹಿಸುವರು ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ತಿಳಿಸಿದ್ದಾರೆ.

## ರಂಭಾಪುರಿ ಶ್ರೀಗಳ ಹುಟ್ಟುಹಬ್ಬ: ವೃದ್ಧರಿಗೆ ಹಣ್ಣು, ಸಿಹಿ ವಿತರಣೆ



ದಾವಣಗೆರೆ,ಜ.7- ಜಿಲ್ಲಾ ವೀರಶೈವ ಸದ್ಬೋದನಾ ಸಮಿತಿ ವತಿಯಿಂದ ಬಾಳೆಹೊನ್ನೂರಿನ ಶ್ರೀ ರಂಭಾಪುರಿ ಪೀಠದ ಜಗದ್ಗುರುಗಳವರ 65ನೇ ವರ್ಷದ ಹುಟ್ಟುಹಬ್ಬದ ಅಂಗವಾಗಿ ನಗರದ ವನಿತಾ ಸಮಾಜದ ಹಿರಿಯ ವನಿತೆಯರ ಧಾಮದಲ್ಲಿನ ವೃದ್ಧರಿಗೆ ಹಣ್ಣು - ಹಂಪಲು, ಸಿಹಿಯನ್ನು ವಿತರಿಸಲಾಯಿತು.

ಜಿಲ್ಲಾ ವೀರಶೈವ ಸದ್ಬೋದನಾ ಸಮಿತಿ ಅಧ್ಯಕ್ಷರೂ ಆಗಿರುವ ನಗರ ಪಾಲಿಕೆ ಸದಸ್ಯ ದೇವರಮನೆ ಶಿವಕುಮಾರ್ ನೇತೃತ್ವದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಇಟ್ಟಿಗುಡಿ ಮಹಾದೇವಪ್ಪ, ದೇವರಮನೆ ಶಿವರಾಜ್, ಬಸವರಾಜ್, ಶಿವಯ್ಯ, ರುದ್ರೇಶ್, ಶ್ರೀಕಂಠಯ್ಯ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ನಗರದಲ್ಲಿ ಇಂದು ಯಶ್ ಜನ್ಮ ದಿನಾಚರಣೆ : ಕೆಜಿಎಫ್-2 ಟೀಸರ್ ಬಿಡುಗಡೆ





ದಾವಣಗೆರೆ, ಜ.7- ಅಖಿಲ ಕರ್ನಾಟಕ ರಾಕಿಂಗ್ ಸ್ಟಾರ್ ಯಶ್ ಅಭಿಮಾನಿಗಳ ಸಂಘದ ಜಿಲ್ಲಾ ಯುವ ಘಟಕದ ವತಿಯಿಂದ ರಾಕಿಂಗ್ ಸ್ಟಾರ್ ಯಶ್ ಜನ್ಮದಿನಾಚರಣೆ ಮತ್ತು ಕೆಜಿಎಫ್-2 ಸಿನಿಮಾದ ಟೀಸರ್ ಅನ್ನು ಪ್ರೊಜೆಕ್ಟರ್ ಮೂಲಕ ಬಿಡುಗಡೆ ಸಮಾರಂಭವನ್ನು ನಾಳೆ ದಿನಾಂಕ 8ರ ಶುಕ್ರವಾರ ಬೆಳಿಗ್ಗೆ 10ಕ್ಕೆ ನಗರದ ರೋಟರಿ ಬಾಲಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಯಶ್ ಅವರ ಜನ್ಮ ದಿನಾಚರಣೆ ಅಂಗವಾಗಿ ಪುಟ್ಟರಾಜ ಗವಾಯಿಗಳ ಪುಣ್ಯಾಶ್ರಮದ ಅಂಧ ಮಕ್ಕಳಿಗೆ ಅನ್ನ ಸಂತರ್ಪಣೆ ಮಾಡಲಾಗುವುದು ಎಂದು ಸಂಘದ ಜಿಲ್ಲಾಧ್ಯಕ್ಷ ಎಸ್. ಸಂತೋಷ್ ಕುಮಾರ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಮುಖ್ಯ ಅತಿಥಿಗಳು : ಬಿ.ಜಿ. ಅಜಯ್ ಕುಮಾರ್, ಜೆ.ಎನ್. ಶ್ರೀನಿವಾಸ್, ಸಂತೋಷ್ ಕುಮಾರ್, ಶ್ರೀನಿವಾಸ ದಾಸಕರಿಯಪ್ಪ, ಶಿವನಗೌಡ ಪಾಟೀಲ್, ಹೆಚ್.ಸಿ. ಜಯಮ್ಮ, ನಿಖಿಲ್, ಶ್ರೀಕಾಂತ ನೀಲಗುಂದ ಮತ್ತಿತರರು.

ಪತ್ರಿಕಾಗೋಷ್ಠಿಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಪಿ. ಎಳೆಹೊಳೆ, ಉಪಾಧ್ಯಕ್ಷ ನರೇಶ್, ಸದಸ್ಯ ಸಿದ್ದೇಶ್ ಇದ್ದರು.

## ಹರಿಹರ : ಸಾಯಿ ಮಂದಿರದಲ್ಲಿ ಪೂಜೆ



ಹರಿಹರ, ಜ.7- ಸ್ಥಳೀಯ ಕೇಶವ ನಗರದ ಪಟೇಲ್ ಬಡಾವಣೆಯ ಶ್ರೀ ಸಾಯಿಬಾಬಾ ಮಂದಿರದಲ್ಲಿ ಧನುರ್ ಮಾಸ ನಿಮಿತ್ತ ಶ್ರೀ ಸಾಯಿಬಾಬಾ, ಸಿದ್ಧಿವಿನಾಯಕ, ಕಾಶಿ ವಿಶ್ವನಾಥ ಮತ್ತು ಬಸವಣ್ಣ ಸ್ವಾಮಿಗೆ ಬೆಳಿಗ್ಗೆ ಅಭಿಷೇಕ, ಹಾಗೂ ಆಶ್ಲೇಷ ಬಲಿ, ಸರ್ಪ ಶಾಂತಿ ಹಾಗೂ ಮೃತ್ಯುಂಜಯ ಹೋಮ ಹಾಗು ಇನ್ನಿತರೆ ವಿಶೇಷ ಪೂಜಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಮಹಾಮಂಗಳಾರತಿ ನಂತರ ಪ್ರಸಾದ ವಿನಿಯೋಗ ನಡೆಯಿತು.


ಈ ಸಂದರ್ಭದಲ್ಲಿ ಅಧ್ಯಕ್ಷ ಬಸವರಾಜ್ ಪಟೇಲ್, ಹನುಮಂತಪ್ಪ ಸುರ್ವೇ, ಸಂಗನಾಳಮಠ, ಸರಪದ, ಅರ್ಚಕ ಕುಮಾರಸ್ವಾಮಿ, ಲಿಂಗರಾಜ್ ಪಟೇಲ್, ಮಹದೇವಪ್ಪ ಇನ್ನಿತರರಿದ್ದರು.

## ನಗರದಲ್ಲಿ ನಾಡಿದ್ದು ಶಿಬಾರ ಮೈಲಾರ ಲಿಂಗೇಶ್ವರ ಸ್ವಾಮಿಯ ಕಾರ್ತಿಕ

ದಾವಣಗೆರೆ, ಜ.7- ಶ್ರೀಕ್ಷೇತ್ರ ಶಿಬಾರದ ಶ್ರೀ ಮೈಲಾರ ಲಿಂಗೇಶ್ವರ ದೇವಸ್ಥಾನ ಟ್ರಸ್ಟ್‌ನಿಂದ ಕೊಂಡಜ್ಜಿ ರಸ್ತೆಯಲ್ಲಿರುವ ಶಿಬಾರ ಮೈಲಾರ ಲಿಂಗೇಶ್ವರ ಸ್ವಾಮಿಯ 35 ನೇ ಕಡೇ ಕಾರ್ತಿಕೋತ್ಸವ, ಲಕ್ಷದೀಪೋತ್ಸವವು ಇದೇ ದಿನಾಂಕ 10ರ ಭಾನುವಾರ ಸಂಜೆ 7.30ಕ್ಕೆ ನಡೆಯಲಿದೆ.




# ರೈತರು ಕೊರೊನಾ ಸೋಂಕಿನಿಂದ ರಕ್ಷಿಸಲ್ಪಟ್ಟಿದ್ದಾರೆಯೇ? ಸುಪ್ರೀಂ ಪ್ರಶ್ನೆ




ನವದೆಹಲಿ, ಜ.7 – ದೆಹಲಿಯಲ್ಲಿ ಪ್ರತಿಭಟನೆ ನಡೆಸುತ್ತಿರುವ ರೈತರು ಕೊರೊನಾ ಹರಡುವಿಕೆಯಿಂದ ರಕ್ಷಿಸಲ್ಪಟ್ಟಿದ್ದಾರೆಯೇ? ಎಂದು ಸುಪ್ರೀಂ ಕೋರ್ಟ್ ಕೇಂದ್ರ ಸರ್ಕಾರಕ್ಕೆ ಪ್ರಶ್ನಿಸಿದೆ.

ಲಾಕ್‌ಡೌನ್ ಸಂದರ್ಭದಲ್ಲಿ ದೆಹಲಿಯ ಆನಂದ ವಿಹಾರ್ ಬಸ್ ಟರ್ಮಿನಲ್ ಹಾಗೂ ತಬ್ಲಿಗಿ ಜಮಾತ್ ಸಮಾರಂಭಗಳ ಸಂದರ್ಭದಲ್ಲಿ ಕೊರೊನಾ ಹರಡಿದ ಬಗ್ಗೆ ಸುಪ್ರೀಂ ಕೋರ್ಟ್ ವಿಚಾರಣೆ ನಡೆಸುವಾಗ ನ್ಯಾಯಾಲಯ ಈ ಬಗ್ಗೆ ಪ್ರಶ್ನಿಸಿದ್ದು, ಕೊರೊನಾಗೆ ಸಂಬಂಧಿಸಿದಂತೆ ಇದೇ ರೀತಿಯ ಸಮಸ್ಯೆಗಳು ಮತ್ತೆ ಉದ್ಭವಿಸಬಾರದು ಎಂದು ಹೇಳಿದೆ.

ಆಗ ಸರ್ಕಾರದ ಪರವಾಗಿ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಕೊರೊನಾದಿಂದ ರೈತರ ರಕ್ಷಣೆಗೆ ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಹಾಗೂ ಯಾವ ಕ್ರಮಗಳನ್ನು ತೆಗೆದುಕೊಳ್ಳಬೇಕಿದೆ ಎಂಬುದಕ್ಕೆ ಎರಡು ವಾರಗಳಲ್ಲಿ ವರದಿ ಸಲ್ಲಿಸುವುದಾಗಿ ತಿಳಿಸಿದ್ದಾರೆ.

# ಪೆಟ್ರೋಲ್, ಡೀಸೆಲ್ ಬೆಲೆಯಲ್ಲಿ ದಾಖಲೆ



ನವದೆಹಲಿ, ಜ. 7 – ಪೆಟ್ರೋಲ್ ಬೆಲೆ ರಾಜಧಾನಿ ದೆಹಲಿಯಲ್ಲಿ ಸಾರ್ವಕಾಲಿಕ ದಾಖಲೆಯಾದ ಲೀಟರ್‌ಗೆ 84.20 ರೂ.ಗಳಿಗೆ ತಲುಪಿದೆ. ಸತತ ಎರಡನೇ ದಿನ ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳು ಬೆಲೆ ಏರಿಕೆ ಮಾಡಿರುವುದು ಇದಕ್ಕೆ ಕಾರಣವಾಗಿದೆ.

ಗುರುವಾರ ಪೆಟ್ರೋಲ್ ಬೆಲೆಯನ್ನು ಲೀಟರ್‌ಗೆ 23 ಪೈಸೆ ಹಾಗೂ ಡೀಸೆಲ್ ಬೆಲೆಯನ್ನು 26 ಪೈಸೆಯಷ್ಟು ಹೆಚ್ಚಿಸಲಾಗಿದೆ. ದೆಹಲಿಯಲ್ಲಿ ಡೀಸೆಲ್ ಬೆಲೆ ಲೀಟರ್‌ಗೆ 74.38 ರೂ.ಗಳಿಗೆ ತಲುಪಿದೆ.

ಮುಂಬೈನಲ್ಲಿ ಡೀಸೆಲ್ ದರ ಲೀಟರ್‌ಗೆ 81.07 ರೂ. ಆಗಿದೆ. ಡೀಸೆಲ್ ದರ ಮುಂಬೈನಲ್ಲಿ ಹೊಸ ದಾಖಲೆ ಬರೆದಿದೆ.

# ಜಿಲ್ಲೆಗೆ ಬರುವ ಹೊರರಾಜ್ಯಗಳ ಕೋಳಿ ಮರಿಗಳ ರ್‍ಯಾಂಡಮ್ ಪರೀಕ್ಷೆಗೆ ಮನವಿ

ದಾವಣಗೆರೆ, ಜ.7- ಕೋಳಿಗಳಿಗೆ ಶೀತ, ಜ್ವರದ ರೋಗ ಹರಡುತ್ತಿರುವ ಹಿನ್ನೆಲೆಯಲ್ಲಿ ಹೊರ ರಾಜ್ಯಗಳಿಂದ ಜಿಲ್ಲೆಗೆ ಬರುವ ಕೋಳಿ ಮರಿಗಳನ್ನು ರ್‍ಯಾಂಡಮ್ ಪರೀಕ್ಷೆಗೆ ಒಳಪಡಿಸಲು ಕೋಳಿ ಸರಬರಾಜು ಮಾಡುವ ಕಂಪನಿಗಳಿಗೆ ಸೂಚನೆ ನೀಡುವಂತೆ ಕರ್ನಾಟಕ ರಾಜ್ಯ ಕೋಳಿ ಸಾಕಾಣಿಕೆದಾರರ ಕ್ಷೇಮಾಭಿವೃದ್ಧಿ ಸಂಘದಿಂದ ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಲಾಗಿದೆ.

ಜಿಲ್ಲೆಗೆ ಕೇರಳ, ತಮಿಳುನಾಡು, ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶಗಳಿಂದ ಕೋಳಿ ಮರಿಗಳು ಬರುತ್ತಿದ್ದು, ಈಗಾಗಲೇ ಕೇರಳ ಮತ್ತು ತಮಿಳುನಾಡಿನಲ್ಲಿ ಕೋಳಿ ಶೀತ ಜ್ವರ ಹೆಚ್ಚಾಗಿ ಹರಡುತ್ತಿದೆ. ಅಲ್ಲಿಂದ ಬರುವ ಕೋಳಿ ಮರಿಗಳಿಗೆ ರ್‍ಯಾಂಡಮ್ ಪರೀಕ್ಷೆ ನಡೆಸಿ, ರೈತರಿಗೆ ಸರಬರಾಜು ಮಾಡಲು ಜಿಲ್ಲಾಧಿಕಾರಿಗಳು ಕೋಳಿ ಮರಿ ಸರಬರಾಜು ಕಂಪನಿಗೆ ಸೂಚನೆ ನೀಡುವ ಮುಖೇನ ಮುಂಜಾಗ್ರತಾ ಕ್ರಮವಾಗಿ ಕೋಳಿ ಶೀತ ಜ್ವರವನ್ನು ತಡೆಗಟ್ಟಬೇಕು. ಇಲ್ಲವಾದಲ್ಲಿ ಕೋಳಿ ಸಾಕಾಣಿಕೆದಾರರಾಗಿರುವ ರೈತರು ಅತ್ಯಂತ ಸಂಕಷ್ಟಕ್ಕೆ ಗುರಿಯಾಗುತ್ತಾರೆ ಎಂದು ಸಂಘದ ರಾಜ್ಯ ಕಾರ್ಯಾಧ್ಯಕ್ಷ ಮಲ್ಲಾಪುರ ದೇವರಾಜ್ ಪತ್ರಿಕಾಗೋಷ್ಠಿಯಲ್ಲಿ ಕಳವಳ ವ್ಯಕ್ತಪಡಿಸಿದರು.

ಜಿಲ್ಲೆಯಲ್ಲಿ 650ಕ್ಕೂ ಹೆಚ್ಚು ಕೋಳಿ ಫಾರಂಗಳಿವೆ. 11 ಲಕ್ಷ ಕೆಜಿಗೂ ಹೆಚ್ಚು ಕೋಳಿಗಳಿವೆ. ಹೊರ ಭಾಗದಿಂದ ಬರುವ ಕೋಳಿ ಮರಿಗಳಲ್ಲಿ ಈ ರೋಗ ಕಂಡು ಬಂದಲ್ಲಿ ದೊಡ್ಡ ಪ್ರಮಾಣದಲ್ಲಿ ಸಾಕಾಣಿಕೆ ಮಾಡಲಾದ ಕೋಳಿಗೆ ರೋಗ ತಗುಲಿ ನಮಗೆ ಸಂಕಷ್ಟು ಉಂಟಾಗಲಿದೆ ಎಂದು ಹೇಳಿದರು.

ಕಳೆದ ಎಂಟು ತಿಂಗಳ ಹಿಂದೆ ಇಂತಹದ್ದೇ ರೋಗ ತಗುಲಿ ಸುಮಾರು 8.50 ಲಕ್ಷ ಕೋಳಿ ಮರಿಗಳನ್ನು ನಾಶ ಮಾಡಿದ್ದು, ಪುನಹ ಈ ರೋಗ ಬಾಧಿಸಿದರೆ ಸಾಕಾಣಿಕೆದಾರರು ಲಕ್ಷಾಂತರ ರೂ. ನಷ್ಟ ಅನುಭವಿಸಬೇಕಾಗಲಿದೆ. ಆದ್ದರಿಂದ ಜಿಲ್ಲಾಧಿಕಾರಿಗಳು ಈ ರೋಗವನ್ನು ತಡೆಗಟ್ಟುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವಂತೆ ಕೋರಿದರು.

ಪತ್ರಿಕಾಗೋಷ್ಠಿಯಲ್ಲಿ ಸಾಕಾಣಿಕೆದಾರರಾದ ಬನ್ನಿಕೋಡು ಅಭಿಷೇಕ್, ಕಲ್ಕೆರೆ ಮಂಜಪ್ಪ ಇದ್ದರು.

## ರೈತರೊಂದಿಗೆ ಸಚಿವರ ಸಂವಾದ

ಇದೇ ದಿನಾಂಕ 12 ರಂದು ಕಮ್ಮಾರಗಟ್ಟೆ, ಆರುಂಡಿ, ಕೆಂಚಿಕೊಪ್ಪ ಗ್ರಾಮಗಳಲ್ಲಿ ಜರುಗುವ 'ರೈತರೊಂದಿಗೆ ಒಂದು ದಿನ' ಕಾರ್ಯಕ್ರಮದಲ್ಲಿ ಕೃಷಿ ಸಚಿವ ಬಿ.ಸಿ.ಪಾಟೀಲ್ ಅವರು ಭಾಗವಹಿಸುತ್ತಿದ್ದು, ಈ ಹಿನ್ನೆಲೆಯಲ್ಲಿ ನ್ಯಾಮತಿ ತಾಲ್ಲೂಕು ಪಂಚಾಯ್ತಿ ಸಭಾಂಗಣದಲ್ಲಿ ಶಾಸಕ ಎಂ.ಪಿ.ರೇಣುಕಾಚಾರ್ಯ ಅವರ ಅಧ್ಯಕ್ಷತೆಯಲ್ಲಿ ಇಂದು ಬೆಳಿಗ್ಗೆ 10.30 ಕ್ಕೆ ಪೂರ್ವಭಾವಿ ಸಭೆಯನ್ನು ನ್ಯಾಮತಿ ಹಾಗೂ ಹೊನ್ನಾಳಿ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಏರ್ಪಡಿಸಲಾಗಿದೆ.



## ಎಡೆಯೂರು ಸಿದ್ದಲಿಂಗೇಶ್ವರನಾಗಿ ದೊಡ್ಡಪೇಟೆ ವಿನಾಯಕ ಸ್ವಾಮಿ

ದಾವಣಗೆರೆ ದೊಡ್ಡಪೇಟೆ ಶ್ರೀ ವಿನಾಯಕ ಸ್ವಾಮಿಯ ಕಡೇ ಕಾರ್ತಿಕ ಮಹೋತ್ಸವದ ಪ್ರಯುಕ್ತ ಶ್ರೀ ವಿನಾಯಕ ಸ್ವಾಮಿಗೆ ಶ್ರೀ ಎಡೆಯೂರು ಸಿದ್ದಲಿಂಗೇಶ್ವರರ ಅಲಂಕಾರ ಮಾಡಲಾಗಿತ್ತು.

# ಹರಿಹರ ತಾಲ್ಲೂಕು ರಸ್ತೆಗಳ ಅಭಿವೃದ್ಧಿಗೆ 29 ಕೋಟಿ ರೂ.

## ಅನುದಾನ ಬಿಡುಗಡೆಗೆ ಮಾಡಿದ ಸಿದ್ದೇಶ್ವರ ಮನವಿಗೆ ಸಚಿವ ಕಾರಜೋಳ ಸ್ಪಂದನೆ



ದಾವಣಗೆರೆ, ಜ.7- ಹರಿಹರ ತಾಲ್ಲೂಕು ಎಕ್ಕೆಗೊಂದಿ-ನಂದಿಗುಡಿ ರಸ್ತೆಗಾಗಿ 13.50 ಕೋಟಿ ರೂ. ಹಾಗೂ ಕಕ್ಕರಗೊಳ್ಳ-ಚಿಕ್ಕಬಿದರಿ ರಸ್ತೆ ಅಭಿವೃದ್ಧಿಗಾಗಿ 15.00 ಕೋಟಿ ರೂ. ಅನುದಾನ ಬಿಡುಗಡೆ ಮಾಡುವಂತೆ ಲೋಕೋಪಯೋಗಿ ಸಚಿವ ಗೋವಿಂದ ಕಾರಜೋಳ ಆದೇಶಿಸಿದ್ದಾರೆ.

ಇಂದಿಲ್ಲಿ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸಂಸದ ಜಿ.ಎಂ.ಸಿದ್ದೇಶ್ವರ ಅವರು ಈ ಎರಡೂ ರಸ್ತೆಗಳನ್ನು ಅಭಿವೃದ್ಧಿ ಪಡಿಸಲು ಸಾರ್ವಜನಿಕರಿಂದ ಒತ್ತಡವಿದ್ದ ಬಗ್ಗೆ ಸಚಿವರ ಗಮನ ಸೆಳೆದರು. ಸಚಿವರು, ಸಭೆಯಲ್ಲಿ ಹಾಜರಿದ್ದ ಲೋಕೋಪಯೋಗಿ ಇಲಾಖೆ ಕಾರ್ಯದರ್ಶಿ ಕೃಷ್ಣಾರೆಡ್ಡಿಯವರಿಗೆ ಕೂಡಲೇ ಈ ಎರಡು ಕಾಮಗಾರಿಗಳಿಗೆ ಅಗತ್ಯ ಅನುದಾನ ಬಿಡುಗಡೆ ಮಾಡಿ ಕಾಮಗಾರಿಗಳ ಟೆಂಡರ್ ಕರೆಯಲು ವ್ಯವಸ್ಥೆ ಮಾಡಿ ಎಂದು ಸಚಿವರು ಸೂಚಿಸಿದರು.

ಅದರಂತೆ ಈ ಎರಡೂ ರಸ್ತೆಗಳ ಅಭಿವೃದ್ಧಿಗಾಗಿ 28 ಕೋಟಿ ರೂ. ಅನುದಾನ ಬಿಡುಗಡೆಯಾಗಲಿದೆ. ಅದೇ ರೀತಿ ಹೊಳೆಸಿರಿಗೆರೆ ಕ್ರಾಸ್‌ನಿಂದ ಹೊಳೆಸಿರಿಗೆರೆವರೆಗೆ ರಸ್ತೆ ಅಭಿವೃದ್ಧಿಗೆ ಪ್ರಕೃತಿ ವಿಕೋಪ ನಿಧಿಯಡಿ 1 ಕೋಟಿ ಅನುದಾನ ಬಿಡುಗಡೆ ಮಾಡಲು ಸಮ್ಮತಿ ಸೂಚಿಸಿದರು.

ಇನ್ನುಳಿದಂತೆ ಚಿಕ್ಕಬಿದರಿ-ಸಾರಥಿ ಮಧ್ಯದ ಸೇತುವೆ ಪ್ರತಿ ಮಳೆಗಾಲದಲ್ಲಿ ಮುಳುಗಡೆಯಾಗಿ ಈ ಎರಡೂ ಗ್ರಾಮಗಳ ಮಧ್ಯೆ ಸಂಪರ್ಕವೇ ಕಡಿತವಾಗುತ್ತಿತ್ತು, ಇದನ್ನು ತಪ್ಪಿಸಿ ಹೊಸ ಸೇತುವೆಯನ್ನು ನಿರ್ಮಾಣ ಮಾಡಲು 8 ಕೋಟಿ ರೂ. ಅನುದಾನ ಬಿಡುಗಡೆಯಾಗಿದ್ದು, ಇನ್ನೊಂದು ವಾರದೊಳಗಾಗಿ ಸೇತುವೆ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಕಾಮಗಾರಿ ಪ್ರಾರಂಭಿಸಲಾಗುವುದು ಎಂದರು. ಅನುದಾನ ಬಿಡುಗಡೆ ಮಾಡಿದ ಕಾರಜೋಳ ಅವರಿಗೆ ಸಂಸದ ಜಿ.ಎಂ.ಸಿದ್ದೇಶ್ವರ ಅಭಿನಂದನೆ ಸಲ್ಲಿಸಿದ್ದಾರೆ.

# ಅಪಘಾತ : ನಗರದ ಯುವತಿ ಸಾವು



ದಾವಣಗೆರೆ,ಜ.7- ಶಿವಮೊಗ್ಗ ಜಿಲ್ಲೆ ಹೊಸನಗರದ ಬಳಿಯ ನಗರದಲ್ಲಿ ಇಂದು ಸಂಜೆ ನಡೆದ ರಸ್ತೆ ಅಪಘಾತದಲ್ಲಿ ಸ್ಥಳೀಯ ನೂಪುರ ನೃತ್ಯ ಶಾಲೆಯ ಶಿಕ್ಷಕಿ ಶ್ರೀಮತಿ ಬೃಂದಾ ಮತ್ತು ಶ್ರೀನಿವಾಸ್ ದಂಪತಿ ಪುತ್ರಿ ಕು. ಚಿನ್ಮಯಿ ಸ್ಥಳದಲ್ಲೇ ಸಾವಿಗೀಡಾಗಿದ್ದಾಳೆ. ಚಿನ್ಮಯಿಗೆ ಸುಮಾರು 21 ವರ್ಷ ವಯಸ್ಸಾಗಿತ್ತು.

ಚಿನ್ಮಯಿ ಮತ್ತು ಆಕೆಯ ತಾಯಿ - ತಂದೆ, ಸಹೋದರಿ ಎಲ್ಲಾ ನಾಲ್ವರೂ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿ ವಾಪಸ್ ದಾವಣಗೆರೆಗೆ ಆಗಮಿಸುತ್ತಿದ್ದ ಸಂದರ್ಭದಲ್ಲಿ ಈ ದುರಂತ ನಡೆದಿದೆ. ಅಪಘಾತದಲ್ಲಿ ಚಿನ್ಮಯಿ ಘಟನಾ ಸ್ಥಳದಲ್ಲೇ ಅಸುನೀಗಿದರೆ, ಆಕೆಯ ತಂದೆ ಶ್ರೀನಿವಾಸ್, ತಾಯಿ ಬೃಂದಾ ಮತ್ತು ಸಹೋದರಿ ಲಾಸ್ಯ ಎಲ್ಲರೂ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಮೃತ ಚಿನ್ಮಯಿ ಪಾರ್ಥಿವ ಶರೀರವನ್ನು ದಾವಣಗೆರೆಗೆ ತರಲಾಗುತ್ತಿದ್ದು, ನಾಳೆ ದಿನಾಂಕ 8ರ ಶುಕ್ರವಾರ ಮಧ್ಯಾಹ್ನ 2 ಗಂಟೆಗೆ ವೈಕುಂಠಧಾಮದಲ್ಲಿ ಅಂತ್ಯಕ್ರಿಯೆಯನ್ನು ನೆರವೇರಿಸಲಾಗುವುದು.

ಚಿನ್ಮಯಿ ನಿಧನಕ್ಕೆ ಸಂತಾಪ ವ್ಯಕ್ತಪಡಿಸಿರುವ ಜಿಲ್ಲಾ ಯೋಗ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ವಾಸುದೇವ ರಾಯ್ಕರ್, ಚಿನ್ಮಯಿ ಪ್ರತಿಭಾವನ್ವಿತ ಭರತ ನಾಟ್ಯ ಕಲಾವಿದೆಯಾಗಿದ್ದು, ಹಲವಾರು ಪ್ರಶಸ್ತಿ ಮತ್ತು ಸನ್ಮಾನಕ್ಕೆ ಭಾಜನರಾಗಿದ್ದರು ಎಂದು ಸ್ಮರಿಸಿದ್ದಾರೆ.

ಹೃದಯಪೂರ್ವಕ ಅಭಿನಂದನೆಗಳು



ಶ್ರೀಮತಿ ಅಕ್ಕಮಹಾದೇವಿ ಶಿವಕುಮಾರ್
ಸದಸ್ಯರು
ನೇರ್ಲಿಗಿ ಗ್ರಾಮ ಪಂಚಾಯಿತಿ

ಶ್ರೀ ಚನ್ನಬಸಪ್ಪ
ಸದಸ್ಯರು
ಮೆಳ್ಳೇಕಟ್ಟೆ ಗ್ರಾಮ ಪಂಚಾಯಿತಿ

ಶ್ರೀಮತಿ ಸಾವಿತ್ರಮ್ಮ
ಸದಸ್ಯರು
ಸಿದ್ದನೂರು ಗ್ರಾಮ ಪಂಚಾಯಿತಿ



ಶ್ರೀ ಬಾತಿ ವೀರೇಶ್
ಸದಸ್ಯರು
ದೊಡ್ಡಬಾತಿ ಗ್ರಾಮ ಪಂಚಾಯಿತಿ

ಶ್ರೀಮತಿ ರೂಪಾಶ್ರೀ ಧನಂಜಯ ಕಡ್ಲೇಬಾಳ್
ಸದಸ್ಯರು
ಹೊಸ ಕಡ್ಲೇಬಾಳು ಗ್ರಾಮ ಪಂಚಾಯಿತಿ

ಶ್ರೀಮತಿ ವಿನುತ ಎಸ್.ಎ. ಸುರೇಶ್
ಸದಸ್ಯರು, ಶಿರಮಗೊಂಡನಹಳ್ಳಿ ಗ್ರಾಮ ಪಂಚಾಯಿತಿ

ಗ್ರಾಮ ಪಂಚಾಯ್ತಿ ಚುನಾವಣೆಯಲ್ಲಿ ವಿಜಯಶಾಲಿಗಳಾದ ನಮ್ಮ ಬಂಧುಗಳಿಗೆ ಹೃದಯಪೂರ್ವಕ ಅಭಿನಂದನೆಗಳು. ಇವರುಗಳ ಗ್ರಾ.ಪಂ. ಅಧಿಕಾರವಧಿಯಲ್ಲಿ ಹೆಚ್ಚಿನ ಅಭಿವೃದ್ಧಿ ಕಾರ್ಯಗಳು ನೆರವೇರಲಿ ಎಂದು ಆಶಿಸುತ್ತೇವೆ.



ಶ್ರೀ ಸಂಕೋಳ್ ಶಿವಪ್ಪ ಮತ್ತು ಶ್ರೀಮತಿ ಶಾಂತಮ್ಮ

◆ ಸಂಕೋಳ್ ಚಂದ್ರಶೇಖರ್ ◆ ಸಂಕೋಳ್ ಲಿಂಗರಾಜ್
◆ ಸಂಕೋಳ್ ಎಂಟರ್‌ಪ್ರೈಸಸ್ ◆ ಶ್ರೀ ನಾರದಮುನಿ ಟ್ರೇಡರ್ಸ್
ಸ್ಟೀಲ್ ಮತ್ತು ಸಿಮೆಂಟ್ ಮಾರಾಟಗಾರರು, ಶಾಮನೂರು.

ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 5.1.2021ರ ಮಂಗಳವಾರ ನಿಧನರಾದ ಕೆ.ಆರ್. ಮಾರ್ಕೆಟ್‌ನ ಶ್ರೀ ಸಾಕ್ಷಿ ವರಸಿದ್ಧಿ ವಿನಾಯಕ ಸ್ವಾಮಿ ದೇವಸ್ಥಾನದ ಟ್ರಸ್ಟ್ ಕಮಿಟಿಯ ಗೌರವ ಅಧ್ಯಕ್ಷರಾಗಿದ್ದ

ಶ್ರೀ ಎಸ್.ಎನ್. ಕೃಷ್ಣೋಜಿರಾವ್ (ಬಿರ್ಜೆ)

ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ. ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

ಶ್ರೀ ಸಾಕ್ಷಿ ವರಸಿದ್ಧಿ ವಿನಾಯಕ ಸ್ವಾಮಿ ದೇವಸ್ಥಾನದ ಸೇವಾ ಸಮಿತಿ ಟ್ರಸ್ಟ್, ಕಮಿಟಿ (ರಿ.)

ಉಪಾಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು, ಕಾರ್ಯದರ್ಶಿಗಳು, ಖಜಾಂಚಿ, ಎಲ್ಲಾ ಪದಾಧಿಕಾರಿಗಳು, ಸದಸ್ಯರು ಹಾಗೂ ಅರ್ಚಕರು ಮತ್ತು ಭಕ್ತ ವೃಂದ, ಕೆ.ಆರ್. ಮಾರ್ಕೆಟ್, ದಾವಣಗೆರೆ.

ಅರುಣ ಎಂಟರ್‌ಪ್ರೈಸಸ್

KEY SHOP
ARUNA ENTERPRISES

ಪ್ರಾರಂಭೋತ್ಸವ

ದಿನಾಂಕ: 08-01-2021ರ ಶುಕ್ರವಾರದಂದು ನವೀಕರಿಸಿದ ಅಂಗಡಿಯ ಪ್ರಾರಂಭೋತ್ಸವಕ್ಕೆ ಎಲ್ಲಾರಿಗೂ ಆತ್ಮೀಯ ಸ್ವಾಗತ

*Our Services :*
*Home Keys, Scooter/Bike Keys*
*Sensor Car Keys with Remote*

ಸ್ಥಳ:
ರೇಣುಕಾ ಮಂದಿರದ ಎದುರು, ಪಿ.ಬಿ.ರಸ್ತೆ, ದಾವಣಗೆರೆ.
ಮೊ: 98444 07167

Note: Please Provide the Authenticated Documents Required for the Service



॥ ಶ್ರೀ ವಿಶ್ವಕರ್ಮ ಪರಬ್ರಹ್ಮಣೇ ನಮಃ॥ ॥ ಶ್ರೀ ಕಲ್ಲೇಶ್ವರ ಸ್ವಾಮಿ ಪ್ರಸನ್ನ॥

ವೈಕುಂಠ ಸಮಾರಾಧನೆ ಆಹ್ವಾನ

ದೇವರ ಬೆಳಕೆರೆ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲಾ ವಾಸಿ

ದಿ॥ ಶ್ರೀ ಹನುಮಂತ ಆಚಾರ್ಯ ಇವರ ಜೇಷ್ಠ ಪುತ್ರ ಶ್ರೀ ದೇವೇಂದ್ರ ಆಚಾರ್ಯ ಮತ್ತು ಸಹೋದರರು ಮಾಡುವ ವಿಜ್ಞಾಪನೆಗಳು.

ದಿನಾಂಕ : 28.12.2020ನೇ ಸೋಮವಾರ ಬೆಳಿಗ್ಗೆ 5.30 ಕ್ಕೆ ನನ್ನ ಸಹೋದರನಾದ

ಶ್ರೀ ಮಂಜುನಾಥ ಆಚಾರ್ಯ

ಸಂಸ್ಥಾಪಕರು : ಶ್ರೀ ಶಿರಡಿ ಸಾಯಿಬಾಬಾ ಸೇವಾ ಟ್ರಸ್ಟ್ (ರಿ.) ಇವರು ವಿಶ್ವಕರ್ಮ ಸಾಯುಜ್ಯ ಹೊಂದಿರುತ್ತಾರೆ. ಆದ ಪ್ರಯುಕ್ತ

'ವಿಶ್ವಕರ್ಮ (ವೈಕುಂಠ) ಸಮಾರಾಧನೆ'ಯನ್ನು

ದಿನಾಂಕ : 9.01.2021ನೇ ಶನಿವಾರದಂದು ಮಧ್ಯಾಹ್ನ 12.00 ಗಂಟೆಗೆ ಶಿರಡಿ ಸಾಯಿಬಾಬಾ ಸಮುದಾಯ ಭವನ, ಜಯನಗರ, ಐಟೆಕ್ ಹಾಸ್ಪಿಟಲ್ ರೋಡ್, ದಾವಣಗೆರೆ. ಇಲ್ಲಿ ಆಚರಿಸಲಾಗುತ್ತದೆ. ಕಾರಣ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಶ್ರೀ ದೇವೇಂದ್ರ ಆಚಾರ್ಯ ಹಾಗೂ ಶ್ರೀ ಮಂಜುನಾಥ ಆಚಾರ್ಯ ಅವರ ಧರ್ಮಪತ್ನಿ ಭಾಗ್ಯಮ್ಮ ಮತ್ತು ಮಕ್ಕಳು ಹಾಗೂ ಅಳಿಯಂದಿರು ಮತ್ತು ಬಂಧುಗಳು, ಸಮಾಜ ಬಾಂಧವರು. ಫೋ. : 9821445075, 8425044183

ವಿ.ಸೂ. ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5. Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte